# ಶಿರಿಯಾರ ಮಂಜುನಾಯ್ಕ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

# ಬಡಗುತಿಟ್ಟು ಯಕ್ಷಗಾನದ ಧ್ರುವತಾರೆ
# ಶಿರಿಯಾರ ಮಂಜು ನಾಯ್ಕರು

(ಜೀವನ - ಪರಿಚಯ)

ಸಂಪಾದಕ:
**ಪ್ರೊ. ಶ್ರೀಧರ ಉಪ್ಪೂರ**

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

**Shiriyara Manjunaika :** Edited by **Sridhara Uppara** and Published by : **B.N. Paraddi,** Registrar, Karnataka Janapada and Yakshagana Academy, Kannada Bhavana, J.C. Road, Bangalore - 560 002, Phone : 080-22215509

Pages : VII + 68

1st Edition : 2008

Price : Rs. 50/-

Copies : 1000

© ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಬೆಲೆ : ರೂ. **50/-**

ಪ್ರಧಾನ ಸಂಪಾದಕರು : **ಕೆರೆಮನೆ ಶಂಭುಹೆಗಡೆ**

ಪ್ರಕಾಶಕರು : **ಬಿ. ಎನ್. ಪರಡ್ಡಿ**
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – 560 002
ದೂರವಾಣಿ : 080–22215509

ಮುದ್ರಕರು : **ರಶ್ಮಿ ಟೈಪೋಸೆಟ್**
ಸುಧಾಮನಗರ
ಬೆಂಗಳೂರು – 560 027
ದೂರವಾಣಿ : 9901916581

# ಅಧ್ಯಕ್ಷರ ಮಾತು

ಪಡುವಲಪಾಯದ ಬಡಗುತಿಟ್ಟು ಯಕ್ಷಗಾನದ ಜನಪ್ರಿಯ ಮತ್ತು ಸಮರ್ಥ ವೇಷದಾರಿಗಳಲ್ಲೊಬ್ಬರಾದ ಶಿರಿಯಾರ ಮಂಜುನಾಯ್ಕರ ಬದುಕಿನ ವಿವರಗಳುಳ್ಳ ಗ್ರಂಥವೊಂದು ಅಕಾಡೆಮಿಯಿಂದ ಬೆಳಕು ಕಾಣುತ್ತಿರುವುದು ಒಂದು ಯೋಗಾಯೋಗವೇ ಅದಕ್ಕೆ ಒದಗಿದ ಆಲೋಚನೆಗಳನ್ನೆಲ್ಲ ಒಮ್ಮೆ ಇಲ್ಲಿ ಬರಮಾಡಿಕೊಳ್ಳುವುದು ಸೂಕ್ತವೆಂದು ಭಾವಿಸುತ್ತೇನೆ.

ಶಿರಿಯಾರ ಮಂಜುನಾಯ್ಕರು ತನ್ನ ಕಾಲದ ಒಬ್ಬ ಒಳ್ಳೆಯ ವೇಷಧಾರಿಗಳಾಗಿದ್ದರು ಎಂಬುದಕ್ಕೆ ಅನೇಕ ಕಾರಣಗಳು ಒದಗುತ್ತವೆ. ಚಾಲ್ತಿಯಲ್ಲಿ ಇದ್ದ ಎಲ್ಲ ಪೌರಾಣಿಕ ಪ್ರಸಂಗಗಳ ಬಗ್ಗೆ, ಪದ್ಯಗಳ ಬಗ್ಗೆ, ಪಾತ್ರಗಳ ನಡೆಯ ವಿಷಯದಲ್ಲಿ ಅವರು ಒಳ್ಳೆಯ ತಿಳುವಳಿಕೆ ಇದ್ದವರಾಗಿದ್ದರು. ವೇಷಗಾರಿಕೆ, ಕುಣಿತ ಹಾಗೂ ಮಾತುಗಾರಿಕೆಯಲ್ಲಿ ಅವರು ಪರಿಣತರೇ ಆಗಿದ್ದರೂ ನೃತ್ಯದ ವಿಷಯದಲ್ಲಿ ಅವರು ಹೆಚ್ಚು ಮೈನೋಯಿಸಿಕೊಳ್ಳುವವರಲ್ಲವೆಂಬ ಪ್ರತೀತಿ ಸಾರ್ವತ್ರಿಕವಾಗಿಯೇ ಇತ್ತು. ಆದರೆ ಒಳ್ಳೆಯ ಭಾಷೆ ಅವರು ನಿರ್ವಹಿಸುವ ಪಾತ್ರಗಳ ಜೀವಾಳವಾಗಿತ್ತು. ಸಣ್ಣ --ಸಣ್ಣ ವಾಕ್ಯಗಳ ಸರಳವಾದ ಸುಲಲಿತವಾದ ಪರಿಷ್ಕಾರಗೊಂಡ ಭಾಷೆಯಿಂದ ಎಂಥ ಗಹನವಾದ ಅಲೌಕಿಕ ವಿಚಾರಗಳನ್ನೂ ಅವರು ಸರಾಗವಾಗಿ ವಿವರಿಸಿ ಪಾತ್ರಕ್ಕೆ ಪ್ರದರ್ಶನಕ್ಕೆ ಕಳೆಕಟ್ಟುತ್ತಿದ್ದರು. ಅನಗತ್ಯವಾಗಿ ತರ್ಕ, ಕುತರ್ಕಕ್ಕೆಲ್ಲ ಅವರು ಮುಂದಾಗುತ್ತಿರಲಿಲ್ಲ. ಹಾಗೆಂದು ಎದುರು ವೇಷಧಾರಿ ಅಂಥ ಸಂದರ್ಭವನ್ನು ಸೃಷ್ಟಿಸಿದರೆ ಇವರು ಬಿಡುತ್ತಿರಲಿಲ್ಲ. ಅಂಥ ಹೊಯ್ಲಿಗೆ ಸಿಕ್ಕಿ ಪಾತ್ರದ ಗಾಂಭೀರ್ಯವನ್ನು ಕೆಡಿಸುವ ಜಾಯಮಾನದವರು ಎಂದೂ ಆಗಿರಲಿಲ್ಲ.

ತಾನು ನಿರ್ವಹಿಸುತ್ತಿದ್ದ ಬಹುತೇಕ ಪಾತ್ರಗಳ ಹಿನ್ನೆಲೆಗಳನ್ನೂ ಪದ್ಯಗಳನ್ನೂ ಸಂದರ್ಭಗಳನ್ನೂ ಅವರು ಚೆನ್ನಾಗಿ ಅರಿತಿರುತ್ತಿದ್ದರಲ್ಲದೆ ಅದನ್ನು ಅನುಸರಿಸುತ್ತಿದ್ದರು. ಎದುರು ಪಾತ್ರಧಾರಿಯಿಂದಲೂ ಅವನ್ನು ನಿರೀಕ್ಷಿಸುತ್ತಿದ್ದರು. ಒಮ್ಮೆ ಎದುರು ಪಾತ್ರಧಾರಿ ಮರೆತರೂ ಜಾಣತನದಿಂದ ಅದನ್ನು ನೆನಪಿಸಿಕೊಟ್ಟು ಪ್ರದರ್ಶನದ ಸುಗಮ ನಡಿಗೆ ಅವರು ನೆರವಾಗುತ್ತಿದ್ದರು. ಕೆರೆಮನೆಯ ನಮ್ಮ ತಂಡ ಸಾಲಿಗ್ರಾಮದ ಮೇಳದಲ್ಲಿದ್ದಾಗ ಅವರೂ ಅಲ್ಲಿ ಕಲಾವಿದರಾಗಿದ್ದರು. ಅವರೊಟ್ಟಿಗೆ ನಾವು ಮಾಡಿದ ತಿರುಗಾಗಿ ಒಂದು ಒಳ್ಳೆಯ ಅನುಭವ. ನನ್ನ ಅಣ್ಣ ಕೆರೆಮನೆ ಮಹಾಬಲಹೆಗಡೆಯವರೊಂದಿಗಾಗಲೀ ತಮ್ಮ ಗಜಾನನಹೆಗಡೆಯೊಂದಿಗಾಗಲೀ ನನ್ನೊಂದಿಗಾಗಲೀ ಒಳ್ಳೆಯ ಬಾಂಧವ್ಯ ಹೊಂದಿದ್ದರು. ಚಂದ್ರಹಾಸ ಚರಿತ್ರೆಯಲ್ಲಿ ಅವರ ಚಂದ್ರಹಾಸ ನನ್ನ ಮದನ, ಕೃಷ್ಣಾರ್ಜುನ ಕಾಳಗದಲ್ಲಿ ಅವರ ಅರ್ಜುನ, ನನ್ನ ಕೃಷ್ಣ ನನ್ನ ಸುಭದ್ರೆ, ಅವರ ಅರ್ಜುನ ಇವೆಲ್ಲ ಹೆಚ್ಚು ಜನಪ್ರಿಯವಾಗಿದ್ದವು.

ಅವರ ಸಾವೂ ಆಕಸ್ಮಿಕ ಮತ್ತು ಅವಿಸ್ಮರಣೀಯವಾದುದು. ಮಣಿಪಾಲದ ಗೋಲ್ಡನ್ ಜೂಬಿಲೀ ಭವನದಲ್ಲಿ ಭೀಷ್ಮ ವಿಜಯದ ಪರಶುರಾಮನ ಪಾತ್ರ ಧರಿಸಿಕೊಂಡೇ ರಂಗಸ್ಥಳದಲ್ಲಿ ಸಹ ಕಲಾವಿದನ ತೊಡೆಯ ಮೇಲೇ ಜೀವ ಬಿಟ್ಟರು. ಸಾವು ದುರಂತವೇ ಆದರೂ ಒಬ್ಬ ಕಲಾವಿದ

ಬಯಸಬಹುದಾದ ಸಾವು ಅದು. ಎಲ್ಲಾ ಕಲಾವಿದರಿಗೂ ಇಂಥ ಸಾವು ಒದಗಲಾರದು. ಅದಕ್ಕೂ ಪುಣ್ಯ ಮಾಡಿಬರಬೇಕು.

ಇಂಥ ಕಲಾವಿದನ ಜೀವಿತಾವಧಿಯಲ್ಲಿ ಯಾವ ಪ್ರಶಸ್ತಿ ಪುರಸ್ಕಾರಗಳೂ ಸಲ್ಲಲಿಲ್ಲ ಎಂಬುದು ನೋವಿನ ವಿಷಯ. ಇಂಥ ಮಹಾನ್ ಕಲಾವಿದ ಮಂಜುನಾಯ್ಕ ಅವರ ಆತ್ಮಕ್ಕೆ ಗೌರವ ಪೂರ್ವಕ ಶ್ರದ್ಧಾಂಜಲಿ.

ಇಂಥ ಗ್ರಂಥವೊಂದನ್ನು ಆಯತಹೊತ್ತಿನಲ್ಲಿ ಸಿದ್ಧಪಡಿಸಿಕೊಟ್ಟ ಕಿರಿಯ ಮಿತ್ರರಾದ ಶ್ರೀ ಉಪ್ಪೂರರಿಗೂ ಗ್ರಂಥದ ಎಲ್ಲ ಲೇಖಕರಿಗೂ ಪ್ರಕಟಣೆಯ ಆಲೋಚನೆಯನ್ನು ಬೆಂಬಲಿಸಿದ ಸದಸ್ಯಮಿತ್ರರಾದ ಶ್ರೀ ಐರೋಡಿ ಗೋವಿಂದಪ್ಪನವರಿಗೂ, ಶ್ರೀ ಅರಾಟೆ ಮಂಜುನಾಥ ಅವರಿಗೂ ಸಹಕರಿಸಿದ ಎಲ್ಲ ಸದಸ್ಯ ಸಹೃದಯರಿಗೂ ನಾನು ವೈಯ್ಯಕ್ತಿಕವಾಗಿಯೂ ಋಣಿ. ಈ ಪುಸ್ತಕ ಮುದ್ರಣ ಕಾರ್ಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ ಅಕಾಡೆಮಿಯು ರಿಜಿಸ್ಟ್ರಾರ್‌ರಾದ ಶ್ರೀ ಬಿ.ಎನ್. ಪರಡ್ಡಿ ಮತ್ತು ಸಿಬ್ಬಂದಿ ವರ್ಗದವರಿಗೆ ಹಾಗೂ ಪುಸ್ತಕ ಮುದ್ರಿಸಿದ ರಶ್ಮಿ ಟೈಪೋಸೆಟ್‌ರವರಿಗೂ ಈ ಸಂದರ್ಭದಲ್ಲಿ ತನ್ನ ಕೃತಜ್ಞತೆ ಸಲ್ಲಿಸುತ್ತದೆ.

ಶಿರಿಯಾರ ಮಂಜುನಾಯ್ಕರ ಹಲವು ಪಾತ್ರಗಳನ್ನು ರಂಗದಲ್ಲಿ ಕಂಡು ಅನುಭವಿಸಿ ಸಂತೋಷಪಟ್ಟ ಅನೇಕಾನೇಕ ಅಭಿಮಾನಿಗಳು ಒಡನಾಡಿಗಳು ಸಹಕಲಾವಿದರು ಈ ಗ್ರಂಥವನ್ನು ಆತ್ಮೀಯವಾದ ಗೌರವಾದರಗಳಿಂದ ಬರಮಾಡಿಕೊಳ್ಳಬಹುದೆಂದು ನಂಬಿದ್ದೇನೆ.

ವಂದನೆಗಳು,

ಕೆರೆಮನೆ ಶಂಭುಹೆಗಡೆ
ಅಧ್ಯಕ್ಷರು
ಕ.ಜಾ.ಯ ಅಕಾಡೆಮಿ, ಬೆಂಗಳೂರು

# ಮುನ್ನುಡಿ

ಈಗ ಎರಡು ವರ್ಷಗಳ ಹಿಂದೆ ಪ್ರಸಿದ್ಧ ಯಕ್ಷಗಾನ ಕಲಾವಿದರಾದ ಆರಾಟೆ ಮಂಜುನಾಥರು ದಿ. ಶಿರಿಯಾರ ಮಂಜು ನಾಯ್ಕ (1927 – 1982)ರ ಬಗ್ಗೆ ಒಂದು ಸ್ಮರಣ ಸಂಚಿಕೆಯನ್ನು ಸಿದ್ಧಪಡಿಸಿಕೊಡಬೇಕೆಂದು ನನ್ನ ಹತ್ತಿರ ಕೆಲವು ಲೇಖನಗಳನ್ನು ತಂದುಕೊಟ್ಟರು. ಅನಂತರ ಅವರಿಗೆ ಸಾಕಷ್ಟು ಸಂಪನ್ಮೂಲಗಳು ಒದಗದೇ ಇದ್ದುದರಿಂದ ಆ ಕೆಲಸವನ್ನು ಹೆಚ್ಚು ಅದ್ದೂರಿಯಾಗಿ ಮುಂದುವರಿಸಲು ಸಾಧ್ಯವಾಗಲಿಲ್ಲ. ಈಗ ಅವರ ಪ್ರಯತ್ನದಿಂದಲೇ ಈ ಪುಸ್ತಕ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಪ್ರಕಟವಾಗುವ ಸುಯೋಗ ಒದಗಿಬಂದಿದೆ. ಇದಕ್ಕಾಗಿ ನಾನು ಅವರಿಗೂ, ಪುಸ್ತಕ ಪ್ರಕಟವಾಗಲು ಅವಕಾಶ ಮಾಡಿಕೊಟ್ಟ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ರಿಜಿಸ್ಟ್ರಾರ್ ಮತ್ತು ಸಂಬಂಧಪಟ್ಟ ಇತರರಿಗೂ ಕೃತಜ್ಞತೆ ಸಲ್ಲಿಸುತ್ತಿದ್ದೇನೆ.

ಏಕೆಂದರೆ ನಾನು ಬಾಲ್ಯದಿಂದಲೇ ಶ್ರೀ ಶಿರಿಯಾರ ಮಂಜು ನಾಯ್ಕರ ವೇಷಗಳನ್ನು ಬಡಗುತಿಟ್ಟು ಯಕ್ಷಗಾನದಲ್ಲಿ ನೋಡುತ್ತಾ ಬಂದವನು. ಅವರ ಬಗ್ಗೆ ವಿಶೇಷವಾದ ಗೌರವ ಮತ್ತು ಕುತೂಹಲವನ್ನು ಇಟ್ಟುಕೊಂಡವನು. ಅವರ ಭರತ, ಬಾಲ ಭೀಷ್ಮ , ಚಂದ್ರಹಾಸ, ಶ್ವೇತ ಕುಮಾರ, ಪುಷ್ಪವೇಣಿ ಸ್ವಯಂವರದ ಶ್ರುತ ಕೀರ್ತಿ, ಕೃಷ್ಣ ಪರಶುರಾಮ ಮೊದಲಾದ ವೇಷಗಳು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿವೆ. ಅಂಥ ಶ್ರೇಷ್ಠ ಮಟ್ಟದ ಕಲಾವಿದರ ಬಗ್ಗೆ ಒಂದು ಪುಸ್ತಕ ಪ್ರಕಟವಾಗುತ್ತದೆಂಬ ಕಾರಣಕ್ಕಾಗಿ ನನಗೆ ಸಂತೋಷವಾಗಿತ್ತು. ಶಿರಿಯಾರ ಮಂಜು ನಾಯ್ಕರ ಬಗ್ಗೆ ಅನೇಕ ಹಿರಿಯ ಕಲಾವಿದರು, ಯಕ್ಷಗಾನದ ಅಭಿಮಾನಿಗಳು, ವಿಮರ್ಶಕರು ತಮ್ಮ ಅಭಿಪ್ರಾಯಗಳನ್ನು ಬರೆದು ಕಳಿಸಿದ್ದು ಇವೆಲ್ಲ ಪ್ರಮುಖವಾದ ದಾಖಲೆಗಳೆಂದು ನಾನು ಭಾವಿಸಿದ್ದೆ. ಈಗ ಪುಸ್ತಕ ರೂಪದಲ್ಲಿ ಇದು ಪ್ರಕಟವಾಗುತ್ತಿರುವುದರಿಂದ ಮುಂದಿನ ಯಕ್ಷಗಾನ ಅಭ್ಯಾಸಿಗಳಿಗೆ ಇದೊಂದು ಪ್ರಮುಖ ಆಕರ ಗ್ರಂಥವಾಗುತ್ತದೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಇದರಲ್ಲಿರುವ ಲೇಖನಗಳನ್ನೆಲ್ಲಾ ಸಂಗ್ರಹಿಸಿರುವುದು ಶ್ರೀ ಅರಾಟೆ ಮಂಜುನಾಥರು. ಇದನ್ನು ಬೇರೆ ಆಕರಗಳ ಹಿನ್ನೆಲೆಯಲ್ಲಿ ಪುಸ್ತಕರೂಪಕ್ಕೆ ತಂದು ಓದುಗರ ಮುಂದಿಡುವ ಕೆಲಸವನ್ನು ಮಾತ್ರ ನಾನು ಮಾಡಿದ್ದೇನೆ. ದಿ. ಶಿರಿಯಾರ ಮಂಜು ನಾಯ್ಕರಿಗೆ ನಾನು ಸಲ್ಲಿಸುವ ಗೌರವದ ಕಾಣಿಕೆ ಇದೆಂದು ಭಾವಿಸುತ್ತೇನೆ. ಇದನ್ನು ಪ್ರಕಟಿಸುತ್ತಿರುವ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ರಿಜಿಸ್ಟ್ರಾರ್ ಮತ್ತು ಇತರ ಸಂಬಂಧಪಟ್ಟವರಿಗೆ ಮತ್ತೊಮ್ಮೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಶ್ರೀಧರ ಉಪ್ಪೂರ**

# ಪರಿವಿಡಿ

ಪುಟ

1. ಅಧ್ಯಕ್ಷರ ನುಡಿ – ಕೆರೆಮನೆ ಶಂಭು ಹೆಗಡೆ – III
2. ಮುನ್ನುಡಿ – ಪ್ರೊ. ಶ್ರೀಧರ ಉಪ್ಪಾರ – V
3. ಬಡಗುತಿಟ್ಟು ಯಕ್ಷಗಾನದ ಧ್ರುವತಾರೆ ಶಿರಿಯಾರ ಮಂಜುನಾಯ್ಕರು – 1–5
4. ಸಾಲಿಗ್ರಾಮ ಮೇಳದಲ್ಲಿ – 6–12
5. ಶಿರಿಯಾರದ ಕಲಾವಿದರು – 13–18
6. ಶಿರಿಯಾರ ಪ್ರಭೆ – 19–22


## ನೆನಪುಗಳು

7. ಕೊಳ್ಕೆಬೈಲು ಯಕ್ಷಗಾನ ಕಲಾವಿದದ್ವಯರು – 25–26
8. ವ್ಯಾಕರಣ ಶುದ್ಧ ಶೈಲಿಯ ಪಾತ್ರಧಾರಿ ಶ್ರೀ ಶಿರಿಯಾರ ಮಂಜು ನಾಯ್ಕರು – 27–29
9. ಯಕ್ಷಗಾನ ಸಿರಿ ಶಿರಿಯಾರ ಮಂಜು – 30–31
10. ಕೆಂಕಿನ ಹೆಣ್ಣು – ಬಡಗಿನ ಗಂಡು – 32–34
11. ಶಿರಿಯಾರ ಮಂಜುನಾಯ್ಕರು – 35–40
12. ಮೋಡಿಗಾರ ಶಿರಿಯಾರ ಮಂಜು – 41–44
13. ಸಿರಿಕಂಠದ ದಿಗ್ಗಜ ಶಿರಿಯಾರ ಮಂಜುನಾಯ್ಕ – 45–46
14. ಯಕ್ಷಗಾನದ ಯುಗ ಪರ್ವತಕ ಶಿರಿಯಾರ ಮಂಜುನಾಯ್ಕ – 47–50
15. ರಂಗಸ್ಥಳದ ಸಂಜೀವನ ಶಿರಿಯಾರ ಮಂಜುನಾಯ್ಕ – 51–53
16. ಶಿರಿಯಾರ ಮಂಜುನಾಯ್ಕರ ಬಗ್ಗೆ – 54–55
17. ಯಕ್ಷಗಾನದ "ಶಿರಿಯಾರದ ಮಂಜು" – 56–57
18. ಕಂಚಿನ ಕಂಠದ ಶಿರಿಯಾರ ಮಂಜು – 58–60
19. ಸಾಲಿಗ್ರಾಮ ಮೇಳದಲ್ಲಿ ಮಿಂಚಿದ "ಶಿರಿಯಾರರ ಪಾತ್ರಗಳು" – 61–63
20. ಸಿರಿ ಆರದ ಮಂಜು – 64–65
21. ಶಿರಿಯಾರ ಮಂಜು – 66–67

# ಬಡಗುತಿಟ್ಟು ಯಕ್ಷಗಾನದ ಧ್ರುವತಾರೆ ಶಿರಿಯಾರ ಮಂಜು ನಾಯ್ಕರು

ಪ್ರೊ. ಶ್ರೀಧರ ಉಪ್ಪೂರ

ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಯಕ್ಷಗಾನ ರಂಗ ಕಲೆ ಬೇರೆ ಬೇರೆ ರೂಪಗಳಲ್ಲಿ ಪ್ರಕಟವಾಗಿದ್ದರೂ, ಕರಾವಳಿ ಜಿಲ್ಲೆಗಳಲ್ಲಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಜನಪ್ರಿಯವಾದ ಕಲೆಯಾಗಿ ಅಸ್ತಿತ್ವದಲ್ಲಿದೆ. ಇದರಲ್ಲಿ ತೆಂಕುತಿಟ್ಟು ಬಡಗುತಿಟ್ಟು ಎಂಬ ಭೇದಗಳನ್ನು ಗುರುತಿಸುವ ರೂಢಿಯಿದೆ. ಮಂಗಳೂರು ಪರಿಸರದಲ್ಲಿ ತೆಂಕುತಿಟ್ಟು ಯಕ್ಷಗಾನ ಪ್ರಚಲಿತವಿದ್ದರೆ ಉಡುಪಿಯ ಸುತ್ತಮುತ್ತ ಬಡಗುತಿಟ್ಟು. ಹೀಗೆಯೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಾಗಿರುವ ಪದ್ಧತಿಗೆ ಬಡಾ ಬಡಗುತಿಟ್ಟು ಎಂದು ಹೇಳುವುದುಂಟು. ಈ ತಿಟ್ಟುಗಳಿಗೆ ಅವುಗಳದೇ ಆದ ವೈಶಿಷ್ಟ್ಯಗಳಿವೆ. ಹಾಗೆಯೇ ಇವುಗಳು ಆಗಾಗ ಒಂದರೊಳಗೊಂದು ಹಾಸುಹೊಕ್ಕಾಗಿ ಸೇರಿಕೊಂಡು ಪರಸ್ಪರ ವಿನಿಮಯ ಮಾಡಿಕೊಳ್ಳುವುದುಂಟು. ಕಲಾವಿದರೂ ಕೂಡ ಒಂದು ತಿಟ್ಟಿನವರು ಇನ್ನೊಂದು ತಿಟ್ಟಿನ ಮೇಳಗಳಲ್ಲಿ ಕುಣಿದು, ಅಭಿನಯಿಸಿ ಜನಪ್ರಿಯರಾಗುವುದೂ ಇದೆ.

ಆದರೂ ಉಡುಪಿ ಜಿಲ್ಲೆಯ ಬಡಗುತಿಟ್ಟು ತನ್ನ ವಿಶಿಷ್ಟವಾದ ಕುಣಿತ ಮತ್ತು ವೇಷಗಾರಿಕೆಗೆ ಮೊದಲಿನಿಂದಲೂ ಪ್ರಸಿದ್ಧವಾಗಿದೆ. ದಿ. ಗಣಪತಿ ಪ್ರಭು, ಹಾರಾಡಿ ರಾಮ ಗಾಣಿಗ, ಕುಷ್ಟ ಗಾಣಿಗ, ವೀರಭದ್ರ ನಾಯಕ ಮೊದಲಾದವರು ಈ ಪ್ರದೇಶದ ಶ್ರೇಷ್ಠ ಕಲಾವಿದರು. ಇವರ ಸಾಲಿಗೇ ಸೇರುವ ಪ್ರಬುದ್ಧ ಕಲಾವಿದರೆಂದು ಸ್ಮರಿಸಲ್ಪಡುವವರು ದಿ. ಶಿರಿಯಾರದ ಮಂಜು ನಾಯ್ಕರು.

ಯಕ್ಷಗಾನ ಕಲಾವಿದರು ಕೆಲವೊಮ್ಮೆ ತಮ್ಮ ವಿಶಿಷ್ಟವಾದ ಕುಣಿತದ ಶೈಲಿಯಿಂದ, ಕೆಲವೊಮ್ಮೆ ಅಭಿನಯದಿಂದ, ಕೆಲವೊಮ್ಮೆ ಮಾತುಗಾರಿಕೆಯಿಂದ ಗಮನ ಸೆಳೆಯುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಕಲಾವಿದರು ಸಾಮಾನ್ಯವಾಗಿ ಅಭಿನಯದ ಮೂಲಕ ರಂಜಿಸುತ್ತಾರೆ.

ಮೇಲೆ ಹೇಳಿದ ಕುಷ್ಟ ಗಾಣಿಗ, ವೀರಭದ್ರ ನಾಯಕರು ತಮ್ಮ ವೈಶಿಷ್ಟ್ಯಪೂರ್ಣವಾದ ಕುಣಿತದ ಶೈಲಿಯಿಂದ ಜನರಿಗೆ ಮೋಡಿ ಮಾಡಿದವರು. ಕುಣಿತ ಬಲ್ಲವರಾದರೂ ಉತ್ತರ ಕನ್ನಡ ಜಿಲ್ಲೆಯ ಕಲಾವಿದರಲ್ಲಿ ಕೆರೆಮನೆ ಮಹಾಬಲ ಹೆಗಡೆಯವರು ತಮ್ಮ ಮಾತುಗಾರಿಕೆಯಿಂದ ಪ್ರಸಿದ್ಧರಾದವರು. ಇದೇ ರೀತಿ ಉಡುಪಿಯ ಪರಿಸರದ ಬಡಗುತಿಟ್ಟಿನಲ್ಲಿ ಹಾರಾಡಿ ರಾಮ ಗಾಣಿಗರೂ, ವೀರಭದ್ರ ನಾಯ್ಕರೂ ತಮ್ಮ ವಿಶಿಷ್ಟ ಶೈಲಿಯ ಮಾತುಗಾರಿಕೆಯಿಂದ ಜನಮನದಲ್ಲಿ ನೆಲೆಯೂರಿದವರು. ಇದಕ್ಕಿಂತ ಭಿನ್ನವಾದ ಮೋಡಿ ಮಾಡುವ ಮಾತಿನ ಶೈಲಿಯಿಂದ ಪ್ರಸಿದ್ಧರಾದವರು ಶಿರಿಯಾರ ಮಂಜುನಾಯ್ಕರು. ಪ್ರಸಿದ್ಧ ಮಾತುಗಾರರೂ, ಹರಿದಾಸರೂ ಆದ ಮಲ್ಪೆ ಶಂಕರ ನಾರಾಯಣ ಸಾಮಗರು ತಮ್ಮ ಅಭಿಪ್ರಾಯವನ್ನು ಹೇಳುತ್ತಾ ಹೀಗೆನ್ನುತ್ತಾರೆ. "ಬಿ. ವೀರಭದ್ರ ನಾಯ್ಕನಂತಹ ಕಲಾವಿದ ಯುಗಕ್ಕೊಬ್ಬ ಹುಟ್ಟ್ಯಾನು. ಬಾಬಣ್ಣ ಶಾನುಭಾಗರನ್ನು ಬಿಟ್ಟರೆ ಆ ಕಾಲದಲ್ಲಿ ಇವನಷ್ಟು ಚೆನ್ನಾಗಿ ಅರ್ಥ ಹೇಳುವವರಿದ್ದಿಲ್ಲ. ಇವನ ನಂತರದವನೆಂದರೆ ಶಿರಿಯಾರ ಮಂಜು ನಾಯ್ಕ." (ಆಶುವೈಭವ - ಯಕ್ಷಗಾನ ಕಲಾರಂಗ, ಉಡುಪಿ ಪುಟ 10)

ಶಿರಿಯಾರ ಉಡುಪಿ-ಕುಂದಾಪುರ ತಾಲೂಕುಗಳ ಗಡಿಯಲ್ಲಿರುವ ಉಡುಪಿ ತಾಲೂಕಿಗೆ ಸೇರುವ ಗ್ರಾಮ. ಹಿಂದುಳಿದ ಊರೆಂದರೂ ಸಲ್ಲುತ್ತದೆ. ಭತ್ತದ ಬೇಸಾಯವೇ ಜನರ ಪ್ರಮುಖ ಕಸುಬು. ಆ ದಿನಗಳಲ್ಲಿ ಬ್ರಾಹ್ಮಣ ಹಾಗೂ ಬಂಟರನ್ನು ಬಿಟ್ಟರೆ ಉಳಿದವರು ಸಣ್ಣ ಹಾಗೂ ಅತಿಸಣ್ಣ ರೈತರು ಅಥವಾ ಕೃಷಿ ಕಾರ್ಮಿಕರು. ಮೊಗವೀರ ಸಮಾಜಕ್ಕೆ ಸೇರಿದ ಅಂತಹ ಒಂದು ಕುಟುಂಬದಲ್ಲಿ 1927ರಲ್ಲಿ ಮಂಜು ನಾಯ್ಕರ ಜನನವಾಯಿತು. ತಂದೆ ವೆಂಕಟ ನಾಯ್ಕ, ತಾಯಿ ಮುತ್ತು. ನಾಲ್ವರು ಸಹೋದರಿಯರು ಮತ್ತು ಇಬ್ಬರು ಸಹೋದರರು ಅವರ ಒಡಹುಟ್ಟಿದವರು. (ನಮ್ಮೂರ ಯಕ್ಷರು - ಕೆ. ಎಸ್. ಉಪಾಧ್ಯಾಯ. ಪುಟ 86)

ಮಂಜು ನಾಯ್ಕರು ಶಿರಿಯಾರದ ಪ್ರಾಥಮಿಕ ಶಾಲೆಯಲ್ಲಿ ಐದನೇ ತರಗತಿಯುವರೆಗೆ ವಿದ್ಯಾಭ್ಯಾಸ ಮಾಡಿ, ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತಗಳನ್ನು ಓದಿ ಜೀರ್ಣಿಸಿಕೊಂಡರು.

ಶಿರಿಯಾರದ ಬಣ್ಣದ (ರಾಕ್ಷಸ ಪಾತ್ರಧಾರಿ) ಸಂಜೀವನ ಅವರಿಂದ ಯಕ್ಷಗಾನದ ಕುಣಿತ, ಮಾತುಗಾರಿಕೆಗಳನ್ನು ಕಲಿತರು, ಇವರ ಇನ್ನೊಬ್ಬ ಗುರು ಆ ಕಾಲದ ಪ್ರಸಿದ್ಧ ಸ್ತ್ರೀ ಪಾತ್ರಧಾರಿ ಕೊಕ್ಕೈಬೈಲು ಶೀನ ನಾಯ್ಕರು. ಈ ಇಬ್ಬರು ಗುರುಗಳಿಂದ ಯಕ್ಷಗಾನ ಬಯಲಾಟದಲ್ಲಿ ವೇಷ ಮಾಡಲು ಸ್ಫೂರ್ತಿ ದೊರೆತು ತಮ್ಮ 13ನೆಯ ವಯಸ್ಸಿನಲ್ಲಿ ಸೌಕೂರು ಮೇಳಕ್ಕೆ ಸೇರಿದರು.

ದಕ್ಷಿಣ ಕನ್ನಡದಲ್ಲಿ ಇಂಥ ಯಕ್ಷಗಾನ ಮೇಳಗಳು ಯಾವುದಾದರೊಂದು ದೇವಸ್ಥಾನಕ್ಕೆ ಹೊಂದಿಕೊಂಡಿರುತ್ತವೆ. ಸೌಕೂರು, ಮಾರಣಕಟ್ಟೆ, ಮಂದಾರ್ತಿ, ಅಮೃತೇಶ್ವರಿ, ಪೆರ್ಡೂರು ಹೀಗೆ ಬೇರೆ ಬೇರೆ ಮೇಳಗಳು ಆಯಾ ಊರಿನ ದೇವರ ಹೆಸರಿನಲ್ಲಿ ಹರಕೆ ಹೊತ್ತ ಭಕ್ತರ, ಅಭಿಮಾನಿಗಳ ಊರಿಗೆ ಹೋಗಿ ರಾತ್ರಿಯಿಡೀ ಆಟವಾಡುತ್ತವೆ. ವರ್ಷದ ಆರು ತಿಂಗಳು ಅಂದರೆ ನವಂಬರದಿಂದ ಮೇ ತಿಂಗಳವರೆಗೆ ಹೀಗೆ ಪ್ರತೀದಿನ ಊರಿಂದ ಊರಿಗೆ 4-6 ಮೈಲು, ಕೆಲವೊಮ್ಮೆ 8-10 ಮೈಲು ನಡೆದು ಹೋಗಿ ರಾತ್ರಿಯಿಡೀ ಹರಕೆ ಆಟ ಆಡುತ್ತಿರುತ್ತಾರೆ.

ಮಂಜು ನಾಯ್ಕರು ಆರಂಭದ ತಿರುಗಾಟ ನಡೆಸಿದ ಸೌಕೂರು ಮೇಳದಲ್ಲಿ ಉಡುಪಿ ಬಸವ ಅವರ ಎರಡನೇ ವೇಷ ಹಾಗೂ ಕೊಕ್ಕರ್ಣೆ ನರಸಿಂಹ ಕಮ್ತಿ ಸ್ತ್ರೀವೇಷ ಅವರ ಒಡನಾಟದಲ್ಲಿ ಮಂಜು ಹಲವು ಸಣ್ಣಪುಟ್ಟ ವೇಷಗಳನ್ನು ಮಾಡಿ ತರಬೇತಿ ಪಡೆದರು. ಜತೆಗೆ ಮಾರ್ವಿ ಶ್ರೀನಿವಾಸ ಉಪ್ಪೂರ, ಮಾರ್ವಿ ರಾಮಕೃಷ್ಣ ಹೆಬ್ಬಾರ ಹಾಗೂ ಎಂ. ನಾರಣಪ್ಪ ಉಪ್ಪೂರರರಿಂದ ಭಾಗವತಿಕೆಯನ್ನು ಕೂಡ ಕಲಿತ ಮಂಜು ನಾಯ್ಕರು ಸ್ವತಃ ಭಾಗವತಿಕೆ ಮಾಡಬಲ್ಲವರಾದರು. ಆರಂಭದ ತಿರುಗಾಟಗಳಲ್ಲಿ ಸ್ತ್ರೀವೇಷ ಮಾಡಿದ್ದು ಕೂಡ ಇದೆ. ಸೌಕೂರು ಮೇಳದ ಬಳಿಕ ಮಂದರ್ತಿ ಮೇಳಕ್ಕೆ ಸೇರಿದಾಗ ಅಲ್ಲಿ ಹಾರಾಡಿ ರಾಮ ಗಾಣಿಗರ ಸಾಹಚರ್ಯ ದೊರೆಯಿತು. ಆಗ ಮಂಜು ಅಲ್ಲಿ ಮೂರನೇ ವೇಷ ಅಂದರೆ ಬಭ್ರುವಾಹನ, ಸುಧನ್ವ ಮುಂತಾದ ಪ್ರಧಾನ ವೇಷಗಳನ್ನು ಮಾಡತೊಡಗಿದರು. (ನೋಡಿ ನಮ್ಮೂರ ಯಕ್ಷರು, ಪುಟ 87)

ಯಕ್ಷಗಾನ ಬಯಲಾಟಗಳಲ್ಲಿ ಮುಖ್ಯ ವೇಷ ಮಾಡುವ ಕಲಾವಿದನಿಗೆ ಎರಡನೇ ವೇಷಧಾರಿ ಎನ್ನುತ್ತಾರೆ. ಈತ ಹೆಚ್ಚಾಗಿ ಕರ್ಣ, ಕೀಚಕ ಮುಂತಾದ ಪ್ರತಿ ನಾಯಕನ ಪಾತ್ರ ಮಾಡುವುದರಿಂದ ಕಥಾನಾಯಕ ಅಥವಾ ಕಥಾ ಪುರುಷನ ವೇಷ ಮಾಡುವವನಿಗೆ ಪುರುಷ ವೇಷಧಾರಿ ಎನ್ನುತ್ತಾರೆ. ಇವರಿಬ್ಬರ ಬಳಿಕ ಮೂರನೇ ವೇಷಧಾರಿ. (ಭಾಗವತನೇ ಮೊದಲನೇ ವೇಷಧಾರಿಯೆಂದೂ, ಆದ್ದರಿಂದಲೇ ಪ್ರಮುಖ ಪಾತ್ರಧಾರಿಗೆ ಎರಡನೇ ವೇಷಧಾರಿ ಎನ್ನುತ್ತಾರೆಂದೂ ಒಂದು ವಿವರಣೆಯಿದೆ.) ಪ್ರತಿಯೊಂದು ಪ್ರಸಂಗದಲ್ಲೂ ಎರಡನೇ ವೇಷ ಯಾವುದು, ಪುರುಷ ವೇಷ ಯಾವುದು, ಮೂರನೇ ವೇಷ ಯಾವುದು ಎಂದು ನಿರ್ದಿಷ್ಟವಾಗಿರುತ್ತದೆ. ಮೂರನೇ ವೇಷಧಾರಿ ಸಾಮಾನ್ಯವಾಗಿ ಪುಂಡು ವೇಷ (ತರುಣ) ಗಳಾದ ಬಭ್ರುವಾಹನ, ಕೃಷ್ಣ ಅಭಿಮನ್ಯು ಮುಂತಾದುವುಗಳನ್ನು ಮಾಡುತ್ತಾನೆ.

ಕೃಷ್ಣನ ಪಾತ್ರವನ್ನು ಕೆಲವೊಮ್ಮೆ ಸ್ತ್ರೀಪಾತ್ರಧಾರಿಗಳೇ ಮಾಡುತ್ತಾರೆ. ಆದರೆ ಮಂಜು ನಾಯ್ಕರ ಕೃಷ್ಣನ ಪಾತ್ರ ಅವರ ಉಳಿದೆಲ್ಲ ಪಾತ್ರಗಳಿಗಿಂತಲೂ ಹೆಚ್ಚು ಜನಪ್ರಿಯವಾಯಿತು. ಇದಕ್ಕೆ ಕಾರಣ ಅವರ "ಕಂಚಿನ ಕಂಠ" ನಿರರ್ಗಳವಾದ ಮಾತಿನ ಕೌಶಲ. ಆಗ ಮಂದಾರ್ತಿ

ಮೇಳದಲ್ಲಿ ಕೃಷ್ಣನ ಪಾತ್ರಕ್ಕೇ ಹೆಚ್ಚು ಅವಕಾಶವಿರುವ "ಶ್ರೀಕೃಷ್ಣ ಪಾರಿಜಾತ" "ಕೃಷ್ಣಾರ್ಜುನ ಕಾಳಗ" "ಜಾಂಬವತೀ ಕಲ್ಯಾಣ" ಮೊದಲಾದ ಪ್ರಸಂಗಗಳು ಮತ್ತೆ ಮತ್ತೆ ಪ್ರದರ್ಶಿಸಲ್ಪಟ್ಟವು. ಮಂಜು ನಾಯ್ಕರ ಕೃಷ್ಣನ ಪಾತ್ರವನ್ನು ನೋಡುವುದಕ್ಕಾಗಿಯೇ ಅವರ ಮಾತುಗಾರಿಕೆಯನ್ನು ಕೇಳುವುದಕ್ಕಾಗಿಯೇ ಜನರು ಆಟಕ್ಕೆ ಬರಲಾರಂಭಿಸಿದರು.

ಅನಂತರ ಅಮೃತೇಶ್ವರಿ ಮೇಳಕ್ಕೆ ಸೇರಿದರು. ಅಲ್ಲಿ ಆಗ ಮತ್ತೆ ಉಡುಪಿ ಬಸವ ಹಾಗೂ ಹಾರಾಡಿ ಕುಷ್ಟ ಗಾಣಿಗರು ಪ್ರಮುಖ ವೇಷಧಾರಿಗಳು. ಹಾರಾಡಿ ನಾರಾಯಣ ಗಾಣಿಗರು ಸ್ತ್ರೀವೇಷಧಾರಿ ಹಾಗೂ ಸಾಲಿಗ್ರಾಮ ಮಂಜುನಾಥಯ್ಯ ಹಾಸ್ಯ. ಸಣ್ಣ ಪ್ರಾಯದ ಇವರ ಪ್ರತಿಭೆ ಎಲ್ಲರಿಗೂ ಮೆಚ್ಚುಗೆಯಾಯಿತು. ಒಂದೆಡೆ ಪ್ರೇಕ್ಷಕರ ಶ್ಲಾಘನೆಯಾದರೆ, ಮತ್ತೊಂದೆಡೆ ಹಿರಿಯ ವೇಷಧಾರಿಗಳು ಮೆಚ್ಚಿ ಮನಸಾರೆ ಹರಸುತ್ತಿದ್ದರು. ಹಾರಾಡಿ ರಾಮ, ಹಾರಾಡಿ ಕುಷ್ಟ ಹಾಗೂ ವೀರಭದ್ರ ನಾಯಕರಂಥ ಘಟಾನುಘಟಿಗಳ ಎದುರಿಗೆ ವೇಷ ಮಾಡಬೇಕಾದಾಗ ಮಂಜು ನಾಯ್ಕರು ಹೆದರದೇ, ಕುಗ್ಗದೇ ತನ್ನ ಪಾಲಿನ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಹಾಗಾದ್ದರಿಂದಲೇ ಅವರು ಯಕ್ಷಗಾನ ಲೋಕದ ಹಿರಿಯರ ಸಾಲಿಗೆ ಸೇರಿದರು. ಹಾರಾಡಿ ರಾಮ, ಕುಷ್ಟ ವೀರಭದ್ರರು ಮೆರೆಯುತ್ತಿದ್ದಾಗಲೂ ತನ್ನ ಕೆಲವೊಂದು ಪಾತ್ರಗಳ ಬಗೆಗೆ ಮಂಜು ಅಷ್ಟೇ ಪ್ರಸಿದ್ಧಿಯನ್ನು ಪಡೆದಿದ್ದರು.

ಶಿರಿಯಾರ ಮಂಜು ಕೆಲವು ವರ್ಷ ಪೆರ್ಡೂರು ಮೇಳದ ಯಜಮಾನರಾಗಿದ್ದರು. ಗುಂಡ್ಮಿ ರಾಮಚಂದ್ರ ನಾವಡರು ಭಾಗವತರು. ಪೆರ್ಡೂರು ರಾಮ ಎರಡನೇ ವೇಷಧಾರಿ. ಮಾರ್ಗೋಳಿ ಗೋವಿಂದ ಸೇರೆಗಾರರ ಸ್ತ್ರೀವೇಷ ಹಾಗೂ ಹಾರಾಡಿ ಮಂಜುನಾಥ ಗಾಣಿಗ ಹಾಸ್ಯ. ಕಲಾವಿದರಿಗೆ ಮಾರ್ಗದರ್ಶಕರಾಗಿ ಅವರು ಮೇಳವನ್ನು ನಡೆಸಿದ ರೀತಿ ಅದಕ್ಕೊಂದು ಮಾದರಿಯಾಗಿತ್ತು. (ನೋಡಿ, ನಮ್ಮೂರ ಯಕ್ಷರು, ಪುಟ 88) 1956, 57, 58ನೇ ಇಸವಿಯಲ್ಲಿ ಮೂರು ವರ್ಷಗಳ ಕಾಲ ಮೇಳವನ್ನು ನಡೆಸಿದರೂ, ಯಜಮಾನಿಕೆ ಅವರಿಗೆ ಆರ್ಥಿಕ ಲಾಭವನ್ನು ತರಲಿಲ್ಲ. ಆದ್ದರಿಂದ ಮುಂದೆ ಕೆಲವು ವರ್ಷ ಮಾರಣಕಟ್ಟೆ ಹಾಗೂ ಅಮೃತೇಶ್ವರಿ ಮೇಳಗಳಲ್ಲಿ ಕೇವಲ ಕಲಾವಿದರಾಗಿಯೇ ಸೇವೆ ಸಲ್ಲಿಸಿದರು.

ಕೆಲವು ವರ್ಷಗಳ ಅನಂತರ ಕೊಲ್ಲೂರು ಮೇಳ ಡೇರೆ ಮೇಳವಾದಾಗ ಬಿ. ವೀರಭದ್ರ ನಾಯಕರ ಯಜಮಾನಿಕೆ ಜತೆಗೆ ಪಾಲುದಾರರಾಗುವ ಯೋಗ ಕೂಡ ಅವರಿಗೆ ಬಂದಿತ್ತು. ವೀರಭದ್ರ ನಾಯಕರು ತಮ್ಮ ಆತ್ಮಕಥೆಯಲ್ಲಿ ಹೀಗೆ ಬರೆಯುತ್ತಾರೆ. "ಮುಖ್ಯ ವೇಷಧಾರಿಗಳು ಐದು ಜನ ಕಂಪೆನಿ ಮಾಡಿ, ನಷ್ಟ ಆಗುವುದಿಲ್ಲ, ಲಾಭ ಸಿಕ್ಕಿದರೂ ನಿಮಗೇ" ಎಂದು ನಾಗೋಡಿಯ ಕಮ್ತಿಯವರು ಸಲಹೆ ಕೊಟ್ಟರು. ನಾನು, ನಾರಾಯಣ

ಉಪ್ಪೂರರು, ಪೆರ್ಡೂರು ರಾಮ ಸೇರಿಗಾರ, ಆನಂದ ಮಾಸ್ತರ್, ಶಿರಿಯಾರ ಮಂಜು ನಾಯ್ಕ ಕೂಡಿ "ಕಂಪೆನಿ" ಎಂದು ಪ್ರಾರಂಭಿಸಿದೆವು. ನಾಲ್ಕಾರು ಆಟ ನಡೆಯಿತು. ನಂತರ ಭಾಗವತರು, "ಪದ್ಯ ಹೇಳುವ ಕೆಲಸವಲ್ಲದೆ ನನಗೆ ಇನ್ನಾವ ಕೆಲಸವೂ ಸಾಧ್ಯವಿಲ್ಲ" ಎಂದರೆ, ಮಂಜು ನಾಯ್ಕರು ರಾತ್ರಿ ವಿನಾ, ಹಗಲು ಕೆಲಸಕ್ಕೆ ತಾನು ಬರುವವನಲ್ಲ ಎಂದರು. ನಾನು ಮತ್ತು ಆನಂದ ಮಾಸ್ತರ್ ಉಳಿದೆವು. ಟೆಂಟು ಹಾಕಿಸಬೇಕು, ಪ್ರಚಾರ ಮಾಡಿಸಬೇಕು ಫ್ರೀ ಪಾಸು ಲೈಸನ್ಸು ಆಗಬೇಕು, ಟೆಂಟಿನ ಕೆಲಸಕ್ಕೆ ಜನ ಹುಡುಕಬೇಕು. ಇದೇ ರೀತಿ ನಾವಿಬ್ಬರೂ ಕೆಲವು ದಿನ ಮಾಡಿದೆವು. ಅಷ್ಟಕ್ಕೇ ಒಂದು ತಿಂಗಳಾಯಿತು. (ನೋಡಿ, ನಮ್ಮೂರ ಯಕ್ಷರು ಪುಟ 43) ಮುಂದೆ ಮೇಳಕ್ಕೆ ಬೇರೊಬ್ಬರು ಮೇನೇಜರರಾಗಿ, ಡೇರೆ ಮೇಳ ನಷ್ಟದಲ್ಲೇ ಕೊನೆಗೊಂಡಿತು. ಆದರೆ ನಷ್ಟಕ್ಕೆ ಕಾರಣ ಆಟಕ್ಕೆ ಕಲೆಕ್ಷನ್ ಇಲ್ಲದೇ ಅಲ್ಲ. ಮೇನೇಜರರ ದುಂದುಗಾರಿಕೆ, ಅವ್ಯವಸ್ಥೆ, ಆ ವರ್ಷ ಮೇಳದಲ್ಲಿ ದುಡಿದವರಿಗೆ ಹಣ ಇಲ್ಲ, ಲೆಕ್ಕಾಚಾರ ಇಲ್ಲ, ವರ್ಷದ ಮುಕ್ತಾಯದ ಸೇವೆಯ ಆಟವೂ ಇಲ್ಲ.

ಮೇಳದ ಜೀವನ ಬಹಳ ಕಷ್ಟ. ಯಜಮಾನನಿಗೆ ಲಾಭವಾದರೆ, ಕಲಾವಿದರಿಗೆ ನಿಶ್ಚಯಿಸಿದ ಸಂಬಳಕ್ಕೆ ಮೋಸವಿಲ್ಲ, ನಷ್ಟವಾದರೆ ಮಾತ್ರ ಕಲಾವಿದರಿಗೆ ದೇವರೇ ಗತಿ. ಆದ್ದರಿಂದಲೇ 1968ರಲ್ಲಿ ಪಿ. ಶ್ರೀಧರ ಹಂದೆಯವರು ಸಾಲಿಗ್ರಾಮ ಮೇಳ ಮಾಡಿದಾಗ, ಮತ್ತೆ ಡೇರೆ ಮೇಳದ ಅಪಾಯವನ್ನು ಎದುರಿಸುವ ಧೈರ್ಯ ಮಾಡದೇ ಶಿರಿಯಾರ ಮಂಜು ನಾಯ್ಕರು ಮತ್ತು ಬಿ. ವೀರಭದ್ರ ನಾಯ್ಕರು ತಮಗೆ ಯಜಮಾನರಿಂದ ಆಹ್ವಾನವಿದ್ದರೂ ಆ ಮೇಳ ಸೇರಲು ಹಿಂಜರಿದರು. ಮೊದಲ ವರ್ಷದ ತಿರುಗಾಟ ಯಶಸ್ವಿಯಾದ ಮೇಲೆ, ಮರು ವರ್ಷ ಆ ಮೇಳವನ್ನು ಪಳ್ಳಿ ಸೋಮನಾಥ ಹೆಗ್ಡೆಯವರು ವಹಿಸಿಕೊಂಡಾಗ, ಇವರಿಬ್ಬರೂ ಆ ಮೇಳಕ್ಕೆ ಸೇರಿದರು. ಅದರ ಮರು ವರ್ಷವೇ ವೀರಭದ್ರ ನಾಯಕರು ಉಡುಪಿ ಯಕ್ಷಗಾನ ಕೇಂದ್ರದ ಗುರುವಾಗಿ ನೇಮಕಗೊಂಡು ಮೇಳದ ತಿರುಗಾಟದಿಂದ ದೂರ ಉಳಿದರು. ಶಿರಿಯಾರ ಮಂಜು ನಾಯ್ಕರು ಮಾತ್ರ ಸಾಲಿಗ್ರಾಮ ಮೇಳದಲ್ಲೇ ತಮ್ಮ ಅಂತಿಮ ದಿನಗಳವರೆಗೂ ದುಡಿದು, ಆ ಮೇಳದ ಪ್ರಮುಖ ಕಲಾವಿದರಲ್ಲೊಬ್ಬರೆನಿಸಿದರು.

*****

# ಸಾಲಿಗ್ರಾಮ ಮೇಳದಲ್ಲಿ

ಪ್ರೊ. ಶ್ರೀಧರ ಉಪ್ಪೂರ

1950-60ರ ದಶಕವು ಬಡಗುತಿಟ್ಟು ಯಕ್ಷಗಾನ ಅನೇಕ ಪರಿವರ್ತನೆಗಳನ್ನು ಕಂಡ ಕಾಲವಾಗಿದೆ. ಯಕ್ಷಗಾನದ ಕಲಾತ್ಮಕ ಮೌಲ್ಯಗಳ ಬಗ್ಗೆ 1934ರಲ್ಲಿ ಮದರಾಸಿನ ಡಾ. ವಿ. ರಾಘವನ್ ಅವರು ಇಂಗ್ಲೀಷ್ ನಿಯತಕಾಲಿಕ "ತ್ರಿವೇಣಿ"ಯಲ್ಲಿ (ಹಾಗೆಯೇ ಕನ್ನಡ "ಜಯ ಕರ್ನಾಟಕ' ವಿಶೇಷ ಸಂಚಿಕೆಯಲ್ಲಿ) ವಿವರವಾಗಿ ಲೇಖನ ಬರೆದಿದ್ದರು. 1938ರಲ್ಲಿ ಅಮೇರಿಕಾದ "ಏಶಿಯಾ" ಮಾಸ ಪತ್ರಿಕೆಯಲ್ಲಿ ಡಾ. ಶಿವರಾಮ ಕಾರಂತರು ಯಕ್ಷಗಾನದ ಕುರಿತು ಬರೆದರು. 1957ರಲ್ಲಿ ಅವರ "ಯಕ್ಷಗಾನ ಬಯಲಾಟ" ಪ್ರಕಟಗೊಂಡು ಎಲ್ಲರ ಗಮನ ಸೆಳೆಯಿತು. 60ರ ದಶಕದಲ್ಲಿ ಅವರು ಅನೇಕ ವಿಚಾರಗೋಷ್ಠಿ ಕಾರ್ಯಾಗಾರಗಳನ್ನು ನಡೆಸಿ ಯಕ್ಷಗಾನ ಕಲೆಯ ಬಗ್ಗೆ ಕಲಾವಿದರಲ್ಲಿ, ಕಲಾಭಿಮಾನಿಗಳಲ್ಲಿ ಎಚ್ಚರ ಮೂಡಿಸಲು ಪ್ರಯತ್ನಿಸಿದರು.

ಆದರೂ "ಆಧುನಿಕ ಮನರಂಜನೆಯ ಸಾಧನಗಳಿಂದ ಕೂಡಿದ ಸಿನೆಮಾ ಮೊದಲಾದವುಗಳ ಪ್ರಭಾವದಿಂದಾಗಿ ಇಂದು ಯಕ್ಷಗಾನ ಕಲೆಯು ರಾಹುಗ್ರಸ್ತನಾದ ಚಂದ್ರನಂತಾಗಿದೆ." - ಎಂದು ಬಿ. ವೀರಭದ್ರ ನಾಯಕರು ಆ ಕಾಲದ ಬಡಗುತಿಟ್ಟು ಯಕ್ಷಗಾನದ ಪರಿಸ್ಥಿತಿಯ ಬಗ್ಗೆ ಹೇಳಿಕೊಂಡಿದ್ದಾರೆ. (ಬೇಡರ ಕಣ್ಣಪ್ಪ ಯಕ್ಷಗಾನ ಪ್ರಸಂಗ 1956). ಆ ಕಾರಣಕ್ಕಾಗಿಯೇ ಯಕ್ಷಗಾನವನ್ನು ಕೇವಲ ಜನಪದ ಕಲೆಯನ್ನಾಗಿ ಮುಂದುವರೆಸಿದರೆ ತಮ್ಮ ಬಾಳು ಉಜ್ವಲವಾಗದೆಂದು ತಿಳಿದ ಇಲ್ಲಿನ ಕಲಾವಿದರಲ್ಲಿ ಕೆಲವರು ಅದನ್ನೊಂದು ವೃತ್ತಿ ರಂಗಭೂಮಿಯನ್ನಾಗಿಸಲು ಪ್ರಯತ್ನಿಸಿದರು. "ಮುಖ್ಯವಾಗಿ ಹಳ್ಳಿಯ ಜನತೆಗೆ ಪ್ರಮುಖ ಮನರಂಜನೆಯ ಸಾಧನವಾದ ಯಕ್ಷಗಾನ ಬಯಲಾಟಗಳಲ್ಲಿ ಸಾಕಷ್ಟು ಬದಲಾವಣೆ ತಂದು ಹೊಸತನವನ್ನು ಅಭಿನಯಿಸಿ ತೋರಿಸದಿದ್ದಲ್ಲಿ ಪ್ರೇಕ್ಷಕ ವೃಂದಕ್ಕೆ ಬೇಸರ ಹುಟ್ಟಿಸುವ ಸಂದರ್ಭಗಳನ್ನು ಮನಗಂಡು ಹೊಸತೊಂದು ಪ್ರಸಂಗವನ್ನು ರಚಿಸುವ

ಹವ್ಯಾಸಕ್ಕೆ ಮನ ಮಾಡಿದ ವೀರಭದ್ರ ನಾಯಕರು ಪ್ರಖ್ಯಾತ ಭಾಗವತರಾದ ಶ್ರೀಯುತ ವಾದಿರಾಜ ಹೆಬ್ಬಾರರಿಂದ ಪದ್ಯಗಳನ್ನು ಬರೆಯಿಸಿ ಪ್ರಸಿದ್ಧ ಸಿನೆಮಾ ಬೇಡರ ಕಣ್ಣಪ್ಪವನ್ನೇ ಯಕ್ಷಗಾನವಾಗಿ ಪ್ರದರ್ಶಿಸಿ ಜನಮೆಚ್ಚುಗೆ ಪಡೆದರು. ಈ ಪ್ರಸಂಗವು ಆಗ ಎಷ್ಟು ಜನಾದರಣೀಯವಾಯಿತೆಂದರೆ ಪ್ರಥಮ ವರ್ಷದಲ್ಲಿ 150 ಬಯಲಾಟಗಳಲ್ಲಿ 80 ಬಯಲಾಟಗಳು ಇದೇ ಪ್ರಸಂಗವನ್ನು ಅಭಿನಯಿಸಿದರಂತೆ.

1948ರಲ್ಲಿ ತೆಂಕುತಿಟ್ಟಿನಲ್ಲಿ ಕಲ್ಲಾಡಿ ಕೊರಗ ಶೆಟ್ಟರು ಯಕ್ಷಗಾನದ ಡೇರೆ ಮೇಳ ಆರಂಭಿಸಿದಾಗಲೇ ಯಕ್ಷಗಾನ ವೃತ್ತಿರಂಗಭೂಮಿಯ ಎಲ್ಲಾ ಲಕ್ಷಣಗಳನ್ನೂ ಪಡೆದುಕೊಂಡಿತ್ತು. ಆಗ ಅಲ್ಲಿ ಕಂಪೆನಿ ನಾಟಕ ಮಂಡಳಿಗಳ ಪ್ರಭಾವ ಸ್ಪಷ್ಟವಾಗಿತ್ತು. ಬಡಗುತಿಟ್ಟಿನಲ್ಲಿ ಕೆರೆಮನೆ ಶಿವರಾಮ ಹೆಗಡೆಯವರು ಇಡಗುಂಜಿ ಮೇಳವನ್ನು ವೀರಭದ್ರ ನಾಯಕರು ಕೊಲ್ಲೂರು ಮೇಳವನ್ನು ಡೇರೆ ಮೇಳವಾಗಿಸಿ ಅದಕ್ಕೆ ವೃತ್ತಿ ರಂಗಭೂಮಿಯ ಸ್ವರೂಪ ನೀಡುವುದಕ್ಕೆ ಪ್ರಯತ್ನಿಸಿದ್ದರೂ ಅದರಲ್ಲಿ ಅವರು ಸಂಪೂರ್ಣ ಯಶಸ್ವಿಯಾಗಿರಲಿಲ್ಲ. ಆದರೆ 1968ರಲ್ಲಿ ಸಾಲಿಗ್ರಾಮ ಮೇಳವು ಡೇರೆ ಮೇಳವಾಗಿ ಆರಂಭಗೊಂಡ ಮೇಲೆ ಬಡಗುತಿಟ್ಟು ಯಕ್ಷಗಾನದ ಸ್ವರೂಪವೇ ಬದಲಾಯಿತು. ರಾಷ್ಟ್ರ ಪ್ರಶಸ್ತಿ ವಿಜೇತ ಕಲಾವಿದ ಬಿ. ವೀರಭದ್ರ ನಾಯಕರು "ದಶಾವತಾರಿ" ಎಂಬ ತಮ್ಮ ಆತ್ಮಕಥೆಯಲ್ಲಿ ಹಿಂದಿನ ಬಯಲಾಟದ ಮೇಳಕ್ಕೂ ಡೇರೆ ಮೇಳದಲ್ಲಿ ಕಲಾವಿದರ ಜೀವನಕ್ಕೂ ಇರುವ ವ್ಯತ್ಯಾಸವನ್ನು ವಿವರಿಸುತ್ತಾರೆ -

"ಬಯಲಾಟದ ಮೇಳಗಳೆಂದರೆ ಹುಡುಗರು ಕಲಿಯುವ ಪಾಠಶಾಲೆಗಳಿದ್ದಂತೆ." ಪ್ರಾರಂಭದಲ್ಲಿ ಕೋಡಂಗಿಗಳಾಗಿ, ನಂತರ ಕಿರಾತ ಪಡೆಯ ಕಿರಾತರಾಗಿ, ಕ್ರಮೇಣ ಬಾಲಗೋಪಾಲರಾಗಿ ಹಂತಹಂತವಾಗಿ ಕಲಿಯಬೇಕು. ಬಾಲಗೋಪಾಲರ ದರ್ಜೆ ಮುಗಿದ ನಂತರ ಕುವಲೆ, ರತಿ ಇತ್ಯಾದಿ ಚಿಕ್ಕ ಸ್ತ್ರೀಪಾತ್ರಗಳೂ, ಅಭಿಮನ್ಯು, ವೃಷಸೇನ ಇತ್ಯಾದಿ ಪುರುಷ ಪಾತ್ರಗಳೂ ಅವರ ಪಾಲಿಗೆ ಬರುತ್ತವೆ. ಹೀಗೆ ಕಷ್ಟ ಸಹಿಷ್ಣುಗಳಾಗಿ ಆರೆಂಟು ವರ್ಷ ದುಡಿದರೆ, ರೂಪು ಒಳ್ಳೆಯದಿದ್ದರೆ ಮುಖ್ಯ ಸ್ತ್ರೀ ಪಾತ್ರವೂ, ಗಡಸು ಮುಖಭಾವವಿದ್ದರೆ ಪುರುಷ ಪಾತ್ರಗಳೂ ಲಭ್ಯವಾಗುತ್ತವೆ. ಈ ಕಠಿಣ ಪರಿಶ್ರಮಕ್ಕೆ ಹೆದರಿ ಅದೆಷ್ಟೋ ಮಂದಿ ಮಧ್ಯವೇ ಮೇಳವನ್ನು ಬಿಡುವುದುಂಟು."

"ಮೇಳದವರು ಒಂದೂರಿನಿಂದ ಮತ್ತೊಂದೂರಿಗೆ ನಡೆದು ಹೋಗುವಾಗ ವೇಷಧಾರಿಗಳ ಹಿಂದೆ ಹುಡುಗರು ಹೋದರೆ ದಾರಿ ನಡೆಯುವಾಗ ಅರ್ಥ (ಮಾತು) ಹೇಳಿ ಕೊಡುತ್ತಿದ್ದರು. ಬಿಡಾರದಲ್ಲಿ ಅಡುಗೆ ತಯಾರಾಗುವ ತನಕ ಕುಣಿಯಲು ಹೇಳಿ ಕೊಡುತ್ತಿದ್ದರು. ಈ ರೀತಿ ಕಷ್ಟಪಟ್ಟು ವಿದ್ಯೆ ಕಲಿಯಬೇಕೇ ವಿನಾಹ ಬೇರೆ ಅವಕಾಶ ಇರಲಿಲ್ಲ."

"ಹಿಂದೆ ಯಕ್ಷಗಾನವು ಪ್ರಯಾಣವೇ ಪ್ರಾಣಿಗಳಿಗೆ ಮುಪ್ಪು ಎಂಬಂತಿತ್ತು. ಈಗ ಟೆಂಟಿನ ಆಟದವರು ಕಲಾವಿದರನ್ನು ಕಾರಿನಲ್ಲಿ ಕುಳ್ಳಿರಿಸಿ, ಸರಂಜಾಮುಗಳನ್ನು ಲಾರಿಯಲ್ಲಿ ತುಂಬಿಸಿ, ಆಟ ನಿಶ್ಚಯವಾದ ಸ್ಥಳಕ್ಕೆ ಬೆಳಿಗ್ಗೆ 9 ಗಂಟೆಯ ಒಳಗೆ ಮುಟ್ಟಿಸುತ್ತಾರೆ. ಇದರಿಂದ ಕಲಾವಿದನು ಸುಖದಿಂದ ಕಲಾ ಜೀವನ ನಡೆಸಲು ಅನುಕೂಲವಾಗಿದೆ. ಬಿಸಿಲಲ್ಲಿ ನಡೆಯುವುದು ಬೇಡ. ಊಟ ಸಮಯಕ್ಕೆ ಸರಿಯಾಗಿ ಆಗುತ್ತದೆ. ನಿದ್ರೆ ಸಾಕಷ್ಟು ಮಾಡಬಹುದು. ಬೇಕಾದ್ದನ್ನು ಕಲಿಯಬಹುದು."

"ಮೊದಲು ಊರಿನಲ್ಲಿ ಒಬ್ಬರು, ಮೇಳದವರಿಗೆ ಊಟಕ್ಕೆ ಕೊಟ್ಟು ಅನಂತರ ವೀಳ್ಯದ ಹಣ ಕೊಡುತ್ತಿದ್ದರು. ಬಯಲಾಟದಲ್ಲಿ ಗಲಾಟೆ ಹೆಚ್ಚು. ಕೇಳುವ ಆಸೆ ಇರುವವರಿಗೆ ಸರಿಯಾಗಿ ಕೇಳಿಸುವುದಿಲ್ಲ. ಸುಖವಾಗಿ ಕುಳಿತುಕೊಳ್ಳುವ ವ್ಯವಸ್ಥೆ ಕೂಡಾ ಇಲ್ಲ. ಹೀಗಾಗಿ ವಿದ್ಯಾವಂತರು ಬಯಲಾಟಕ್ಕೆ ಹೋಗುವುದು ಕಡಿಮೆ. ಅವರು ಟಿಕೇಟಿನ (ಟೆಂಟು) ಆಟಕ್ಕೆ ಹೋಗಲು ಇಷ್ಟ ಪಡುತ್ತಾರೆ. (ನಮ್ಮೂರ ಯಕ್ಷರು ಪುಟ – 57)

ಹೀಗೆ ಡೇರೆ ಮೇಳವಾದ ಮೇಲೆ ಕಲಾವಿದರಿಗೆ ಕಷ್ಟ ಕಡಿಮೆ, ಸಂಬಳ ಹೆಚ್ಚು. ಈ ವಿಧಾನದಿಂದ ಯಕ್ಷಗಾನ ಮೇಳಕ್ಕೆ ಗೌರವ ಉಂಟಾಯಿತು. ಪಂಡಿತರು, ವಿದ್ವಾಂಸರು ಕಾಣುವಂತಾಯಿತು. ಪ್ರಸಂಗದ ಕಥಾ ಭಾಗ ಚೆನ್ನಾಗಿ ಕೇಳುವಂತಾಯಿತು. ಗೌಜು ಗಲಾಟೆಯೇನೂ ಇಲ್ಲದ ಹಾಗಾಯಿತು ಎನ್ನುತ್ತಾರೆ ವೀರಭದ್ರ ನಾಯಕರು. ಸಾಲಿಗ್ರಾಮ ಮೇಳ ಡೇರೆ ಮೇಳವಾದ ಮೇಲೆ ಅಮೃತೇಶ್ವರಿ, ಪೆರ್ಡೂರು, ಇಡಗುಂಜಿ ಮೇಳಗಳೂ ಡೇರೆ ಮೇಳವಾಗಿ ಯಶಸ್ಸು ಕಂಡವು. ಬಡಗುತಿಟ್ಟು ಯಕ್ಷಗಾನ ಹೀಗೆ ಹೊಸ ರೂಪ ಪಡೆಯಿತು.

ಶಿರಿಯಾರ ಮಂಜು ನಾಯ್ಕರು ಸಾಲಿಗ್ರಾಮ ಮೇಳ ಆರಂಭವಾದ ಎರಡನೇ ವರ್ಷ ಆ ಮೇಳಕ್ಕೆ ಸೇರಿದವರು ತಮ್ಮ ಅಂತಿಮ ದಿನದವರೆಗೂ ಆ ಮೇಳದಲ್ಲಿದ್ದರು. ಅವರು ಸೇರಿದ ವರ್ಷ ಆ ಮೇಳದಲ್ಲಿ "ಸಮಗ್ರ ಭೀಷ್ಮ' ಹೊಸ ಪ್ರಯೋಗ. ಪ್ರಥಮ ಭಾಗದಲ್ಲಿ ತರುಣ ಭೀಷ್ಮ ಯೋಜನಗಂಧಿಯ ಬಳಿ ಹೋಗಿ ತನ್ನ ತಂದೆ ಶಂತನು ಮಹಾರಾಜನನ್ನು ಮದುವೆಯಾಗಲು ಆಕೆಯನ್ನು ಒಪ್ಪಿಸುವ ದೃಶ್ಯ. ಎರಡನೇ ಭಾಗದಲ್ಲಿ ತಾನು ಮದುವೆಯಾಗಲಾರೆನೆಂದು ಪ್ರತಿಜ್ಞೆ ಮಾಡಿದ ಭೀಷ್ಮನನ್ನು ಮದುವೆಯಾಗು ಎಂದು ಒತ್ತಾಯಿಸುವ ಅಂಬೆ, ಕೊನೆಯಲ್ಲಿ ವೃದ್ಧ ಭೀಷ್ಮ ತನ್ನ ಮೊಮ್ಮಕ್ಕಳಾದ ಕೌರವರು, ಪಾಂಡವರು ಯುದ್ಧ ಮಾಡುವಾಗ ಯಾರ ಕಡೆಗೂ ಸ್ಥಿರವಾಗಿ ನಿಲ್ಲಲಾರದೇ ತೊಳಲಾಡುತ್ತಾ ಸಾಯುವ ದೃಶ್ಯ. ಪ್ರಥಮ ಭಾಗವಾದ "ಭೀಷ್ಮ ಪ್ರತಿಜ್ಞೆ' ಪ್ರಸಂಗದ ತರುಣ ಭೀಷ್ಮನಾಗಿ ಶಿರಿಯಾರ ಮಂಜು ನಾಯ್ಕರು ಭಾವಪೂರ್ಣವಾದ ತಮ್ಮ ಮಾತುಗಾರಿಕೆಯಿಂದ ಜನಮೆಚ್ಚುಗೆ ಗಳಿಸಿದರು. ಆ ಪ್ರಸಂಗ ಅವರಿಗೇ ಮೀಸಲು ಎಂಬಂತಾಯಿತು.

ಆ ವರ್ಷ ಜನಪ್ರಿಯವಾದ ಇನ್ನೊಂದು ಪ್ರಸಂಗ "ಚಂದ್ರಹಾಸ ಚರಿತ್ರೆ" ಚಂದ್ರಹಾಸನಾಗಿ ಶಿರಿಯಾರ ಮಂಜು ನಾಯ್ಕರ ಹಿತಮಿತವಾದ ಮಾತುಗಾರಿಕೆ, ಪ್ರಬುದ್ಧವಾದ ಅಭಿನಯ ಕಥಾನಾಯಿಕೆಯಾದ ವಿಷಯೆ (ಕೆರೆಮನೆ ಗಜಾನನ ಹೆಗಡೆ) ಪ್ರತಿನಾಯಕನಾದ ದುಷ್ಟಬುದ್ಧಿ (ಕೆರೆಮನೆ ಮಹಾಬಲ ಹೆಗಡೆ) ಇವರ ಅಭಿನಯಕ್ಕೆ ಸರಿ ದೊರೆಯಾಗಿತ್ತು. ಆ ವರ್ಷ ಪಾದುಕಾ ಪಟ್ಟಾಭಿಷೇಕ ಪಂಚವಟಿ ಪ್ರಸಂಗವನ್ನೂ ಆಡಿದ್ದರು. ಬಿ. ವೀರಭದ್ರ ನಾಯಕರು ಪಂಚವಟಿ ಪ್ರಸಂಗದಲ್ಲಿ ರಾಕ್ಷಸ ವೇಷದ (ಬಣ್ಣ) ರಾವಣನಾಗಿ ರಂಜಿಸಿದರೆ ಅದಕ್ಕೆ ಮೊದಲು ಶಿರಿಯಾರ ಮಂಜು ನಾಯ್ಕರು ಪಾದುಕಾ ಪಟ್ಟಾಭಿಷೇಕ ಪ್ರಸಂಗದಲ್ಲಿ ಭರತನಾಗಿ ಭಾವಪೂರ್ಣವಾದ ಅಭಿನಯವನ್ನು ನೀಡಿ ಪ್ರೇಕ್ಷಕರು ಮೈಮರೆಯುವಂತೆ ಮಾಡಿದ್ದರು.

ಹೀಗೆ ಶಿರಿಯಾರ ಮಂಜು ನಾಯ್ಕರು ವೃತ್ತಿ ಮೇಳವೊಂದಕ್ಕೆ ಅನಿವಾರ್ಯವಾಗಿ ಬೇಕಾಗುವ ಕಲಾವಿದನೆಂಬ ಸ್ಥಾನಮಾನ ಗಳಿಸಿಕೊಂಡರು. ಹೊಸ ಪ್ರಸಂಗವಿರಲಿ, ಹಳೆಯ ಪ್ರಸಂಗವಿರಲಿ, ಪೌರಾಣಿಕ ಪ್ರಸಂಗವಾಗಲೀ, ಕಾಲ್ಪನಿಕ ಕಥೆಯಾಗಲಿ ಯಾವ ಪಾತ್ರವನ್ನು ಕೊಟ್ಟರೂ ಅದನ್ನು ಅಚ್ಚುಕಟ್ಟಾಗಿ, ಸಮರ್ಥವಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಪ್ರತೀ ಪ್ರದರ್ಶನದಲ್ಲೂ ಪ್ರದರ್ಶಿಸಿದ್ದರಿಂದಲೇ ಸಾಲಿಗ್ರಾಮ ಮೇಳದಲ್ಲಿ ಅವರು ಕೊನೆಯವರೆಗೂ ತಮ್ಮ ಸ್ಥಾನಮಾನವನ್ನು ಉಳಿಸಿಕೊಂಡರು. ಶೂದ್ರಕನ ಮೃಚ್ಛಕಟಿಕ ಸಂಸ್ಕೃತ ನಾಟಕವನ್ನು ಒಂದು ವರ್ಷ ಬೆಳಸಲಿಗೆ ಗಣಪತಿ ಹೆಗಡೆಯವರು ಯಕ್ಷಗಾನ ಪ್ರಸಂಗವಾಗಿ ಬರೆದುಕೊಟ್ಟರು. ಆ ಪ್ರಸಂಗದಲ್ಲಿ ಕುಮಟಾ ಗೋವಿಂದ ನಾಯ್ಕರ ಶಕಾರನ ಪಾತ್ರ ಎಷ್ಟು ಜನಪ್ರಿಯವಾಗಿತ್ತೋ, ಅಷ್ಟೇ ಮಟ್ಟಿಗೆ ಶಿರಿಯಾರ ಮಂಜು ನಾಯ್ಕರ ಚಾರುದತ್ತನ ಪಾತ್ರಾಭಿನಯ ಪ್ರಸಂಗಕ್ಕೆ ಪೂರಕವಾಗಿತ್ತು. ಅಂಥ ಗಂಭೀರ ಪಾತ್ರಗಳನ್ನು ಮಂಜು ನಾಯ್ಕರಷ್ಟು ಪ್ರಬುದ್ಧವಾಗಿ ಅಭಿನಯಿಸಬಲ್ಲವರು ಬಡಗುತಿಟ್ಟು ಯಕ್ಷಗಾನದಲ್ಲಿ ಬಹಳ ಮಂದಿಯಿಲ್ಲ.

ಸಾಲಿಗ್ರಾಮ ಮೇಳದಲ್ಲಿ ಶಿರಿಯಾರ ಮಂಜು ನಾಯ್ಕರಿಗೆ ಜೋಡಿಯಾದ ಪ್ರಸಿದ್ಧ ಸ್ತ್ರೀಪಾತ್ರಧಾರಿ ಅರಾಟೆ ಮಂಜುನಾಥರು ಶಿರಿಯಾರ ಮಂಜು ನಾಯ್ಕರ ಜತೆಯಲ್ಲೇ ಪ್ರೇಕ್ಷಕರ ಮನಸ್ಸಿನಲ್ಲಿ ನೆಲೆ ನಿಲ್ಲುವವರು. ಮಂಜು ನಾಯ್ಕರ ಪುರುಷ ಪಾತ್ರಕ್ಕೆ ಅರಾಟೆ ಮಂಜುನಾಥರ ಸ್ತ್ರೀಪಾತ್ರ ಸರಿ ಜೋಡಿಯಾಗಿತ್ತು. ರಂಗಸ್ಥಳದಲ್ಲಿ ಅವರಿಬ್ಬರ ಸಂವಾದ ಆರಂಭವಾಯಿತೆಂದರೆ ಮಾತಿನ ಮಂಟಪ ಅಲಂಕಾರಗೊಂಡಂತೆ. ಅವರಿಬ್ಬರ ನಾಟಕೀಯವಾದ ಸಂಭಾಷಣೆ ಆ ದಿನದ ಪ್ರಸಂಗದ ಸ್ವಾರಸ್ಯವೆಂಬುದನ್ನು ಎಲ್ಲಾ ಪ್ರೇಕ್ಷಕರೂ ಒಪ್ಪುತ್ತಿದ್ದರು.

ಪ್ರತೀ ವರ್ಷ ನವಂಬರದಿಂದ ಮೇ ತಿಂಗಳ ಕೊನೆಯವರೆಗೆ ಮೇಳದ ತಿರುಗಾಟವಾದರೆ ಮಳೆಗಾಲದಲ್ಲಿ ಉಡುಪಿ, ಮಂಗಳೂರು, ಬೆಂಗಳೂರು, ಬೊಂಬಾಯಿ

ಮೊದಲಾದ ಕಡೆ ವಿಶೇಷ ಪ್ರದರ್ಶನಗಳಾಗುತ್ತಿದ್ದವು. ಪ್ರಸಿದ್ಧ ಕಲಾವಿದರನ್ನೆಲ್ಲಾ ಸೇರಿಸಿ, ಇಂಥ ಪ್ರಸಂಗಗಳನ್ನು ಆಡುವುದು ರೂಢಿ. ಶಿರಿಯಾರ ಮಂಜು ನಾಯ್ಕರಿಗಾಗಿಯೇ ಕೆಲವು ಪ್ರಸಂಗಗಳನ್ನಿಡುತ್ತಿದ್ದರು. ಉಡುಪಿಯಲ್ಲಿ ಒಮ್ಮೆ ಪ್ರಮೀಳಾರ್ಜುನ ಪ್ರಸಂಗ. ಪ್ರಮೀಳೆಯಾಗಿ ಪ್ರಸಿದ್ಧ ಸ್ತ್ರೀವೇಷಧಾರಿ ಕೋಟ ವೈಕುಂಠ. ಅರ್ಜುನನಾಗಿ ಮಂಜು ನಾಯಕರು. ಹಿನ್ನೆಲೆಯಲ್ಲಿ ಭಾಗವತ ನಾರಣಪ್ಪ ಉಪ್ಪೂರ ಮತ್ತು ಅವರ ಶಿಷ್ಯ ಕಾಳಿಂಗ ನಾವಡರ ದ್ವಂದ್ವ ಭಾಗವತಿಕೆ. ಪ್ರಮೀಳೆ ಮತ್ತು ಅರ್ಜುನರ ಯುದ್ಧವಾಗುತ್ತಿರುವಾಗ ಆಕಾಶ ವಚನ ಕೇಳಿಸುವ ಹಾಡು. ಗುರು ಶಿಷ್ಯರ ಹಾಡುಗಾರಿಕೆ ತಾರಕದ ತುತ್ತತುದಿಗೇರಿತ್ತು ಪದ್ಯ ನಿಲ್ಲುತ್ತಲೇ ಅರ್ಜುನನಾಗಿ ಶಿರಿಯಾರ ಮಂಜುನಾಯ್ಕರ ಉದ್ಗಾರ, ಎಲ್ಲಿದೆ ಅದು ! ಆಕಾಶಕ್ಕೆ ಕೈ ತೋರಿಸಿ! ಒಮ್ಮೆಲೇ ಇಡೀ ಸಭಾ ಸದನ ಮಂಜು ನಾಯ್ಕರ ಉದ್ಗಾರಕ್ಕೆ ತಲೆದೂಗಿದಂತೆ ಚಪ್ಪಾಳೆಯ ಸುರಿಮಳೆಯಿಂದ ತುಂಬಿತು. ಸಮಯ ಸ್ಫೂರ್ತಿಯಿಂದ, ಔಚಿತ್ಯವರಿತು ಇಂಥ ಮಾತುಗಳನ್ನಾಡುವುದರಲ್ಲಿ ಮಂಜು ನಾಯ್ಕರು ಸಿದ್ಧಹಸ್ತರು.

1982ರ ಮಳೆಗಾಲದ ಕೊನೆಯ ಆಟ. ಮಣಿಪಾಲದ ಗೋಲ್ಡನ್ ಜೂಬಿಲಿ ಹಾಲಿನಲ್ಲಿ ಮೊದಲ ಪ್ರಸಂಗ ಭೀಷ್ಮವಿಜಯ. ಆಮೇಲೆ ಭೀಷ್ಮಪರ್ವ. ಕೆರೆಮನೆ ಮಹಾಬಲ ಹೆಗ್ಡೆಯವರ ವಿಜಯದ ಭೀಷ್ಮ. ಪ್ರಸಂಗ ಮುಂದುವರಿಯುತ್ತಾ ಅವರ ಗುರು ಪರಶುರಾಮನ ಪ್ರವೇಶ. ಶಿರಿಯಾರದ ಮಂಜು ಈ ಪಾತ್ರವನ್ನು ವಹಿಸಿದ್ದರು. ಆ ದಿನದ ಭೀಷ್ಮ ಪರಶುರಾಮರ ಭೇಟಿ ಅತ್ಯದ್ಭುತವಾಗಿತ್ತು. ಪಿಂದಕ್ಕಿಪ್ಪತ್ತೊಂದು ಬಾರಿ .... ಏರು ಸ್ವರದಲ್ಲಿ ಬಂದ ಪರಶುರಾಮನ ಪದ್ಯ ಎತ್ತುಗಡೆ.

ಭೀಷ್ಮ ಪರಶುರಾಮರ ಕೊನೆಯ ಯುದ್ಧ. ಯುದ್ಧ ಮಧ್ಯದಲ್ಲಿ ಸ್ತಬ್ಧತೆ. ಎನುತ ರಾಮನು ಯೋಚಿಸುತ್ತಿರಲಾಕ್ಷಣ ವನದಿ ಭೋರ್ಗರೆಯುವಂತೆ ನಭದಿ ಚಿನುಮಯಾತ್ಮಕ ಕೇಳು ಕಲಹ ಬೇಡೆಲೋ ಈಗ.. ಹೀಗೆ ಆ ಅಶರೀರವಾಣಿಯ ಪದ್ಯವು ನಡೆಯುತ್ತಿರುವಾಗ ಕೊಡಲಿಯನ್ನು ಬಲ ಕೈಯಲ್ಲಿ ಎತ್ತಿ ಹಿಡಿದು ಆಲೋಚಿಸುತ್ತಿರುವ ಭಂಗಿಯಲ್ಲಿ, ಪಾತ್ರದಲ್ಲಿ ಪೂರ್ತಿ ತನ್ಮಯತೆ. ಪದ್ಯ ನಿಂತಿತ್ತು ತುಸು ಹೊತ್ತು ಸ್ಥಬ್ಧತೆ. ಅದೇ ಭಂಗಿಯಲ್ಲಿದ್ದ ಪರಶುರಾಮ ಹಂತ ಹಂತವಾಗಿ ಕುಸಿಯತೊಡಗಿದ. ಕೂಡಲೇ ಅವರನ್ನು ರಂಗದ ಬದಿಗೆ ಎತ್ತಿ ಕರೆತಂದರು. (ಡಾ. ಭಾಸ್ಕರಾನಂದ ಕುಮಾರರ ನೆನಪು)

ಆಸ್ಪತ್ರೆಗೆ ಕೂಡಲೇ ಕೊಂಡೊಯ್ದು ಶುಶ್ರೂಷೆಯ ಪ್ರಯತ್ನವನ್ನು ಮಾಡಿದರೂ ಫಲಕಾರಿಯಾಗಲಿಲ್ಲ. ಮುಂಜಾನೆ ನಾಲ್ಕು ಗಂಟೆಯ ಹೊತ್ತಿಗೆ ಹೃದಯ ಪೂರ್ತಿ ನಿಂತು ಅವರು ಅಸುನೀಗಿದಾಗ ಆ ಸುದ್ದಿಯನ್ನು ಕೆರೆಮನೆ ಮಹಾಬಲ ಹೆಗಡೆ ವೇದಿಕೆಯಿಂದ ಪ್ರಕಟಿಸಿ ಶ್ರದ್ಧಾಂಜಲಿ ಅರ್ಪಿಸಿದರು. (ನಮ್ಮೂರ ಯಕ್ಷರು ಪುಟ - 89)

ಭಕ್ತ ಸುಧನ್ವ, ಪಟ್ಟಾಭಿಷೇಕದ ರಾಮ, ಭರತ, ಪ್ರಮೀಳಾರ್ಜುನದ ಅರ್ಜುನ, ಗದಾಯುದ್ಧದ ಸಂಜಯ, ನಳಚರಿತ್ರೆಯ ಋತುಪರ್ಣ, ಕರ್ಣ, ಶ್ವೇತ ಕುಮಾರ ಮುಂತಾದ ಪಾತ್ರಗಳು ಶಿರಿಯಾರರಿಂದಾಗಿ ಜನಪ್ರಿಯವಾದವು. ಯಾವ ಪಾತ್ರವನ್ನು ಮಾಡಿದರೂ ಅದಕ್ಕೊಂದು ವೈಶಿಷ್ಟ್ಯ, ಬಿಗುವು, ಗಾಂಭೀರ್ಯ ತಂದುಕೊಟ್ಟು ರಸಾನುಭವದ ಶಿಖರಕ್ಕೆ ಕೊಂಡೊಯ್ಯುವ ಶಕ್ತಿ ಅವರಿಗೆ ಇತ್ತು. ಹಿತ ಮಿತವಾದ, ಆಧುನಿಕ ಕಲಾ ಸಂವೇದನೆಯುಳ್ಳ, ಸಾಹಿತ್ಯ ಪೂರ್ಣವಾದ ಮಾತು, ಸ್ಪಷ್ಟವಾದ ಉಚ್ಚಾರ, ಚೊಕ್ಕವಾದ ವ್ಯಾಕರಣ, ಸಂದರ್ಭಕ್ಕೊಪ್ಪುವ ಧ್ವನಿಯ ಏರಿಳಿತ, ಪದಲಾಲಿತ್ಯ ಇವುಗಳಿಂದಾಗಿ ಮಂಜು ನಾಯ್ಕರಿಗೆ ಹಿರಿಯ ಅರ್ಥಧಾರಿ ಮಲ್ಪೆ ಶಂಕರನಾರಾಯಣ ಸಾಮಗರ ಶ್ಲಾಘನೆ ಕೂಡಾ ದೊರಕಿತ್ತು - "ತೆಂಕಿನಲ್ಲಿ ಮಾತುಗಾರರಿದ್ದಾರೆ. ಆದರೆ ಅವರು ಅಹಂಕಾರಿಗಳು. ಬಡಗಿನವರಿಗೆ ಮಾತು ಗೊತ್ತಿಲ್ಲ. ಆದರೆ ಮಂಜು ಬಡಗಿನವರಾದರೂ ಅದ್ವಿತೀಯ ಮಾತುಗಾರ." ಎಂದು ಸಾಮಗರು ಕೊಂಡಾಡಿದ್ದರು. (ನಮ್ಮೂರು ಯಕ್ಷರು ಪುಟ – 90)

ಹಳೆಯ ಪ್ರಸಂಗಗಳ ಪೈಕಿ ಕನಿಷ್ಠ ಪಕ್ಷ 35, 40 ಪ್ರಸಂಗಗಳ ಪದ್ಯಗಳು ಅವರಿಗೆ ಆಮೂಲಾಗ್ರವಾಗಿ ಬಾಯಿಪಾಠ ಬರುತ್ತಿತ್ತು. ಮಂಜು ನಾಯ್ಕರ ಗ್ರಹಣಶಕ್ತಿ ಅದ್ಭುತವಾಗಿತ್ತು. ಒಂದು ಪ್ರಸಂಗವನ್ನು ಎರಡು ಮೂರು ಬಾರಿ ಓದಿಕೊಂಡು ಅದನ್ನು ರಂಗಸ್ಥಳದಲ್ಲಿ ಅಭಿನಯಿಸಿದರೆ, ಅಂಥ ಪ್ರಸಂಗ ಅವರಿಗೆ ಕಂಠಪಾಠವಾಗಿಬಿಡುತ್ತಿತ್ತು. ಬಡಗುತಿಟ್ಟಿನ ಪದ್ಯ ಎತ್ತುಗಡೆಯ ವಿಶಿಷ್ಟ ಸೌಂದರ್ಯ ಮಂಜು ನಾಯ್ಕರೊಡನೆಯೇ ಮಾಯವಾಗಿ ಹೋಯಿತೆನ್ನಬೇಕು. ಅವರು ಪಾತ್ರ ವಹಿಸಿದರೆ ಹೊಸ ಭಾಗವತರ ಕೆಲಸ ಬಹಳ ಸಲೀಸು. ಪದ್ಯಗಳನ್ನು ನಾಯ್ಕರೇ ಕ್ರಮವತ್ತಾಗಿ ಎತ್ತುಗಡೆ ಮಾಡುತ್ತಾರೆ. ಭಾಗವತರು ಅದನ್ನು ಮುಂದುವರಿಸಿಬಿಟ್ಟರೆ ಸರಿ.

ಮಂಜು ಅವರ ಕುಣಿತ, ನಿಲ್ಲುವ ರೀತಿ, ರಂಗಕ್ರಮ ಪದ್ಯ ಎತ್ತುಗಡೆಯ ವಿಧಾನ, ವೇಷಗಾರಿಕೆ, ಎಲ್ಲವೂ ಅನುಸರಣೀಯವಾಗಿದ್ದವು. ಹಳೆಯ ಪ್ರಸಂಗಗಳ ಮಟ್ಟಿಗೆ ಮಾತ್ರವಲ್ಲ, ಹೊಸ ಪ್ರಸಂಗಗಳಲ್ಲೂ ಅವರು ಪಾತ್ರವನ್ನು ನಿರ್ವಹಿಸುವ ರೀತಿ ಅಪೂರ್ವವಾಗಿರುತ್ತಿತ್ತು. ಪ್ರಸಂಗದ ಆಮೂಲಾಗ್ರ ಅಧ್ಯಯನ ಮಾಡಿ ಪಾತ್ರ ಸ್ವರೂಪವನ್ನು ಅರ್ಥವಿಸಿ, ತನ್ನ ದಾರಿಯನ್ನು ಖಚಿತ ಪಡಿಸುವುದು ಮಾತ್ರವಲ್ಲದೇ ರಂಗದಲ್ಲಿ ತನ್ನೊಂದಿಗೆ ಹೇಗೆ ವ್ಯವಹರಿಸಬೇಕೆಂದು ಸಹ ಕಲಾವಿದರಿಗೆ ಹೇಳಿಕೊಡುವ ಅವರ ವಿಧಾನ ವಿಶೇಷವಾಗಿತ್ತು.

ಸಂಕೋಚ ಪ್ರವೃತ್ತಿಯ ಶಿರಿಯಾರ ಮಂಜು ನಾಯ್ಕರಂತವರು ಸಮಾಜದಲ್ಲಿ ಗುರುತಿಸಲ್ಪಡದೆ ಹೋಗಬಹುದಾದ ಸಂದರ್ಭಗಳೇ ಹೆಚ್ಚು. ಪ್ರಸಿದ್ಧಿ, ಪ್ರಚಾರಕ್ಕಾಗಿ ಅವರೆಂದೂ ಹಾತೊರೆದವರಲ್ಲ, ಆದರೆ ಕಲಾಭಿಮಾನಿಗಳು ಅವರನ್ನು ಗುರುತಿಸಿ ಹತ್ತಾರು

ಕಡೆ ಸನ್ಮಾನಿಸಿದ್ದಾರೆ. ಉಡುಪಿಯ ಅಷ್ಟಮಠಗಳ ಮೆಚ್ಚುಗೆ, ಪ್ರಶಸ್ತಿ ಅವರಿಗೆ ಎಳೆ ಹರೆಯದಲ್ಲೇ ಲಭಿಸಿತ್ತು. 40ಕ್ಕೂ ಮಿಕ್ಕಿ ಸನ್ಮಾನ , ಮಾನ ಪತ್ರಗಳು ಅವರಿಗೆ ಬಂದಿದ್ದವು. ಉಡುಪಿ, ಮಂಗಳೂರು ಅಲ್ಲದೇ ದೂರದ ದಿಲ್ಲಿ, ಮುಂಬಾಯಿಗಳಲ್ಲೂ ಅವರನ್ನು ಸನ್ಮಾನಿಸಲಾಗಿತ್ತು. ಬೆಂಗಳೂರಿನಲ್ಲಿ ಸ್ವರ್ಣಪದಕ ನೀಡಿ ಗೌರವಿಸಲಾಗಿತ್ತು. ಹುಟ್ಟೂರು ಶಿರಿಯಾರದಲ್ಲಿ 1982ರ ಏಪ್ರಿಲ್‌ನಲ್ಲಿ ಏರ್ಪಡಿಸಿದ ಸನ್ಮಾನ ಅವರಿಗೆ ಕೊನೆಯ ಗೌರವವಾಗುತ್ತದೆಂದು ಯಾರೂ ಎಣಿಸಿರಲಿಲ್ಲ. ನವಂಬರದಲ್ಲಿ ಸಾಲಿಗ್ರಾಮ ಮೇಳದ ಅವರ ತಿರುಗಾಟ ಆರಂಭವಾಗುತ್ತಿತ್ತು. ಆದರೆ ಮಂಜು ನಾಯ್ಕರು ಹಠಾತ್ತಾಗಿ ಎಲ್ಲಕ್ಕೂ ವಿದಾಯ ಹೇಳಿ 1982 ಅಕ್ಟೋಬರ ಕೊನೆಯ ದಿನದಂದು ರಂಗದಲ್ಲಿ ಕುಸಿದು ವೇಷತೊಟ್ಟಂತೆಯೇ ಪರಂಧಾಮವನ್ನೈದರು.

*****

# ಶಿರಿಯಾರದ ಕಲಾವಿದರು

ಕಳೆದ ಶತಮಾನದ ಆರಂಭದಲ್ಲಿ ಉಡುಪಿ ಜಿಲ್ಲೆಯ ಬಡಗುತಿಟ್ಟಿನಲ್ಲಿ ಮೂರು ಪ್ರಮುಖ ಕೇಂದ್ರಗಳಿದ್ದವು. ಒಂದು ಬ್ರಹ್ಮಾವರದ ಹಾರಾಡಿ. ಮತ್ತೊಂದು ಅಲ್ಲಿಯೇ ಸಮೀಪದ ಮಟಪಾಡಿ. ಇವೆರಡಕ್ಕೆ ಯಾವಾಗಲೂ ಪೈಪೋಟಿ. ಹಾರಾಡಿಯಲ್ಲಿ ಎಷ್ಟು ಎರಡನೆಯ ವೇಷ ಮುಂಡಾಸ ಉಂಟೋ ಇಲ್ಲಿಯೂ ಅಷ್ಟೇ ಎರಡನೇ ವೇಷ, ಮುಂಡಾಸ ಇರಬೇಕು. ಹಾರಾಡಿಯವರು ಮಂದಾರ್ತಿ ಮೇಳದಲ್ಲಿ ಪ್ರಸಿದ್ಧರಾದರೆ, ಮಟಪಾಡಿಯವರು ಮಾರಣಕಟ್ಟೆ ಮೇಳದಲ್ಲಿ. ಮೂರನೆಯ ಇನ್ನೊಂದು ಗುಂಪು ಹಾಲಾಡಿಯ ಮೇಳದ ಹಿನ್ನೆಲೆ ಇರುವ ಮಾರ್ವಿ ಮನೆತನದ್ದು. ಮಾರ್ವಿ ಶ್ರೀನಿವಾಸ ಉಪ್ಪೂರರು, ಕಾಸಾಡಿ ನಾಗಪ್ಪಯ್ಯ, ಮಾರ್ವಿ ರಾಮಕೃಷ್ಣ ಹೆಬ್ಬಾರರು, ವಾದಿರಾಜ ಹೆಬ್ಬಾರರು, ಮದ್ದಲೆಗಾರ ವಾಸುದೇವ ಉಪ್ಪೂರರು, ಅನಂತರ ನಾರಣಪ್ಪ ಉಪ್ಪೂರರು. (ಹಿರಿಯ ಕಲಾವಿದ ಮಾರ್ಗೋಳಿ ಗೋವಿಂದ ಸೇರಿಗಾರರ ಹೇಳಿಕೆ - ಒಂದು ಸಂದರ್ಶನದಲ್ಲಿ) ಕಾಸಾಡಿ ನಾಗಪ್ಪಯ್ಯ ಆ ಕಾಲದ ಪ್ರಸಿದ್ಧ ಪುರುಷ ವೇಷಧಾರಿಗಳು. ಅನಂತರ ಪ್ರಸಿದ್ಧರಾದ ಸಕ್ಕಟ್ಟು ಗಣಪತಿ ಪ್ರಭುಗಳ ಗುರುಗಳು.

ಸಕ್ಕಟ್ಟು ಗಣಪತಿ ಪ್ರಭುಗಳಿಗಿಂತ ಹಿರಿಯರು ಸಕ್ಕಟ್ಟು ಸುಬ್ಬಣ್ಣಯ್ಯ. ಅವರು ಪ್ರಸಿದ್ಧ ವೇಷಧಾರಿ ಪಾಂಡೇಶ್ವರ ಪುಟ್ಟಯ್ಯನವರ ಭಾವನೆಂಟ. ನಿಜ ಜೀವನದಲ್ಲೂ ಭಾವನೆಂಟರಾಗಿದ್ದ ಪುಟ್ಟಯ್ಯ, ಸಕ್ಕಟ್ಟು ಸುಬ್ಬಣ್ಣಯ್ಯ, ಅರ್ಜುನ- ಕೃಷ್ಣರಾಗಿ (ಕೃಷ್ಣಾರ್ಜುನ ಕಾಳಗ ಪ್ರಸಂಗದಲ್ಲಿ "ತುಂಟ ಗಯನ ನೆವದಿಂದ ಜಗಳವನ್ನು ಗಂಟು ಮಾಡಿದೆ ನಮಗೆ" ಎನ್ನುವ ಪದಗಳಿಗಾಗಿ ಮಾಡುವ ಸಂವಾದವು ಪ್ರೇಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸುತ್ತಿತ್ತು. ಹೆಂಗಸರಿಗಂತೂ ಆ ಸಂಭಾಷಣೆಯನ್ನು ಕೇಳುವುದಕ್ಕೆ ಬಹಳ ಸಂತೋಷ (ವಿದ್ವಾನ್ ಕಾಡಪ್ಪನವರ ಲೇಖನ, 88-89, "ಮುಂದಲೆ" ರಜತ ಸಂಚಿಕೆ 88-89, ಸವಿನಯ ಯುವಕ ಮಂಡಲ ಸಾಸ್ತಾನ, ಪುಟ -33 )

ಸಕ್ಕಟ್ಟು ಸುಬ್ಬಣ್ಣಯ್ಯ ಶಿರಿಯಾರದ ಸಮೀಪದ ಕೊಳ್ಕೆಬೈಲು ಗ್ರಾಮದ ಸಕ್ಕಟ್ಟು ಎಂಬಲ್ಲಿ ಜನಿಸಿದವರು. ಅವರು ಯಕ್ಷಗಾನದ ಸವ್ಯಸಾಚಿ ಎನಿಸಿದ್ದರು. ಚಂಡೆ, ಮದ್ದಳೆ ಬಾರಿಸುತ್ತಿದ್ದರು, ಪದ್ಯ ಹೇಳುತ್ತಿದ್ದರು, ಪುರುಷ ವೇಷ ಮಾಡುತ್ತಿದ್ದರು. ಕೃಷ್ಣನ ವೇಷ ಇವರಿಗೇ ಮೀಸಲು. ಪಾಂಡೇಶ್ವರ ಪುಟ್ಟಯ್ಯನವರ ಅರ್ಜುನ, ಇವರ ಕೃಷ್ಣ ಒಂದು ಜೋಡಿಯಾಗಿ ಬಹುಕಾಲ ಮೆರೆದಿತ್ತು. ಇವರಿಗೆ ಬಹಳಷ್ಟು ಪ್ರಶಸ್ತಿ ಉಡುಗೊರೆಗಳು ಬಂದಿದ್ದವು. ಇವರ ಪುತ್ರ ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ ಮುಂದೆ ಬಣ್ಣದ ವೇಷ (ರಾಕ್ಷಸ ವೇಷ) ಮಾಡಿ ಹೆಸರು ಪಡೆದವರು. (ನಮ್ಮೂರ ಯಕ್ಷರು ಪುಟ -89) ಇನ್ನೊಬ್ಬ ಮಗ ಸಕ್ಕಟ್ಟು ಸೀತಾರಾಮಯ್ಯ ವೃತ್ತಿಯಲ್ಲಿ ಅಧ್ಯಾಪಕರಾದರೂ, ಅನೇಕ ಶಿಷ್ಯರಿಗೆ ಯಕ್ಷಗಾನವನ್ನು ಕಲಿಸಿದ ಹವ್ಯಾಸಿ ಕಲಾವಿದರು.

ಈ ಭಾಗದ ಇನ್ನೊಬ್ಬ ಹಿರಿಯ ಯಕ್ಷಗಾನ ಕಲಾವಿದ ಬಣ್ಣದ ವೇಷದಲ್ಲಿ ದಂತ ಕತೆಯಾಗಿ ಹೋದ ಕೊಳ್ಕೆಬೈಲು ಬಣ್ಣದ ಕುಷ್ಟ ಶಿರಿಯಾರಕ್ಕೆ ಸಮೀಪದ ಕೊಳ್ಕೆಬೈಲು ಗ್ರಾಮದಲ್ಲಿ ಜನಿಸಿದ ಇವರ ಪ್ರಾಥಮಿಕ ಶಿಕ್ಷಣ ಎತ್ತಿನ ಹಟ್ಟಿಯಲ್ಲಾಯ್ತು. ಈ ಪ್ರದೇಶದ ಇತರರಂತೆ ಬಡಗುತಿಟ್ಟಿನ ಮೇಳಗಳಲ್ಲಿ ನಾಲ್ಕಾರು ವರ್ಷ ಕಳೆದ ಮೇಲೆ ತೆಂಕಿನ ಧರ್ಮಸ್ಥಳ ಮೇಳಕ್ಕೆ ಹೋಗಿ ಅಲ್ಲಿ ನಾಲ್ಕಾರು ವರ್ಷ ತಿರುಗಾಟ ಮಾಡಿ, ರಾಕ್ಷಸ (ಬಣ್ಣ) ವೇಷದ ಮುಖ ಬರೆಯುವಿಕೆ, ಚಿಟ್ಟೆ ಇಡುವಿಕೆಯ ಅಭ್ಯಾಸ ಮಾಡಿ ಬಂದರು. ಅನಂತರದ ತಿರುಗಾಟಗಳನ್ನು ಮಾರಣಕಟ್ಟೆ ಮಂದರ್ತಿ ಮೇಳಗಳಲ್ಲಿ ಮಾಡಿ ಹೆಸರು ಗಳಿಸಿದರು.

ಉಪ್ರಳ್ಳಿ ಶೇಷಯ್ಯನವರ ಮೈರಾವಣ ಇವರ ರಾವಣ, ಅವರ ವಾಲಿ, ಇವರ ಸುಗ್ರೀವ ಇಂತಹ ಜೋಡಿ ತುಂಬಾ ಚೆನ್ನಾಗಿರುತ್ತಿತ್ತು. ಸೀತಾಪಹಾರದ ರಾವಣನ ವೇಷದಲ್ಲಿ ಇವರನ್ನು ಮೀರಿಸುವವರು ಇರಲಿಲ್ಲ. ಬಣ್ಣದ ವೇಷದಲ್ಲಿ ಇರುವ ಒಂದೊಂದು ಚಿಟ್ಟೆಗೆ ಎರಡು ಕವಲು ಮಾಡುತ್ತಿದ್ದುದು ಇವರ ವಿಶೇಷ. ಡಾ. ಶಿವರಾಮ ಕಾರಂತರು ತಮ್ಮ ಯಕ್ಷಗಾನ ಬಯಲಾಟ ಪುಸ್ತಕದಲ್ಲಿ ಇವರ ಶೂರ್ಪನಖಿ, ನರಸಿಂಹ, ಸುಗ್ರೀವ ಮುಂತಾದ ಬಣ್ಣದ ವೇಷದ ಚಿತ್ರಗಳನ್ನು ಹಾಕಿದ್ದಾರೆ. (ನಮ್ಮೂರ ಯಕ್ಷರು ಪುಟ -18)

ಸಕ್ಕಟ್ಟು ಗಣಪತಿ ಪ್ರಭುಗಳು ರಾಷ್ಟ್ರಪ್ರಶಸ್ತಿ ವಿಜೇತ ಪ್ರಸಿದ್ಧ ಕಲಾವಿದ ಹಾರಾಡಿ ರಾಮ ಗಾಣಿಗರಿಗಿಂತ ಹಿಂದಿನ ತಲೆಮಾರಿನ ಬಹು ದೊಡ್ಡ ಕಲಾವಿದರು. ತನ್ನ ಹದಿನೈದನೆಯ ವರ್ಷ ವಯಸ್ಸಿನ ತನಕ ಅಂದಿನ ಐಗಳ ಮಠದಲ್ಲಿ ವಿದ್ಯಾಭ್ಯಾಸ ಮಾಡಿದರು. ಐಗಳ ಮಠದಲ್ಲಿ ಓದು ಬರಹ ಕಲಿಯುವಾಗ ರಾಮಾಯಣದೊಳಗಿನ ಪದ್ಯಗಳು, ಸರ್ವಜ್ಞನ ಪದ್ಯಗಳು, ಯಕ್ಷಗಾನ ಪ್ರಸಂಗಗಳ ಪದ್ಯಗಳು ಇವೇ ಮುಂತಾದವುಗಳನ್ನು ಕಂಠಪಾಠ ಮಾಡಿಸುತ್ತಿದ್ದರಂತೆ. ಅನಂತರ ತನ್ನ ಹದಿನಾರನೆಯ ವರ್ಷದಲ್ಲಿ ಪ್ರಸಿದ್ಧ ವೇಷಧಾರಿ ಗುಂಡಾಲು ಅಣ್ಣಪ್ಪಯ್ಯ ಎಂಬುವರ ಜೊತೆ ಯಕ್ಷಗಾನ ಬಯಲಾಟದ ಮೇಳಕ್ಕೆ

ಸೇರಿದರಂತೆ. ಮುಂದೆ ಮೂರು ತಿರುಗಾಟ (ವರ್ಷ)ಗಳನ್ನು ಮಾಡುತ್ತಿರುವಷ್ಟರಲ್ಲಿ ಆ ಕಾಲದಲ್ಲಿ ಕುಣಿತವೇ ಮೊದಲಾದ ವೇಷಗಾರಿಕೆಯ ಎಲ್ಲಾ ಅಂಗಗಳಲ್ಲಿ ನುರಿತ ಪ್ರಸಿದ್ಧ ವೇಷಧಾರಿ ಕಾಸಾಡಿ ನಾಗಪ್ಪಯ್ಯ ಎಂಬವರ ಜೊತೆಯಿಂದ ಹಾರಾಡಿ ಮೇಳಕ್ಕೆ ಹೋಗುವ ಅವಕಾಶ ಲಭಿಸಿತು. ಅವರ ಗುರುತ್ವದಲ್ಲಿ ಹತ್ತು ಹಲವು ವಿಷಯಗಳನ್ನು ಅಭ್ಯಾಸ ಮಾಡಿ, ಕೆಲವು ದಿನಗಳಲ್ಲಿ ನಾಗಪ್ಪಯ್ಯನವರಂತೆಯೇ ನರ್ತಿಸಲು ತೊಡಗಿದರಂತೆ. ಮಾತ್ರವಲ್ಲ, ತನ್ನ ಗುರು ನಾಗಪ್ಪ ಯ್ಯನವರನ್ನು ಮೀರಿಸುವಷ್ಟರ ಮಟ್ಟಕ್ಕೆ ಮುಟ್ಟಿದರು. ಮುಂದೆ ಪ್ರಭುಗಳ ಹೆಸರು ಜನಜನಿತವಾಗಿ ಹಾರಾಡಿ ಮೇಳದ ಮುಖ್ಯ ವೇಷಧಾರಿಯ ಸ್ಥಾನಕ್ಕೆ ಗಣಪತಿ ಪ್ರಭುಗಳನ್ನು ಆರಿಸಿದರು. (ನಿನ್ನೆಯ ಮನ್ನೆಯರು ಕೋಟ ಶ್ರೀನಿವಾಸ ನಾಯಕ, ಪುಟ 19-21)

ಗಣಪತಿ ಪ್ರಭುಗಳು ಬಯಲಾಟ ಮೇಳದ ವೇಷಗಳನ್ನು ಚಂದ ಮಾಡಲು ಹಲವು ಕ್ರಮಗಳನ್ನು ಹಾಕಿಕೊಟ್ಟರು ಹಾಗೂ ವೇಷಕ್ಕೆ ಬೇಕಾದ ಸಾಮಾನುಗಳನ್ನು ತಯಾರಿಸಿದರು. ಮೊದಲು ಕೇದಗೆ ಮುಂದಲೆಗೆ ಹುಲ್ಲು ಜಡೆ ಇರಲಿಲ್ಲ. ಮಣಿಯ ತಾವರೆ, ತುರಾಯಿಗಳನ್ನು ತಯಾರಿಸಿದವರು ಕೂಡಾ ಇವರೇ. ಕೊರಳಡ್ಡಿಗೆ, ಮುಂಡಾಸಿಗೆ ಜರಿ, ಈಶ್ವರನ ವೇಷ ಮುಂತಾದವುಗಳನ್ನು ಮಾಡುವ ವಿಧಾನವನ್ನೂ ಗಣಪತಿ ಪ್ರಭುಗಳೇ ತಿಳಿಸಿ ಕೊಟ್ಟರು. ಕೇದಗೆ ಮುಂದಲೆ ವೇಷ, ಕಿರೀಟದ ರಾಮ, ಭೀಮ, ಮುಂಡಾಸಿನ ವೇಷದ ಕರ್ಣ, ಚಿತ್ರಸೇನ, ಇಂದ್ರ ಕೀಲಕದ ಶಬರ, ಕೀಚಕ, ಭದ್ರಸೇನ, ತಾಮ್ರಧ್ವಜ ಇತ್ಯಾದಿ ವೇಷಗಳಲ್ಲಿ ಇವರಿಗೆ ಸರಿಗಟ್ಟುವವರಿರಲಿಲ್ಲ. ಮಿತವಾದ ಮಾತು, ತಾಳಕ್ಕೆ ಸರಿಯಾದ ಕುಣಿತ, ವೇಷದ ಸೊಬಗು ನೋಡಿಯೇ ಮರುಳಾಗಬೇಕು. ಕಲಾವಿದರೇ ಸಂತೋಷಪಡುತ್ತಿದ್ದರು. ಇವರಿಗಾಗಿಯೇ ಕೆಲವು ಪ್ರಸಂಗಗಳು ಆಗುತ್ತಿದ್ದವು. ಅವುಗಳಲ್ಲಿ ತಾಮ್ರಧ್ವಜ, ಅತಿಕಾಯಕಾಳಗ, ರುಕ್ಮಾಂಗದ ಚರಿತ್ರೆಗಳನ್ನು ಹೆಸರಿಸಬಹುದು. ಅವರ ಪೂಜೆಯ ಸಂದರ್ಭದ ರುಕ್ಮಾಂಗದ ನೋಡಿ ಮೆಚ್ಚದವರಿಲ್ಲ. ಆ ಪ್ರಸಂಗ ಅವರಿಂದಲೇ ಆರಂಭಗೊಂಡು ಅವರೊಂದಿಗೇ ಮಾಯವಾಯಿತು. (ಬಿ. ವೀರಭದ್ರನಾಯಕ - ನಮ್ಮೂರ ಯಕ್ಷರು ಪುಟ -3) ಹಾರಾಡಿ ರಾಮಗಾಣಿಗರನ್ನು ಒಮ್ಮೆ ರುಕ್ಮಾಂಗದನ ವೇಷ-ಮಾಡಲು ಕೇಳಿಕೊಂಡಾಗ, ಮಾಫಿ ಮಾಡಬೇಕು. ರುಕ್ಮಾಂಗದ ವೇಷಕ್ಕಾಗಿ ಹುಟ್ಟಿದ ಪ್ರಭುಗಳು ಸ್ವರ್ಗಸ್ಥರಾದರು. ಅವರ ಹಾಗೂ ರುಕ್ಮಾಂಗದ ವೇಷದ ಗೌರವ ನಾವು ಹಾಳುಮಾಡಬಾರದಲ್ಲ, ಬೇರಾವ ವೇಷ ಮಾಡಬೇಕೆಂದರೂ ಮಾಡುತ್ತೇನೆ ಎಂದರಂತೆ. (ಹಾರಾಡಿ ರಾಮ ಗಾಣಿಗರು, ನೆನಪಿನ ಸಂಚಿಕೆ - ಸೀತಾನದಿ ಗಣಪಯ್ಯ ಶೆಟ್ಟಿ, ಪುಟ -12) 1934ರಲ್ಲಿ ಡಾ. ವಿ. ರಾಘವನ್ ಅವರು ಮದರಾಸಿನಲ್ಲಿ ಪ್ರದರ್ಶನ ನೀಡಿದ ಪೆರಡೂರು ಮೇಳದ ಆಟಗಳನ್ನು ನೋಡಿ, "ಮುಖ್ಯಪಾತ್ರವನ್ನು ವಹಿಸುವ ಶ್ರೀ ಗಣಪತಿ ಪ್ರಭುಗಳವರು ಶ್ರೇಷ್ಠ ನಟರು. ಉತ್ತಮ ನರ್ತಕರು. ದಕ್ಷಿಣ ಕನ್ನಡದಲ್ಲೆಲ್ಲ ಅವರು

ಬಲ್ಲಿದರೆಂದು ಕೇಳಿದ್ದೇನೆ. ರುಕ್ಮಾಂಗದನಂಥ ಧೀರೋದಾತ್ತ ಮತ್ತು ಧೀರಶಾಂತ ಪಾತ್ರಗಳನ್ನು ವಹಿಸಿದಾಗ ಅವರ ಅಂಗ ಚಲನೆಯು ಸೊಗಸಾಗಿರುವುದು. ಅವರ ಕಂಠ ಚಲನ (ಗ್ರೀವಾರೇಚಕ) ಮತ್ತು ಎದೆ ಕೈಗಳ ಚಲನಗಳು ಉತ್ಕೃಷ್ಟವಾಗಿರುವವು. ಕಣ್ಣುಗಳಿಂದ ಭಾವಗಳನ್ನು ಪ್ರಕಟಿಸುವ ಅವರ ಸಾಮರ್ಥ್ಯವು ಅಚ್ಚರಿಗೊಳಿಸುವಂತಹದು. ಹಲವು ಆಟಗಳಲ್ಲಿ ಅವರ ಮುಖಮುದ್ರಾ ಕೌಶಲ್ಯಗಳನ್ನು ನಾನು ಕಂಡಿದ್ದೇನೆ. ಅವರ ಭೀಷ್ಮ ಭೀಮ ರುಕ್ಮಾಂಗದ ವೇಷಗಳ ಅಭಿನಯವು ಮೇಲ್ತರಗತಿಯದು. ಅನೇಕ ಉದಯ ಶಂಕರರಿಗೆ ಅವರು ಸಾಟಿಯಾಗಬಲ್ಲರು" ಎಂದಿದ್ದಾರೆ. (ನಮ್ಮೂರ ಯಕ್ಷರು - ಅನುಬಂಧ ಪುಟ -15)

ಗಣಪತಿ ಪ್ರಭುಗಳ ಸಮಕಾಲೀನರಾದ ಈ ಭಾಗದ ಇನ್ನೊಬ್ಬ ಪ್ರಸಿದ್ಧ ವೇಷಧಾರಿ ಕೊಳ್ಕೆಬೈಲು ಹಿರಿಯ ನಾಯ್ಕರು. ಮೊಗವೀರ ಕುಟುಂಬದಲ್ಲಿ ಹುಟ್ಟಿ ಪ್ರಾಥಮಿಕ ಶಾಲೆಯ ಶಿಕ್ಷಣವನ್ನು ಮುಗಿಸಿದ ಇವರನ್ನು ಕಂಡ ಪಾಂಡೇಶ್ವರ ಪುಟ್ಟಯ್ಯನವರು "ಮಗೂ, ನೀನು ಮೇಳಕ್ಕೆ ಬಾ" ಎಂದು ಕರೆದೊಯ್ದು ಕುಣಿತ ಹೇಳಿಕೊಟ್ಟು, ಒಂದೆರಡು ವರ್ಷ ಜೊತೆಯಲ್ಲಿ ತಿರುಗಾಟ ಮಾಡಿಸಿ. ಸಣ್ಣ ಪ್ರಾಯದಲ್ಲಿಯೇ ಪ್ರಸಿದ್ಧರಾಗಿ, ಕ್ರಮವಾಗಿ ಪುರುಷವೇಷ ಮಾಡುವವರೆಗೆ ಬೆಳೆದರು.

ಗಣಪತಿ ಪ್ರಭುಗಳ ಜೊತೆಯಲ್ಲಿ ಪುರುಷ ವೇಷ ಮಾಡುವಾಗ, ಪರಸ್ಪರ ವೈಷಮ್ಯ ಉಂಟಾಗಿ, ಊರು ಬಿಟ್ಟು ಉತ್ತರ ಕನ್ನಡ ಜಿಲ್ಲೆಯ ಅಂಕೋಲಕ್ಕೆ ಹೋಗಿ ಅಲ್ಲಿ ಕೆಲವರಿಗೆ ಕುಣಿತ ಕಲಿಸಿ, ಬಾವಿಕೆರೆ ಮೇಳ ಮಾಡಿ ನಾಲ್ಕಾರು ವರ್ಷ ತಿರುಗಾಟ ಮಾಡಿದರು. ಆ ಮೇಲೆ ಊರಿಗೆ ಮರಳಿ ಸೌಕೂರು ಮೇಳಕ್ಕೆ ಸೇರಿದರು. ಅನಂತರ ಮಂದರ್ತಿ ಮೇಳದಲ್ಲಿ ಕೂಡಾ ಕೆಲವು ತಿರುಗಾಟ ಮಾಡಿದರು. (ನಮ್ಮೂರ ಯಕ್ಷರು ಪುಟ -8)

ಕೊಳ್ಕೆಬೈಲು ಶೀನನಾಯ್ಕರು ಈ ಭಾಗದ ಪ್ರಸಿದ್ಧ ಸ್ತ್ರೀ ವೇಷಧಾರಿ. ಕೊಕ್ಕರ್ಣೆ ಗಣಪಯ್ಯನವರಿಂದ ತಾಳ ಕಲಿತು, ಮಾವ ಹಿರಿಯ ನಾಯ್ಕರ ಜೊತೆಯಲ್ಲಿ ಮೇಳಕ್ಕೆ ಸೇರಿದರು. ಬಿ. ವೀರಭದ್ರ ನಾಯ್ಕರಿಂದ ಹೆಜ್ಜೆ ಕಲಿತು, ಕ್ರಮವಾಗಿ ಸಣ್ಣ ವೇಷಗಳಲ್ಲಿ ಖ್ಯಾತಿ ಗಳಿಸಿ, ಸಖೀ ವೇಷ, ಮುಖ್ಯ ಸ್ತ್ರೀ ವೇಷ ಮಾಡಿ ಜನಮೆಚ್ಚುಗೆ ಗಳಿಸಿದರು. ವೇಷ ಚಂದವಾಗುತ್ತಿತ್ತು. ಅರ್ಥಗಾರಿಕೆಯಲ್ಲೂ ಜಾಣರಾಗಿದ್ದರು. ಸ್ವರ, ಕುಣಿತಗಳೂ ಚೆನ್ನಾಗಿದ್ದವು. ವಿರಾಟ ಪರ್ವದಲ್ಲಿ ಸೈರಂಧ್ರಿಯ ವೇಷ ಮಾಡಿ, ಸಭೆಯನ್ನು ಮರುಗಿಸುತ್ತಿದ್ದರು. ಶಶಿಪ್ರಭೆ, ದ್ರೌಪದಿ, ಸುಭದ್ರೆ, ಸತ್ಯಭಾಮೆ. ಇವು ಕೊಳ್ಕೆಬೈಲು ಶೀನ ಅವರ ಪ್ರಸಿದ್ಧ ವೇಷಗಳು. ಅಂಗದ ಸಂಧಾನದ ಅಂಗದನ ಪಾತ್ರವನ್ನೂ ಚೆನ್ನಾಗಿ ಮಾಡುತ್ತಿದ್ದರು. ಸುಧನ್ವ ಮುಂತಾದ ಭಕ್ತಿಯ ವೇಷಗಳೂ ಅವರಿಗೆ ಒಪ್ಪುತ್ತಿದ್ದವು. ಹೆಚ್ಚು ಕಾಲ ಮಂದರ್ತಿ ಮೇಳದಲ್ಲಿಯೇ ತಿರುಗಾಟ ಮಾಡಿದ ಶೀನ ಅವರು ಪೊಳಲಿ (ತೆಂಕುತಿಟ್ಟು) ರಾಜರಾಜೇಶ್ವರಿ ಮೇಳದಲ್ಲಿ ಕೂಡಾ ಸೇವೆ ಸಲ್ಲಿಸಿದ್ದಾರೆ.

ಹಾರಾಡಿ ರಾಮ ಗಾಣಿಗರ ನೆನಪಾದಾಗ ಮುಖ್ಯವಾಗಿ ನೆನಪಿಗೆ ಬರುವುದು ದಿವಂಗತ ಶೇಷಗಿರಿ ಭಾಗವತರು ಮತ್ತು ಕೊಳ್ಕೆಬೈಲು ಶೀನರವರ ಹೆಸರುಗಳು. ರಾಮ ಗಾಣಿಗರು ರಂಗಸ್ಥಳದ ಮುಂದೆ ಇದ್ದು, ಅವರ ಪಕ್ಕದಲ್ಲಿ ಶೀನರವರೂ, ಹಿಂದೆ ಶೇಷಗಿರಿಯವರೂ ಇರಬೇಕು. ಆಗ ಆಟದ ರಂಗೇ ಬೇರೆ. ಜೊತೆಗೆ ಹಾರಾಡಿ ಕುಷ್ಟನವರೂ ಮತ್ತು ನಾರಾಯಣನವರೂ ಸೇರಿದರೆಂದರೆ ಪ್ರೇಕ್ಷಕರು ಹುಚ್ಚೆದ್ದು ಕುಣಿದಾರು.

ಶ್ರೀರಾಮ ಗಾಣಿಗರ ಜೊತೆಯಲ್ಲಿ ಸ್ತ್ರೀ ವೇಷಧಾರಿಯಾಗಿ ಪ್ರಸಿದ್ಧರಾದವರು ದಿವಂಗತ ಕೊಳ್ಕೆಬೈಲು ಶೀನರವರು. ರಾಮನವರದ್ದೂ ಶೀನರವರದ್ದೂ ಬಹು ಒಳ್ಳೆಯ ಜೊತೆ. ಎಷ್ಟು ಒಳ್ಳೆಯವದೆಂದರೆ ಈ ಜೊತೆಯಿಲ್ಲದಿದ್ದರೆ ಆಟ ನೋಡುವುದೇ ಬೇಡ ಎಂಬಷ್ಟು. ಕೆಲವು ವೇಷಗಳಲ್ಲಿ ಕೊಕ್ಕರ್ಣೆ ನರಸಿಂಹನವರನ್ನೂ ಮೀರಿಸುವ ಶೀನರವರು ನಡು ವಯಸ್ಸಿನಲ್ಲಿ ತೀರಿಕೊಂಡದ್ದು ನಮ್ಮ ದುರ್ದೈವ. ಮಾತುಗಾರಿಕೆಯಲ್ಲಿ ಶೀನರವರು, ವೀರಭದ್ರ ನಾಯ್ಕರು ಮತ್ತು ತೆಕ್ಕಟ್ಟೆ ಬಾಬಣ್ಣಯ್ಯನಷ್ಟೇ ಪ್ರಸಿದ್ಧರಾದವರು. ಕುಣಿತದಲ್ಲಿಯೂ ವೀರಭದ್ರ ನಾಯ್ಕರು ಮತ್ತು ಕುಷ್ಟ ಗಾಣಿಗರಷ್ಟೇ ಉತ್ತಮರು. ಶೀನರವರು ಅಭಿನಯಿಸುತ್ತಿದ್ದ ಪ್ರತಾಪದ ದ್ರೌಪದಿ, ಕಯಾದು (ಪ್ರಹ್ಲಾದ ಚರಿತ್ರೆ ಪ್ರಸಂಗದಲ್ಲಿ) ಮೊದಲಾದವು ಮರೆಯಲಾರದಂಥವು. ಶೀನರವರ ಕಯಾದುವಿಲ್ಲದೇ ಗಾಣಿಗರ ಕಶ್ಯಪುವನ್ನು ನೋಡುವುದು ಬೇಡವೆಂದೇ ಹೆಚ್ಚಿನವರ ಅಭಿಪ್ರಾಯ. ಜಾಂಬವತಿ ಕಲ್ಯಾಣದಲ್ಲಿ ಗಾಣಿಗರ ಜಾಂಬವ ಮತ್ತು ಶೀನರವರ ಕೃಷ್ಣ ಕೂಡ ಅಷ್ಟೇ ಒಳ್ಳೆಯ ಜೊತೆ. ತಾಳಮದ್ದಲೆಗಳಲ್ಲಿ ಶೀನರವರ ಅಂಗದ ಮತ್ತು ವೀರಭದ್ರರವರ ಪ್ರಹಸ್ತವನ್ನು ಇಲ್ಲಿನವರು ಬಹುಬಾರಿ ಕಂಡಿದ್ದಾರೆ. (ಹಾರಾಡಿ ರಾಮ ಗಾಣಿಗರು, ನೆನಪಿನ ಸಂಚಿಕೆ, ಎಚ್. ಸುಬ್ಬಣ್ಣ ಭಟ್, ಪುಟ– 41-42 )

ದಿವಂಗತ ಕೊಳ್ಕೆಬೈಲು ಕುಷ್ಟರವರ ನಂತರ ಕೊಳ್ಕೆಬೈಲು ಸಂಜೀವರವರು ಶಿರಿಯಾರದ ಗುಂಡರವರು ಮತ್ತು ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯನವರು ಈ ಭಾಗದಲ್ಲಿ ಬಣ್ಣದ ವೇಷಧಾರಿಗಳಾಗಿ ಪ್ರಸಿದ್ಧರಾದರು. ಸಕ್ಕಟ್ಟು ಸುಬ್ಬಣ್ಣಯ್ಯನವರ ಮಗನಾದ ಲಕ್ಷ್ಮೀನಾರಾಯಣಯ್ಯನವರ ಹಿಡಿಂಬಾಸುರ, ಘಟೋತ್ಕಚ ಮೊದಲಾದ ರಾಕ್ಷಸ ವೇಷಗಳು ಇಂದಿಗೂ ಯಕ್ಷಗಾನ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿವೆ. ಯಕ್ಷಗಾನ ವೇಷಗಾರಿಕೆಯ ವೈಶಿಷ್ಟ್ಯದ ಒಂದು ಪ್ರಾತಿನಿಧಿಕ ರೂಪ ಬಣ್ಣದ ವೇಷ. ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ ಒಬ್ಬ ಅಪೂರ್ವ ಬಣ್ಣದ ವೇಷಧಾರಿ. ಬಣ್ಣದ ವೇಷದ ಸಾಂಪ್ರದಾಯಿಕತೆಯನ್ನು ಯಶಸ್ವಿಯಾಗಿ ಚಿತ್ರಿಸಬಲ್ಲ ಇವರು ಹಳೆಯ ಮತ್ತು ಹೊಸ ತಲೆಮಾರುಗಳ ನಡುವಿನ ಕೊಂಡಿಯಂತಿದ್ದಾರೆ. ತನ್ನ ಎಳೆಯ ವಯಸ್ಸಿಗೇ ತಂದೆಯನ್ನು ಕಳೆದುಕೊಂಡ ಇವರು 13ನೆಯ ವಯಸ್ಸಿಗೆ ಅಮೃತೇಶ್ವರಿ ಮೇಳಕ್ಕೆ ಸೇರಿದರು. ತಮ್ಮ ತಂದೆಯ ಶಿಷ್ಯರಾದ ಜಂಬೂರು ಶ್ರೀನಿವಾಸ ಭಾಗವತರಿಂದ ತಾಳ, ಪಾಂಡೇಶ್ವರ

ಸದಾಶಿವಯ್ಯನವರಿಂದ ಕುಣಿತ, ಕೊಳ್ಕೆಬೈಲು ಕುಪ್ಪನವರಿಂದ ಬಣ್ಣಗಾರಿಕೆ, ಬೇಳೂರು ಶೀನರವರಿಂದ ಅರ್ಥಗಾರಿಕೆ ಹೀಗೆ ಯಕ್ಷಗಾನದ ವಿವಿಧ ಅಂಗಗಳನ್ನು ಕಲಿತರು. ಬಣ್ಣದ ವೇಷಕ್ಕೆ ಹೇಳಿ ಮಾಡಿಸಿದಂತಿದ್ದ ಅಂಗಸೌಷ್ಠವ, ಸ್ವರ ಅವರದು. ಆದ್ದರಿಂದಲೇ ಇವರ ಪಾತ್ರಗಳು ರಂಗದ ಮೇಲೆ ಅದ್ಭುತವಾಗಿ ಕಳೆಗಟ್ಟಿದ್ದವು. ರಾವಣ, ಮೈರಾವಣ, ಘಟೋತ್ಕಚ, ಹಿಡಿಂಬಾಸುರ ಮೊದಲಾದ ಪಾತ್ರಗಳು ಅವರಿಗೆ ಯಶಸ್ಸು ತಂದವು. ಬಣ್ಣದ ವೇಷಧಾರಿಯಾಗಿಯೇ ಅವರು ಗುರುತಿಸಲ್ಪಡುತ್ತಾರಾದರೂ, ಸ್ತ್ರೀ ವೇಷ ಹೊರತು ಯಕ್ಷಗಾನದ ಉಳಿದೆಲ್ಲ ಬಗೆಯ ವೇಷಗಳನ್ನೂ ಅವರು ಮಾಡಿದ್ದಾರೆ. ಡಾ. ಶಿವರಾಮ ಕಾರಂತರ ಯಕ್ಷರಂಗದಲ್ಲಿ ಭಾಗವಹಿಸಿ ಅವರು ದೇಶವಿದೇಶ ಪ್ರಯಾಣ ಮಾಡಿದ್ದಾರೆ. ಕಾರಂತರ ನೃತ್ಯ ನಾಟಕಗಳಾದ ಭೀಷ್ಮ ವಿಜಯದಲ್ಲಿ ಸಾಲ್ವ, ಕನಕಾಂಗಿ ಕಲ್ಯಾಣದಲ್ಲಿ ಘಟೋತ್ಕಚ ಅವರ ಗಮನಾರ್ಹವಾದ ಪಾತ್ರಗಳು.

ಪ್ರಸಿದ್ಧ ಸ್ತ್ರೀ ವೇಷಧಾರಿ ಅರಾಟೆ ಮಂಜುನಾಥರು ಈಗ ಈ ಪರಿಸರದ ಗಾವಳಿಯಲ್ಲೇ ನೆಲೆಸಿ, ಇಲ್ಲಿನ ಚಟುವಟಿಕೆಗಳಿಗೆ ಸ್ಫೂರ್ತಿಯನ್ನು ತುಂಬುತ್ತಿದ್ದಾರೆ. ಶಿರಿಯಾರದ ಸಮೀಪದ ಹಳ್ಳಾಡಿಯಲ್ಲಿ ಹಿಂದೆ ಒಂದು ಬಯಲಾಟದ ಮೇಳವಿತ್ತೆಂದೂ, ಅದು ನಿಂತ ಮೇಲೆ ಹಾರಾಡಿ ಮೇಳ ಆರಂಭವಾಯಿತೆಂದೂ ಹೇಳುತ್ತಾರೆ. ಹಾರಾಡಿ ಮೇಳ ನಿಂತಾಗ ಸೌಕೂರು ಮೇಳ ಆರಂಭವಾಯಿತಂತೆ. ಈಗ ಹಾರಾಡಿ, ಸೌಕೂರು ಎರಡೂ ಮೇಳಗಳೂ ನಡೆಯುತ್ತಿವೆ. ಶಿರಿಯಾರ ಭೂತದ ಕೋಲ ಕಟ್ಟುವ ಪಾಣಾರ ಜಾತಿಯವರು ನೆಲೆಸಿರುವ ಊರು. ಇಲ್ಲಿಗೆ ಸಮೀಪದಲ್ಲೇ ಇರುವ ಮೆಕ್ಕೆಕಟ್ಟೆಯ ಮರದ ಉರುಗಳು (ಎತ್ತರದ ಮೂರ್ತಿಗಳು) ಪ್ರಸಿದ್ಧವಾಗಿವೆ. ಇಂದೂ ಕೂಡ ಶಿರಿಯಾರ ಪರಿಸರದಲ್ಲಿ ಅನೇಕ ತರುಣ ಕಲಾವಿದರಿದ್ದಾರೆ. ಅವರಿಂದ ಯಕ್ಷಗಾನ ಕಲೆ ಮುಂದೆ ಬಾಳಿ ಬೆಳಗುವುದರಲ್ಲಿ ಸಂದೇಹವಿಲ್ಲ.

*****

## ಶಿರಿಯಾರದ ಪ್ರಭೆ

ಶಿರಿಯಾರ, ಕೊಳ್ಕೆಬೈಲು ಮತ್ತು ಸಕ್ಕಟ್ಟು ಒಂದಕ್ಕೊಂದು ಹೊಂದಿಕೊಂಡಿರುವ ಊರುಗಳು. ಈ ಪರಿಸರಕ್ಕೆ ಸೇರಿದ ಹಳ್ಳಾಡಿ, ಮತ್ಯಾಡಿ, ಗಾವಳಿ ಕೂಡಾ ಇದೇ ಪ್ರಭಾವಳಿಯಲ್ಲಿ ಯಕ್ಷಗಾನ ಕಲೆಗೆ ನಿರಂತರವಾಗಿ ಸೇವೆ ಸಲ್ಲಿಸಿದ ಅನೇಕ ಹಿರಿಯ ಕಿರಿಯ ಕಲಾವಿದರ ನೆನಪನ್ನು ನೀಡುವ ಊರುಗಳಾಗಿವೆ. ಈ ಊರುಗಳಲ್ಲಿ ನೆಲಸಿದ ಇನ್ನಷ್ಟು ಕಲಾವಿದರನ್ನು ಕುರಿತು ಹೇಳಿದರೆ ಶಿರಿಯಾರ ಹೇಗೆ ಯಕ್ಷಗಾನದ ಒಂದು ಪ್ರಭಾವಶಾಲಿ ಕೇಂದ್ರವಾಗಿ ಹಿಂದಿನಿಂದಲೂ ಬೆಳೆದು ಬಂದಿದೆ ಎಂದು ತಿಳಿಯಬಹುದಾಗಿದೆ. ಈ ಪ್ರದೇಶಕ್ಕೆ ಬಂದು ನೆಲೆಸಿದ ಮಜ್ಜಿಗೆಬೈಲು ಚಂದಯ್ಯ ಶೆಟ್ಟರು ಹಳೆಯ ತಲೆಮಾರಿನ ಪ್ರಸಿದ್ಧ ಕಲಾವಿದರಲ್ಲೊಬ್ಬರು. ಪ್ರಸಿದ್ಧ ಪುರುಷ ವೇಷಧಾರಿಗಳಾಗಿ ಮಂದರ್ತಿ, ಮಾರಣಕಟ್ಟೆ, ಅಮೃತೇಶ್ವರಿ, ಹಿರಿಯಡ್ಕ, ಪೆರ್ಡೂರು, ಕೊಡವೂರು ಮೊದಲಾದ ಮೇಳಗಳಲ್ಲಿ ತಿರುಗಾಟ ಮಾಡಿದವರು. ಮದರಾಸು, ಮುಂಬಯಿ, ಬೆಂಗಳೂರುಗಳಲ್ಲಿ ನಡೆದ ಪ್ರದರ್ಶನಗಳಲ್ಲೂ ಭಾಗವಹಿಸಿ ಜನಮೆಚ್ಚುಗೆ ಗಳಿಸಿದವರು. (ಒಡ್ಡೋಲಗ - ಬಂಟರ ಯಕ್ಷಗಾನ ಕಲೋತ್ಸವ ಸಮಿತಿ, ಮಂಗಳೂರು - ಕಂದಾವರ ರಘುರಾಮ ಶೆಟ್ಟರ ಲೇಖನ – 434) ಇವರ ಶೃಂಗಾರ ರಾವಣ, ವಲಲ, ಮಧುಕೈಟಭ ಪಾತ್ರಗಳು ತುಂಬಾ ಜನಪ್ರಿಯವಾಗಿದ್ದವು. ಇವರ ಅಳಿಯ ಬಿಲ್ಲಾಡಿ ಮಂಜಯ್ಯ ಶೆಟ್ಟಿ ಮತ್ತು ಮಗ ಆನಂದ ಶೆಟ್ಟಿ ಕೂಡ ಯಕ್ಷಗಾನ ಕಲಾವಿದರಾಗಿದ್ದಾರೆ.

ಹಳ್ಳಾಡಿ ಶೀನ ಹಳೆಯ ತಲೆಮಾರಿನ ಪ್ರಮುಖ ಕಲಾವಿದರಲ್ಲೊಬ್ಬರು. ಒಳ್ಳೆಯ ಪುರುಷ ವೇಷಧಾರಿ, ಮಾತುಗಾರರು. ಇವರು ನಡೆಸುತ್ತಿದ್ದ ರಾಮಾಯಣ, ಭಾರತ ವಾಚನದಲ್ಲಿ ಶಿರಿಯಾರ ಮಂಜು ನಾಯ್ಕರು ಸಹಭಾಗಿಗಳಾಗಿರುತ್ತಿದ್ದರು. ಹಳ್ಳಾಡಿ ಶೀನರವರ ಅಳಿಯ ಹಳ್ಳಾಡಿ ಕೃಷ್ಣಪ್ಪ ಕೂಡಾ ಒಬ್ಬ ಪ್ರಮುಖ ವೇಷಧಾರಿಗಳಾಗಿದ್ದಾರೆ.

ಶಿರಿಯಾರ ಮಂಜು ನಾಯ್ಕರು ಮಳೆಗಾಲದ ನವರಾತ್ರಿ ಸಮಯದಲ್ಲಿ ಹೂವಿನ ಕೋಲು ತಿರುಗಾಟ ಮಾಡುತ್ತಿದ್ದರು. ಇಬ್ಬರು ಹುಡುಗರಿಗೆ ಯಕ್ಷಗಾನದ ಮಾತುಗಾರಿಕೆಯನ್ನು ಕಲಿಸಿ, ತಾವು ಪದ್ಯ ಹೇಳುತ್ತಾ ಮನೆ ಮನೆಗೆ ಹೋಗಿ 5-10 ನಿಮಿಷಗಳ ಕಾರ್ಯಕ್ರಮ ನೀಡುವುದು ಹೂವಿನ ಕೋಲು ತಿರುಗಾಟದ ಕ್ರಮ. ಪದ್ಯ ಹೇಳುವಾಗ ಜತೆಯಲ್ಲಿ ಮದ್ದಲೆ ವಾದಕರು ಮಾತ್ರ ಇರುತ್ತಾರೆ. ಶಿರಿಯಾರ ಮಂಜು ನಾಯ್ಕರ ಜತೆಗೆ ಹೂವಿನ ಕೋಲು ತಿರುಗಾಟ ಮಾಡಿದ ಹುಡುಗರಾದ ಎಂ. ಎ. ನಾಯ್ಕರು ಈಗ ಬಡಗುತಿಟ್ಟಿನ ಪ್ರಸಿದ್ಧ ಸ್ತ್ರೀ ವೇಷಧಾರಿಗಳಲ್ಲೊಬ್ಬರಾಗಿದ್ದಾರೆ. ನರಾಡಿ ಭೋಜ ಶೆಟ್ಟಿ ಪ್ರಮುಖ ಪುರುಷ ಪಾತ್ರಧಾರಿಗಳಾಗಿದ್ದಾರೆ. ಶಿರಿಯಾರ ಮಂಜು ನಾಯ್ಕರ ಹತ್ತಿರದ ಸಂಬಂಧಿ ಕೋಟ ವೈಕುಂಠ ಕೂಡ ಶಿರಿಯಾರದಲ್ಲೇ ನೆಲೆಸಿದವರು. ಬಡಗುತಿಟ್ಟಿನ ಅಗ್ರಮಾನ್ಯ ಸ್ತ್ರೀ ವೇಷಧಾರಿಗಳಾದ ಇವರು ಇತ್ತೀಚೆಗಷ್ಟೇ ನಿಧನರಾದರು. ಹಳ್ಳಾಡಿ ಜಯರಾಮ ಶೆಟ್ಟಿ ಹಾಸ್ಯ ಕಲಾವಿದರಾಗಿ ಈಗ ಪ್ರಸಿದ್ಧರಾಗಿದ್ದಾರೆ.

ಮತ್ಯಾಡಿ ನರಸಿಂಹ ಶೆಟ್ಟರು ಭಾಗವತರಾಗಿ ಈ ಭಾಗದಿಂದ ಪ್ರಸಿದ್ಧರಾದವರು. ಇವರ ಅಣ್ಣ ವಿಠಲ ಶೆಟ್ಟರು ಕೂಡಾ ಭಾಗವತರಾಗಿದ್ದರು. ಶಿರಿಯಾರದ ಚೆರ್ಡಪ್ಪ ಯ್ಯ ಎಂಬವರು ಹಳೆಯ ತಲೆಮಾರಿನ ಭಾಗವತರಾಗಿ ಜನಮನದಲ್ಲಿ ನೆಲೆಸಿದವರಾಗಿದ್ದಾರೆ. ಎತ್ತಿನಹಟ್ಟಿ ಚೆರ್ಡಪ್ಪ ಯ್ಯ ಎಂದೂ ಇವರನ್ನು ನೆನಪಿಸುತ್ತಾರೆ. ಹಳ್ಳಾಡಿ ಸುಬ್ರಾಯ ಮಲ್ಯ ಈ ಭಾಗದಲ್ಲಿ ಹವ್ಯಾಸಿ ಕಲಾವಿದರಾಗಿ ಮದ್ದಲೆ, ಚಂಡೆವಾದಕರಾಗಿ ಪ್ರಸಿದ್ಧರು. ಅನೇಕ ಹವ್ಯಾಸಿ ಯಕ್ಷಗಾನ ಕಲಾವಿದರಿಗೆ ಗುರುಗಳೂ ಆಗಿದ್ದಾರೆ. ಇವರ ಅಣ್ಣ, ತಂದೆ ಕೂಡಾ ಹವ್ಯಾಸೀ ಯಕ್ಷಗಾನ ಕಲಾವಿದರಾಗಿದ್ದರು. ಇವರ ಮಗ ರಾಕೇಶ ಮಲ್ಯ ಕೂಡಾ ಯಕ್ಷಗಾನ ಚೆಂಡೆ ವಾದಕರಾಗಿ ಮೇಳಗಳಲ್ಲಿ ತಿರುಗಾಟ ನಡೆಸಿದ್ದಾರೆ. ಗಾವಳಿ ಚಂದಯ್ಯ ಶೆಟ್ಟಿ ಹಳೆಯ ತಲೆಮಾರಿನ ಒಬ್ಬ ಚೆಂಡೆ ವಾದಕರಾಗಿ ಪ್ರಸಿದ್ಧರು.

ಶಿರಿಮಠ ಪಂಜು, ಶಿರಿಯಾರದ ಗುಂಡ ಯಕ್ಷಗಾನದ ಕಿರೀಟ, ಮುಂಡಾಸ ವೇಷಗಳನ್ನು ಮಾಡುತ್ತಾ ಯಕ್ಷಗಾನ ಮೇಳಗಳಲ್ಲಿ ತಮ್ಮ ಜೀವಮಾನ ಕಳೆದವರು. ಶಿರಿಯಾರ ಗುಂಡರವರ ಬಣ್ಣದ ವೇಷ, ಕೊಳ್ಕೆಬೈಲು ಕುಷ್ಟನವರ ಬಣ್ಣದ ವೇಷದ ಪರಂಪರೆಗನುಗುಣವಾಗಿಯೇ ಇತ್ತು.

ಶಿರಿಯಾರದಲ್ಲಿ ಹಿಂದೆ ಕೋಲ ಕಟ್ಟುವ ಪಾಣವರು ಒಂದು ಮೇಳ ಮಾಡಿದ್ದರಂತೆ. ಅಲ್ಲಲ್ಲಿ ಆಟವಾಡುತ್ತಾ ಊರಿನ ಜಮೀನ್ದಾರರ ಬಳಿ ಆಟ ಕೇಳಲು ಹೋದಾಗ, ಅವರು ತಮ್ಮ ಮನೆಗೆಲಸ ಅಥವಾ ಗದ್ದೆಯ ಕೆಲಸ ಮಾಡಲು ಹೇಳಿ (ಗೊಬ್ಬರ ಹೊರಲು) ಅವಮಾನಿಸಿದರೆಂದೂ, ಅದರಿಂದಾಗಿ ಮುಂದೆ ಆ ಮೇಳ ನಿಂತು ಹೋಯಿತೆಂದೂ ಹೇಳುತ್ತಾರೆ.

ಬಡಗುತಿಟ್ಟಿನ ಯಕ್ಷಗಾನ ಹಿಂದೆ ಹಳ್ಳಿಯ ಕಲೆಯಾಗಿದ್ದು, ಯಕ್ಷಗಾನ ಕಲಾವಿದರೆಲ್ಲಾ ಹೆಚ್ಚಾಗಿ ಬಡವರೇ ಆಗಿದ್ದರು. ಊರಿನ ಜಮೀನ್ದಾರರು ಯಕ್ಷಗಾನ ಕಲೆಯ ಬಗ್ಗೆ ಆಸಕ್ತಿ ಹೊಂದಿದವರಾಗಿದ್ದರೆ, ಮಂದರ್ತಿ ಮೊದಲಾದ ದೇವಸ್ಥಾನಗಳ ಹೆಸರಿನಿಂದ ಹೊರಡುವ ಮೇಳಗಳ ಆಟಗಳನ್ನು ಆಡಿಸಿ ಪ್ರೋತ್ಸಾಹಿಸುತ್ತಿದ್ದರು. ಕೊಳ್ಕೆಬೈಲು ಬಂಟರ ಮನೆತನದವರು ಬಡಗುತಿಟ್ಟಿನಲ್ಲಿ ಪ್ರಸಿದ್ಧವಾದ ಮಂದರ್ತಿ ಮೇಳದ ಪ್ರಮುಖ ಪೋಷಕರಾಗಿದ್ದರು. ಪ್ರತೀವರ್ಷ ಮೇಳದ ಕಲಾವಿದರ ಆಯ್ಕೆಯಲ್ಲೂ ಕೆಲವೊಮ್ಮೆ ತಮ್ಮ ಪ್ರಭಾವ ಬೀರುತ್ತಿದ್ದರು. 1930ರ ದಶಕದಲ್ಲಿ ಮಂದರ್ತಿ ಮೇಳದ ಪ್ರಮುಖ ಕಲಾವಿದರೂ, ಯಜಮಾನರೂ ಆಗಿದ್ದ ಗಣಪತಿ ಪ್ರಭುಗಳು ಅಲ್ಲಿಯ ತನಕ ಆ ಮೇಳಗಳಲ್ಲಿ ಮೆರೆದಾಡಲು, ಅನಂತರ ಆ ಮೇಳದ ಪ್ರಮುಖ ಕಲಾವಿದರಾಗಿ ಹಾರಾಡಿ ರಾಮ ಗಾಣಿಗರ ಆಯ್ಕೆಯಾಗಲು ಕೊಳ್ಕೆಬೈಲು ಶೆಟ್ಟರ ಪ್ರಭಾವ ಕಾರಣವಾಗಿತ್ತೆಂದು ತಿಳಿದುಬರುತ್ತದೆ.

ಹೀಗೆ ಶಿರಿಯಾರ ಬಡಗುತಿಟ್ಟು ಯಕ್ಷಗಾನದ ಒಂದು ಶಕ್ತಿ ಕೇಂದ್ರವಾಗಿತ್ತು. ಅಲ್ಲಿ ಯಕ್ಷಗಾನದ ಶ್ರೇಷ್ಠ ಕಲಾವಿದರೂ, ಪೋಷಕರೂ ಬದುಕಿ, ಬೆಳಗುತ್ತಾ ಬಂದಿದ್ದು ಆ ಊರಿಗೂ ಕಲೆಗೂ ಹೆಸರು ತಂದಿದ್ದಾರೆ. ಸಕ್ಕಟ್ಟು ಗಣಪತಿ ಪ್ರಭುಗಳು, ಕೊಳ್ಕೆಬೈಲು ಹಿರಿಯ ನಾಯ್ಕ, ಕೊಳ್ಕೆಬೈಲು ಶೀನ ನಾಯ್ಕರು, ಕೊಳ್ಕೆಬೈಲು ಕುಷ್ಟ ಇವರೆಲ್ಲರ ಜತೆಗೆ ಶಿರಿಯಾರದ ಮಂಜು ನಾಯ್ಕರು ಯಕ್ಷಗಾನದ ತಾರೆಯಾಗಿ ಎಲ್ಲಾ ಕಾಲದಲ್ಲೂ ಮಿಂಚುತ್ತಿರುತ್ತಾರೆ.

*****

# ನೆನಪುಗಳು

# ಕೊಳ್ಕೆಬೈಲು ಯಕ್ಷಗಾನ ಕಲಾವಿದದ್ವಯರು

ಉಡುಪಿ ಜಿಲ್ಲೆಯ ಶಿರಿಯಾರ ಗ್ರಾಮದ ಶಿರಿಯಾರ, ಕೊಳ್ಕೆಬೈಲು ಹಾಗೂ ಸಕ್ಕಟ್ಟು ಒಂದಕ್ಕೊಂದು ಹೊಂದಿಕೊಂಡಿರುವ ಕೂಡೂರುಗಳು. ಈ ಪರಿಸರವು ಯಕ್ಷಗಾನ ರಂಗಕ್ಕೆ ರತ್ನಪ್ರಾಯರೆನಿಸಿದ ಕಲಾವಿದರನ್ನಿತ್ತಿದೆ. ತಮ್ಮ ಮಾತುಗಾರಿಕೆಯಿಂದ, ನೃತ್ಯ ಅಭಿನಯಗಳಿಂದ, ಸಹಜ ಸುಂದರ ವೇಷಗಾರಿಕೆಯಿಂದ ಮೆರೆದು ಯಕ್ಷರಂಗದಲ್ಲಿ ತಮ್ಮ ಛಾಪನ್ನು ಪ್ರೇಕ್ಷಕರಲ್ಲಿ ನಿರಂತರ ಉಳಿಯುವಂತೆ ಮಾಡಿ ಮರೆಗೆ ಸರಿದ ಸಾರ್ಥಕ ಕಲಾವಿದರಾದ ಕೀರ್ತಿಶೇಷ ಗಣಪತಿ ಪ್ರಭುಗಳು, ಸಕ್ಕಟ್ಟು ಸುಬ್ಬಣ್ಣಯ್ಯ ಇಂತಹ ಮೇರು ನಟರನ್ನು ಯಕ್ಷರಂಗಕ್ಕಿತ್ತ ಕೀರ್ತಿ ಈ ಪರಿಸರದ್ದಾಗಿದೆ. ಇವರಂತೆ ಯಕ್ಷರಂಗದಲ್ಲಿ ಮಿಂಚಿದ ಕೊಳ್ಕೆಬೈಲು ಆನೆಗಲ್ಲಿನ ಕಲಾವಿದದ್ವಯರ ಪರಿಚಯವನ್ನು ನೀಡುವುದು ಈ ಲೇಖನದ ಮೂಲೋದ್ದೇಶ.

ಕೊಳ್ಕೆಬೈಲಿನ ಹಿರಿಯ ನಾಯ್ಕರು ಇಪ್ಪತ್ತನೇ ಶತಮಾನದ ಆದಿ ಭಾಗದಲ್ಲಿ ಜನಿಸಿದವರು. ಇವರು ಶಾಲೆಯಲ್ಲಿ ಕಲಿತದ್ದಕ್ಕಿಂತ ರಂಗ ಸ್ಥಳದಲ್ಲಿ ಹಿರಿಯ ನಟರಿಂದ ಕಲಿತದ್ದೇ ಹೆಚ್ಚು. ತಮ್ಮ ಹದಿನೈದನೆಯ ವಯಸ್ಸಿಗೆ ಮೇಳಕ್ಕೆ ಸೇರಿ 5-6 ವರ್ಷಗಳಲ್ಲೇ ಪುರುಷ ವೇಷದ ಹಂತಕ್ಕೆ ಏರಿದ ಮಹಾ ಸಾಧಕರು. ದೈವದತ್ತವಾದ ಸುದೃಢ ಅಂಗ ಸೌಷ್ಠವ, ಸುಂದರಕಾಯ, ಶ್ರಮದಿಂದ ಸಾಧಿಸಿಕೊಂಡ ನೃತ್ಯ ಹಾಗೂ ಮಾತುಗಾರಿಕೆ ಅವರೊಬ್ಬ ಶ್ರೇಷ್ಠ ಕಲಾವಿದರಾಗಿ ರೂಪುಗೊಳ್ಳಲು ಸಹಾಯಕವಾಯಿತು. ಅವರ ಜೀವನದ ಬಹು ಭಾಗವು ಬೇರೆ ಬೇರೆ ಮೇಳಗಳಲ್ಲಿ ದಿ. ಗಣಪತಿ ಪ್ರಭುಗಳ 2ನೇ ವೇಷಕ್ಕೆ ಪುರುಷ ವೇಷಧಾರಿಯಾಗಿಯೇ ಇದ್ದು ಅವರಿಬ್ಬರ ಜೋಡಿ ಒಂದು ಜನಪ್ರಿಯ ಜೋಡಿಯಾಗಿಯೇ ವಿಜೃಂಭಿಸಿತು. 2ನೇ ವೇಷಧಾರಿಯ ಗೈರು ಹಾಜರಿಯಲ್ಲಿ ಸ್ವತಃ ಹಿರಿಯ ನಾಯ್ಕರು ಆ ವೇಷಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದರು. ಎಲ್ಲಾ ಪ್ರಸಂಗಗಳ ಅರ್ಜುನ, ಚೂಡಾಮಣಿಯ ಸುಂದರ ರಾವಣ, ಬಕಾಸುರ ವಧೆಯ ಬಂಡಿಭೀಮ ಇವರಿಗೆ ಅತೀ ಜನಪ್ರಿಯತೆಯನ್ನು ಗಳಿಸಿಕೊಟ್ಟ ಪಾತ್ರಗಳು. ತನ್ನ ಎದುರಾಳಿ ಯಾರೇ ಇರಲಿ,

ಒಂದಿಷ್ಟೂ ಅಂಜದೆ, ಅಳುಕದೆ ತನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲ ಎದೆಗಾರಿಕೆಯ ವೇಷಧಾರಿ. ಯಕ್ಷಗಾನ ಕ್ಷೇತ್ರಕ್ಕೆ ಒದಗಿದ ಶಾಪವೋ ಎಂಬಂತೆ ಇವರು ನಡುವಯಸ್ಸಿನಲ್ಲೇ (38-40) ಇಹಲೋಕ ತ್ಯಜಿಸಿದ ಪರಿಣಾಮ ಯಕ್ಷ ಮಾತೆಯ ಮಣಿಮುಕುಟದ ಅನರ್ಘ್ಯ ರತ್ನವೊಂದು ಕಳಚಿ ಬಿದ್ದಂತಾಯಿತು.

ಇನ್ನೋರ್ವ ಕಲಾವಿದರಾದ ಕೊಳ್ಕೆಬೈಲು ಶೀನ ನಾಯ್ಕರು ಮೇಲೆ ಹೇಳಿದ ಹಿರಿಯ ನಾಯ್ಕರ ಸೋದರಳಿಯ. ಸಾಧಾರಣ ಕ್ರಿ. ಶ. 1918ರಲ್ಲಿ ಇವರ ಜನನವಾದಂತೆ ತಿಳಿದುಬರುತ್ತದೆ. ಇವರು ಆರಂಭದಲ್ಲೇ ಸ್ತ್ರೀ ವೇಷಧಾರಿಯಾಗಿ ಮೇಳಕ್ಕೆ ಸೇರಿ ಕೇವಲ 23 ವರ್ಷಗಳಲ್ಲೇ ಪ್ರಧಾನ ಸ್ತ್ರೀ ಭೂಮಿಕೆಯನ್ನಲಂಕರಿಸಿದ ಓರ್ವ ಧೀಮಂತ ಕಲಾವಿದ. ಇವರು ನೃತ್ಯದಲ್ಲಿ ಪರಿಣತರು. ಮೇಲಾಗಿ ತನ್ನ ವಿದ್ವತ್ಪೂರ್ಣ ಮಾತುಗಾರಿಕೆಯಿಂದ ಆ ಕಾಲದ ಯಕ್ಷಗಾನ ರಂಗದ ಶ್ರೇಷ್ಠ ಮಾತುಗಾರರ ಸರಣಿಗೆ ಸೇರಿದ ಪ್ರತಿಭಾವಂತ ಕಲಾವಿದರು. ಇವರ ಹೆಚ್ಚಿನ ಕಲಾ ಜೀವನವು ಮಂದರ್ತಿ ಮೇಳದಲ್ಲೇ ನಡೆದು ರಾಷ್ಟ್ರ ಪ್ರಶಸ್ತಿ ವಿಜೇತರಾದ ದಿ. ಹಾರಾಡಿ ರಾಮ ಗಾಣಿಗರಿಗೆ ಸಾಥಿ ಸ್ತ್ರೀ ವೇಷಧಾರಿಯಾಗಿದ್ದು ಇವರಿಬ್ಬರ ಜೋಡಿಯು ಜನಪ್ರಿಯ ಜೋಡಿಯಾಗಿತ್ತು. ರಾಮ ಗಾಣಿಗರ ಭೀಷ್ಮ ಹಾಗೂ ಇವರ ಅಂಬೆ ಒಂದು ಅದ್ಭುತ ಲೋಕವನ್ನು ಸೃಷ್ಟಿಸುವ ಕಲಾ ವೈಭವ ಎನ್ನುವಂತಿತ್ತು. ನೃತ್ಯ ಹಾಗೂ ಮಾತುಗಾರಿಕೆಯಲ್ಲಿ ನಿಸ್ಸೀಮರೆನಿಸಿದ ಶೀನ ನಾಯ್ಕರಿಂದ ಕೆಲವೊಮ್ಮೆ ರಾಮ ಗಾಣಿಗರು ಭೀಷ್ಮನ ಪಾತ್ರವನ್ನು ನಿರ್ವಹಿಸಲು ಪ್ರೋತ್ಸಾಹ ಪಡೆಯುತ್ತಿದ್ದರು. ಅವರ ಹೆಜ್ಜೆಗಾರಿಕೆ ಹಾಗೂ ಮಾತುಗಾರಿಕೆಯನ್ನು ಮೆಚ್ಚಿ ಶ್ಲಾಘಿಸುತ್ತಿದ್ದರು. ಸಂದರ್ಭಾನುಸಾರ ಸ್ತ್ರೀ ವೇಷವನ್ನಲ್ಲದೆ ಹಲವಾರು ಪುರುಷ ಪಾತ್ರಗಳನ್ನು ಶೀನ ನಾಯ್ಕರು ನಿರ್ವಹಿಸುತ್ತಿದ್ದರು. ಮಳೆಗಾಲದಲ್ಲಿ ಇವರು ಇನ್ನೋರ್ವ ಪ್ರಸಿದ್ಧ ವೇಷಧಾರಿಯಾದ ಗುರು ವೀರಭದ್ರ ನಾಯ್ಕರೊಂದಿಗೆ ಬೆರತು. ಪರಸ್ಪರ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ಇಂತಹ ಕೊಡುಕೊಳ್ಳುವಿಕೆಯಿಂದಾಗಿ ಇಬ್ಬರ ಅನುಭವವೂ ಹೆಚ್ಚುವಂತಾಗಿ ಅವರ ಸ್ನೇಹ ಸಂವರ್ಧನೆಯು ಬಲಗೊಂಡಿತು. ವೀರಭದ್ರ ನಾಯ್ಕರು ಹಾಗೂ ಶೀನ ನಾಯ್ಕರು ಮೇಳದಲ್ಲಿ ಜೊತೆಯಾಗಿದ್ದಾಗ ಬೆಳಗಿನ ಜಾವದಲ್ಲಿ ಅಂಗದ ಸಂಧಾನ ಇಡುವುದು ಸಾಮಾನ್ಯವಾಗಿತ್ತು. ಇವರಿಬ್ಬರ ವಾಕ್ಚಾತುರ್ಯ ಕೇಳುವುದಕ್ಕಾಗಿಯೇ ಆ ಪ್ರಸಂಗವನ್ನು ಕೊಡುತ್ತಿದ್ದರು. ಶೀನ ನಾಯ್ಕರ ಅಂಗದ, ವೀರಭದ್ರ ನಾಯ್ಕರ ಪ್ರಹಸ್ತ ಮಾತುಗಾರಿಕೆಯಲ್ಲಿ ಒಬ್ಬರನ್ನೊಬ್ಬರು ಮೀರಿ ರಂಜಿಸುತ್ತಿದ್ದರು. ಇಂತಹ ಓರ್ವ ಅಪರೂಪದ ಅಸಾಮಾನ್ಯ ಸ್ತ್ರೀ ವೇಷಧಾರಿ ತನ್ನ ಕಿರಿ ವಯಸ್ಸಿನಲ್ಲೇ ಅಸುನೀಗಿದರು. ಇವರ ಸ್ತ್ರೀ ವೇಷಕ್ಕೆ ಬಹುಕಾಲ 2ನೇ ವೇಷಧಾರಿಯಾಗಿ ರಂಗದಲ್ಲಿ ಮೆರೆದ ಹಾರಾಡಿ ರಾಮ ಗಾಣಿಗರು ಇವರ ನಿಧನದ ವಾರ್ತೆಯಿಂದ ಆಘಾತಗೊಂಡು "ಇಂದಿನಿಂದ ನನ್ನ ಅರ್ಧ ಬಲವೇ ಕುಂದಿತು' - ಎಂದು ಉದ್ಗರಿಸಿದ್ದು ಇವರ ಪ್ರತಿಭೆಗೆ ಜ್ವಲಂತ ನಿದರ್ಶನ.

# ವ್ಯಾಕರಣ ಶುದ್ಧ ಶೈಲಿಯ ಪಾತ್ರಧಾರಿ
# ಶ್ರೀ ಶಿರಿಯಾರ ಮಂಜು ನಾಯ್ಕರು

ಭಾಗವತ ಐರೋಡಿ ರಾಮ ಗಾಣಿಗ

ಶ್ರೀ ಮಂಜು ನಾಯ್ಕರು ನನ್ನಿಂದ ಆರೇಳು ವರ್ಷ ಕಿರಿಯರು. ಆದರೆ ಅವರ ಸಾಧನೆ ಹಿರಿದಾದುದು.

1940ರ ಸುಮಾರಿಗೆ ಮೇಳದಲ್ಲಿ ನಾನು ಸಹಭಾಗವತನಾಗಿ ಅವರ ಬಾಲಗೋಪಾಲ ವೇಷ ಕುಣಿಸಿದ ನೆನಪು. ಮಾರ್ಗೋಳಿ ಗೋವಿಂದ ಸೇರೆಗಾರ್ ಮತ್ತು ಶಿರಿಯಾರ ಮಂಜು ನಾಯ್ಕರು ಒಟ್ಟಿಗೇ ವೇಷ ಮಾಡುತ್ತಿದ್ದರು. ಆಮೇಲೆ 1975ರಲ್ಲಿ ಸಾಲಿಗ್ರಾಮ ಮೇಳದಲ್ಲಿ ಮಂಜು ನಾಯ್ಕರು ಪುರುಷ ವೇಷಧಾರಿಯಾಗಿದ್ದಾಗ ನಾನು ಭಾಗವತನಾಗಿ ಅವರ ವೇಷ ಕುಣಿಸುವ ಸಂದರ್ಭ ಒದಗಿತ್ತು. ಮಧ್ಯ ನಾನು ಮೇಳದ ತಿರುಗಾಟ ಬಿಟ್ಟು ಅಧ್ಯಾಪಕನಾಗಿ, ಪ್ರವೃತ್ತಿಯಲ್ಲಿ ಯಕ್ಷಗಾನದ ಬಹುಮುಖ ಸಾಧನೆ ಕೈಗೊಳ್ಳುವ ಸೌಲಭ್ಯ ಲಭಿಸಿತ್ತು.

ಮೇಳದ ತಿರುಗಾಟದಲ್ಲಿ ಎರಡೇ ಸಾರಿ ಅವರು ನನಗೆ ಸಿಕ್ಕಿದ್ದರಾದರೂ, ಅವರ ಹೆಂಡತಿ ಮನೆ ನಾನೀಗ ವಾಸವಾಗಿರುವ ಕುಂಭಾಸಿಯ ನಮ್ಮ ಮನೆಗೆ ಸಮೀಪವೇ ಇದ್ದುದರಿಂದ ಆಗಾಗ ನನಗೆ ಸಿಗುತ್ತಿದ್ದು, ಕಲೆಯ ಕುರಿತು ಅವರ ನಿಜಜೀವನದ ಕುರಿತು ಆಗಾಗ ಲೋಕಾಭಿರಾಮವಾಗಿ ಮಾತುಕತೆ ಆಡಿಕೊಳ್ಳುತ್ತಿದ್ದೆವು ಹಾಗೂ ಅವರ ಔರಸ ಪುತ್ರ ರಮೇಶ ಎಂಬಾತ ನಾನು ಅಧ್ಯಾಪಕನಾಗಿದ್ದ ಶಾಲೆಯ ವಿದ್ಯಾರ್ಥಿಯಾಗಿದ್ದು ಅವನ ವಿದ್ಯಾ ಪ್ರಗತಿಯ ಕುರಿತು ನನ್ನೊಡನೆ ವಿಚಾರ ವಿನಿಮಯ ನಡೆಸಲು ಆಗಾಗ ನನ್ನನ್ನು ಭೇಟಿಯಾಗುತ್ತಿದ್ದರು. ಹಾಗಾಗಿ ಅವರ ನಿಕಟ ಪರಿಚಯ ಕಲಾತ್ಮಕವಾಗಿಯೂ, ವ್ಯಾವಹಾರಿಕವಾಗಿಯೂ ನನಗಿದೆ. ಶ್ರೀ ಮಂಜು ನಾಯ್ಕರು ಒಬ್ಬ ಉತ್ತಮ ಕಲಾವಿದ. ಅವರು ಬರೇ ಪ್ರಾಥಮಿಕ ವಿದ್ಯಾಭ್ಯಾಸ ಹೊಂದಿದ್ದರೂ ಸಹ ಅರ್ಥಗಾರಿಕೆಯಲ್ಲಿ ಕನ್ನಡ ಎಂ.ಎ. ಪಾಸು ಮಾಡಿದವರಿಗಿಂತಲೂ ಹೆಚ್ಚು ನಿಷ್ಣಾತರಾಗಿ, ಉತ್ತಮ ಶೈಲಿಯನ್ನು

ರೂಪಿಸಿಕೊಂಡವರು. ಇವರ ಮಾತನ್ನು ಕೇಳಲಿಕ್ಕಾಗಿಯೇ ಬಯಲಾಟಕ್ಕೆ ಬರುವವರ ಸಂಖ್ಯೆ ಅಸಂಖ್ಯಾತ. ಹಿತಮಿತವಾದ ನೃತ್ಯ, ಮುದ್ದಾದ ವೇಷ ಹಾಗೂ ಪ್ರತ್ಯುತ್ಪನ್ನಮತಿಯಾದ ಇವರ ಸಂಭಾಷಣಾ ವೈಖರಿ ಇವುಗಳು ಪ್ರೇಕ್ಷಕರ ಮನವನ್ನು ಸೂರೆಗೊಳ್ಳುತ್ತಿದ್ದವು.

ಗಂಭೀರವಾದ ಶಾರೀರ ಮತ್ತು ಶರೀರ ಇವೆರಡೂ ಇದ್ದಿದ್ದರೆ ಹಾರಾಡಿ ರಾಮ ಗಾಣಿಗ, ಗಣಪತಿ ಪ್ರಭುಗಳನ್ನೂ ಮೀರಿ ಯಕ್ಷ ಸಾಮ್ರಾಟರಾಗುತ್ತಿದ್ದರು ಎಂದು ನನ್ನ ಭಾವನೆ.

ಜಾಂಬವತಿ ಕಲ್ಯಾಣದಲ್ಲಿ ರಾಮ ಗಾಣಿಗರ ಜಾಂಬವ, ಮಂಜು ನಾಯ್ಕರ ಕೃಷ್ಣ ಒಂದು ಮಧುರವಾದ ಜೋಡಿ. ಪಾರಿಜಾತದ ಕೃಷ್ಣ, ಕೃಷ್ಣಾರ್ಜುನದ ಕೃಷ್ಣ, ಸುಧನ್ವ ಕಾಳಗದ ಕೃಷ್ಣ ಹೀಗೆ ಅನೇಕ ಪ್ರಸಂಗಗಳಲ್ಲಿ ಕೃಷ್ಣ ಪಾತ್ರಧಾರಿಯಾಗಿ ಅಭಿನವ ಶ್ರೀಕೃಷ್ಣನೇ ಆಗಿದ್ದಾರೆ. ಕಿರೀಟ ಮತ್ತು ಮುಂಡಾಸು ವೇಷಗಳಿಗಿಂತಲೂ ಇವರ ಕೇದಗೆ ಮುಂದಲೆ ವೇಷ ಮುದ್ದಾದ ವೇಷ ಎಂದೇ ಹೇಳಬಹುದು.

ಹಲವು ವರ್ಷಗಳ ಕಾಲ ಹಾರಾಡಿ ರಾಮ ಗಾಣಿಗ, ಗುರು ವೀರಭದ್ರ, ಹಾರಾಡಿ ಕುಷ್ಟ ಮತ್ತು ನಾರಾಯಣ ಗಾಣಿಗ, ಅರಾಟೆ ಮಂಜುನಾಥ ಮುಂತಾದವರೊಂದಿಗೆ ಶಿರಿಯಾರ ಮಂಜು ನಾಯ್ಕರು, ಯಕ್ಷಗಾನ ಕ್ಷೇತ್ರವನ್ನು ಅನಭಿಷಿಕ್ತ ದೊರೆಯಾಗಿ ಆಳಿದ್ದಾರೆ.

ಒಬ್ಬ ಕಲಾವಿದ ಸತ್ತೊಡನೆ ಕಲಾಕ್ಷೇತ್ರ ಬಡವಾಯಿತು, ತುಂಬಲಾರದ ನಷ್ಟವಾಯಿತು ಎಂದು ಔಪಚಾರಿಕವಾದ, ಕ್ಲೀಷೆಯ ಮಾತುಗಳನ್ನು ನಾವು ಕೇಳುತ್ತಲೇ ಬಂದಿದ್ದೇವೆ. ಆದರೆ ಶ್ರೀ ಮಂಜು ನಾಯ್ಕರ ಅಗಲಿಕೆಯಿಂದ ಅಂತಹ ಆಡಂಬರದ, ಔಪಚಾರಿಕವಾದ ಮತ್ತು ಕ್ಲೀಷೆಯ ಮಾತುಗಳಿಗೆ ಅರ್ಥವೇ ಇಲ್ಲ. ಆ ನಷ್ಟವು ಪ್ರತ್ಯಕ್ಷಾನುಭವದಿಂದ ಸಹಜವಾಗಿಯೇ ಕಲಾಕ್ಷೇತ್ರದಲ್ಲಿ ಕಂಡು ಬರುತ್ತಾ ಇದೆ.

ಅವರು ತನ್ನ ಪಾತ್ರದಲ್ಲಿ ಎಷ್ಟೊಂದು ತಾದಾತ್ಮ್ಯಭಾವ ತಳೆಯುತ್ತಿದ್ದರೆಂದರೆ ತನ್ನನ್ನು ತಾನು ಸಂಪೂರ್ಣ ಮರೆತುಬಿಡುತ್ತಿದ್ದರು. ಕಲೆಯನ್ನು ಸಂಪೂರ್ಣ ಅವರು ಒಲಿಸಿಕೊಂಡಿದ್ದಾರೆ. ಕಲೆಯೂ ಸಹ ಅವರಿಗೆ ಒಲಿದಿದೆ. ಹಾಗಾಗಿ ಕಲಾ ರಂಗದಲ್ಲೇ ತನ್ನೊಲವಿನ ಕಲಾವಿದನನ್ನು ಬಲಿ ತೆಗೆದುಕೊಂಡ ಆಕಸ್ಮಿಕ ಮತ್ತು ರೋಮಾಂಚಕಾರಿ ಕಥನವನ್ನೂ ಕೇಳಿದರೆ ಯಾರಿಗೂ ವ್ಯಥೆಯಾಗದಿರದು.

ಮಣಿಪಾಲದಲ್ಲಿ ಭೀಷ್ಮ ವಿಜಯ ಪ್ರಸಂಗದ ಆಟ. ಕೆರೆಮನೆ ಮಹಾಬಲ ಹೆಗ್ಡೆಯವರು ಭೀಷ್ಮ, ಇವರು ಪರಶುರಾಮ. ಕಿಕ್ಕಿರಿದ ಪ್ರೇಕ್ಷಕರು.

"ಗುರುವೆ ನಿನ್ನೊಳು ಸಮರಗೈಯುವೆ| ಪರಸುವುದು ಜಯವಾಗುವಂದದಿ......" ಎಂಬ ಪದ್ಯಕ್ಕೆ ಗುರುಗಳಿಂದ ಆಶೀರ್ವಾದ ಪಡೆದು ಯುದ್ಧೋನ್ಮುಖನಾದ ಭೀಷ್ಮನೊಡನೆ ರಣವೆಸಗುತ್ತಾ "ಪರಮ ಶಿಷ್ಯನೆ ನಿನ್ನಧುರಕೆ ಮೆಚ್ಚಿದೆ ನಾನು || ತೆರಳುವೆ ನಿನಗೆ ನಾ ಸೋತೆ" ಎಂಬ ಪದ್ಯಕ್ಕೆ ಕುಸಿದುಬಿದ್ದು ಹೃದಯಾಘಾತದಿಂದ ರಂಗಸ್ಥಳದಿಂದಲೇ ವೇಷ ಸಹಿತ ಹಲವಾರು ಜನ ಹೊತ್ತು ಆಸ್ಪತ್ರೆಗೆ ಸಾಗಿಸಿದರೂ ಫಲಕಾರಿಯಾಗದೆ ಯಕ್ಷಗಾನ ಕಲೆಗಾಗಿ ಅವತರಿಸಿದ ಅಭಿನವ ಶ್ರೀಕೃಷ್ಣನನ್ನು ಕಲಾಧಿದೇವತೆಯು ತನ್ನ ಮಡಿಲಿಗೆ ಸೇರಿಸಿಕೊಂಡಳು ಎಂಬ ಸುದ್ದಿ ಊರೆಲ್ಲಾ ಹರಡಿದಾಗ ಎಲ್ಲರ ಕಣ್ಣುಗಳಿಂದಲೂ ಅಶ್ರುತರ್ಪಣ. ಕಲೆಗಾಗಿ ದುಡಿದು, ಕಲೆಗಾಗಿಯೇ ತನ್ನ ದೇಹ ಸಮರ್ಪಿಸಿ ವೀರ ಮರಣವನ್ನೈದ ಶ್ರೀ ಮಂಜು ನಾಯ್ಕರ ಆತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಹಾರೈಸಿದ್ದೆವು.

ಇಂತಹ ವೀರ ಮರಣವನ್ನಪ್ಪಿದ ಕಲಾವಿದರನ್ನು ನಾನು ಈ ತನಕ ಕೇಳಿಲ್ಲ, ನೋಡಿಲ್ಲ, ಕಲೆಗಾಗಿ ಜನಿಸಿ, ಕಲೆಗಾಗಿ ದುಡಿದು, ಕೀರ್ತಿ ಸಂಪಾದಿಸಿ, ಕಲೆಯಲ್ಲೇ ಲೀನವಾಗಿ ಹೋದ ಅವತಾರ ಪುರುಷ, ಅಭಿನವ ಶ್ರೀಕೃಷ್ಣ ಶ್ರೀ ಮಂಜು ನಾಯ್ಕರು ಇನ್ನೊಮ್ಮೆ ಇದೇ ಕಲಾಕ್ಷೇತ್ರದಲ್ಲಿ ಅವತರಿಸಲಿ ಎಂದು ಹಾರೈಸಿ ನನ್ನ ಈ ನೆನಪಿನ ಗುಚ್ಛವನ್ನು ಅವರ ದಿವ್ಯ ಆತ್ಮಕ್ಕೆ ಸಮರ್ಪಿಸುವೆನು.

*****

# ಯಕ್ಷಗಾನದ ಸಿರಿ ಶಿರಿಯಾರ ಮಂಜು

ಡಾ. ಭಾಸ್ಕರಾನಂದ ಕುಮಾರ್

1982ರ ಮಳೆಗಾಲದ ಕೊನೆಯ ಆಟ. ಮಣಿಪಾಲದ ಗೋಲ್ಡನ್ ಜೂಬಿಲಿ ಹಾಲಿನಲ್ಲಿ. ಮೊದಲ ಪ್ರಸಂಗ "ಭೀಷ್ಮ ವಿಜಯ". ಆಮೇಲೆ "ಭೀಷ್ಮ ಪರ್ವ." ಮಹಾಬಲ ಹೆಗ್ಡೆಯವರ ವಿಜಯದ ಭೀಷ್ಮ ಪ್ರಸಂಗ ಮುಂದುವರಿಯುತ್ತಾ ಪರಶುರಾಮನ ಪ್ರವೇಶ. ಶಿರಿಯಾರದ ಮಂಜು ಈ ಪಾತ್ರವನ್ನು ವಹಿಸಿದ್ದರು.

ಆದಿನದ ಭೀಷ್ಮ ಪರಶುರಾಮರ ಭೇಟಿ ಅತ್ಯದ್ಭುತವಾಗಿತ್ತು. "ಹಿಂದಕ್ಕಿಪ್ಪತ್ತೊಂದು ಬಾರಿ....." ಏರಿಕೆಯಲ್ಲಿ ಬಂದ ಪರಶುರಾಮನ ಧ್ವನಿ. ಆದರೆ ಈ ಭೀಷ್ಮ ಪರಶುರಾಮರು ಅದೆಷ್ಟು ಬಾರಿ ಭೇಟಿಯಾಗಿದ್ದಾರೆಯೋ ? "ಕ್ಷತ್ರಿಯ ಕುಲವನ್ನು ಮೆಟ್ಟಿನಿಂತ ರಾಮನೆಂದು ತಿಳಿದೇ ಬಂದೆಯಾ" ಎಂದು ಕೇಳುವ ಮಂಜು ನಾಯ್ಕರ ಧ್ವನಿ ಭೀಷ್ಮನನ್ನು ಬೆರಗುಗೊಳಿಸುವಂತಿತ್ತು. ಗುರುವಿನ ಪರಂಪರೆಯ ವೇಷ ಭೂಷಣ, ಶ್ರುತಿ ಬದ್ಧವಾದ ಕಂಠ, ಚುಟುಕು ವಾಕ್ಯ ಪ್ರಯೋಗ ಹಾಗೂ ಪಾತ್ರ ಯೋಗ್ಯತೆಯನ್ನರಿತು ಮಂಡಿಸಿದ ವಿಚಾರಧಾರೆ ಹಾಗೂ ಶಬ್ದಪುಂಜ ಇವೆಲ್ಲ ಸಿರಿವಂತಿಕೆಯ ಶಿರಿಯಾರ ಮಂಜುವಿನ ಪಾತ್ರದಲ್ಲಿ ತುಂಬಿ ತುಳುಕುತ್ತಿತ್ತು. "ಪರಮ ಋಷಿ ಮಂಡಲದ ಮಧ್ಯದಿ ಮೆರೆವ ಯಜ್ಞೇಶ್ವರ'ನಂತೆ ಇತ್ತು. ಅವರ ವೇಷ ಭೂಷಣ, ನಿಲುವು ಹಾಗೂ ಗಾಂಭೀರ್ಯ.

ಭೀಷ್ಮ ಪರಶುರಾಮರ ಕೊನೆಯ ಯುದ್ಧ, ಯುದ್ಧ ಮಧ್ಯದಲ್ಲಿ ಸ್ತಬ್ಧತೆ "ಎನುತ ರಾಮನು ಯೋಚಿಸುತ್ತಿರಲಾಕ್ಷಣ, ವನಧಿ ಭೋರ್ಗರೆಯುವಂತೆ ನಭದಿ | ಚಿನ್ಮಯಾತ್ಮಕ ಕೇಳು ಕಲಹ ಬೇಡಲೋ ಈಗ! .... ಹೀಗೆ ಅಶರೀರವಾಣಿಯ ಪದ್ಯವು ನಡೆಯುತ್ತಿತ್ತಾಗ, ಕೊಡಲಿಯನ್ನು ಬಲಕ್ಕೈಯಲ್ಲಿ ಎತ್ತಿ ಹಿಡಿದು ಆಲೋಚಿಸುತ್ತಿರುವ ಭಂಗಿಯನ್ನು ಕಂಡೆ. ಪಾತ್ರದಲ್ಲಿ ಪೂರ್ತಿ ತನ್ಮಯತೆ, ಪದ್ಯ ನಿಂತಿತ್ತು. ತುಸು ಹೊತ್ತು ಸ್ತಬ್ಧತೆ. ಅದೇ ಭಂಗಿಯಲ್ಲಿದ್ದ ಪರಶುರಾಮ ಹಂತ ಹಂತವಾಗಿ ಕುಸಿಯುತ್ತಿರುವುದ ಕಂಡೆ. ಕೂಡಲೇ ಅವರನ್ನು ರಂಗದ

ಬದಿಗೆ ಎತ್ತಿ ಕರೆತಂದರು. ನಾನು ಓಡಿಹೋಗಿ ನೋಡಿದಾಗ ಆರುತ್ತಿತ್ತು ಮೈಯ ಬಿಸಿ, ನಾಡಿಯು ನಿಂತಿತ್ತು. ತೆರೆದ ಕಣ್ಣುಗಳು ಆಗಸದತ್ತ ನೋಡುವಂತಿತ್ತು, ದೇಹ ಆರಿತ್ತು, ಪ್ರಾಣ ಪಕ್ಷಿ ಹಾರಿತ್ತು. ಪ್ರಪಂಚದಲ್ಲಿ ಅವಿರತ ಸೇವೆಯನ್ನು ಮಾಡಿದ ಆ ಪುಣ್ಯ ಜೀವಿಗೆ ರಂಗಭೂಮಿಯೇ ಪುಣ್ಯಭೂಮಿಯಾಗಿತ್ತು. ಆದ್ದರಿಂದ ಅಲ್ಲೇ ಸೇವೆ ಮಾಡುತ್ತಲೇ ಅಂತ್ಯವನ್ನೂ ಕಾಣುವಂತಾಯಿತು. ಆಸ್ಪತ್ರೆಗೆ ಕೂಡಲೇ ಕೊಂಡೊಯ್ದು ಶುಶ್ರೂಷೆಯ ಪ್ರಯತ್ನವನ್ನು ಮಾಡಿದರೂ ಸಾಫಲ್ಯವಾಗಲಿಲ್ಲ. ಈ ಭೌತಿಕ ಪ್ರಪಂಚದಿಂದ ಶಿರಿಯಾರ ಮಂಜು ಹೊರಟುಹೋದರು. ಆದರೆ ಅವರಲ್ಲಿದ್ದ ಸಿರಿ ನಮ್ಮೆಲ್ಲರ ಹೃದಯದಲ್ಲಿ ಸದಾ ನೆಲೆಸಿದುದರಿಂದ ಅವರು ಬರೀ ಶಿರಿಯಾರ ಮಂಜು ಅಲ್ಲ "ಸಿರಿ ಆರದ ಮಂಜು."

*****

# ತೆಂಕಿನ ಹೆಣ್ಣು, ಬಡಗಿನ ಗಂಡು

ಕೊಳ್ಯೂರು ರಾಮಚಂದ್ರ ರಾವ್

1966ರಲ್ಲಿ ಕಟಪಾಡಿಯ ಮಟ್ಟಿಯ ಎಂ. ಎಸ್. ರಾವ್ ಇವರ ಕಾರಿನಲ್ಲಿ ಮುಂಬಯಿಗೆ ಪ್ರಯಾಣ ಮಾಡುತ್ತಿದ್ದೆ. ಮುಂದಿನ ಸೀಟಿನಲ್ಲಿ ಕುಳಿತಿದ್ದವರೇ ಶ್ರೀ ಶಿರಿಯಾರ ಮಂಜು ನಾಯ್ಕರು. ಹಿಂದೆ ನಾನು ಮತ್ತು ಮದ್ದಳೆಗಾರ ಗೋವರ್ಧನ ರಾವ್. ಆ ದಿನದವರೆಗೆ ಕಿವಿಯಿಂದ ಕೇಳಿದ ವ್ಯಕ್ತಿಯನ್ನು ಕಣ್ಣಿಂದ ಕಂಡ ಮೊದಲ ದಿನ. ನಮ್ಮ ಮುಂಬಯಿಯ 24 ತಾಸುಗಳ ಪ್ರಯಾಣದಲ್ಲಿ ನಮ್ಮೊಳಗೆ ನಡೆದ ಸಂಭಾಷಣೆಯೆಂದರೆ ಮೂರು ನಾಲ್ಕು ವಾಕ್ಯಗಳು ಮಾತ್ರ. ಅಂದೇ ಇವರು ಮಿತಭಾಷಿ ಎಂಬುದು ಮನವರಿಕೆಯಾಯಿತು. ಮತ್ತೆ ನಾನೇಕೆ ವಾಚಾಳಿಯಾಗಬೇಕು ? ಸುಮ್ಮನಾದೆ. ಸರಿ. ಮುಂಬಯಿಗೆ ತಲುಪಿದೆವು. ಮುಂದೆ, ಮುಂಬಯಿಯ ಪ್ರಾರಬ್ಧದಂತೆ ನಮ್ಮ ವಸತಿ ಬೇರೆ ಬೇರಾಯಿತು.

ಮುಂಬಯಿಯ ಶ್ರೀ ನರಸಿಂಹ ದಶಾವತಾರ ಯಕ್ಷಗಾನ ಮಿತ್ರ ಮಂಡಳಿಯ ಅಧ್ಯಕ್ಷರಾದ ಮೇರ್ಲ ಸಂಜೀವ ಶೆಟ್ಟರ ವ್ಯವಸ್ಥಾಪಕತ್ವದಲ್ಲಿ ತೆಂಕು, ಬಡಗುಗಳ ಸಂಯೋಜನೆಯಾಗಿತ್ತು. ಭಾಗವತರಾಗಿ ಮರವಂತೆ ನರಸಿಂಹ ದಾಸರು, ಮದ್ದಳೆ ಮಟ್ಟಿ ಗೋವರ್ಧನ ರಾವ್, ಚೆಂಡೆ ಅನಂತಕೃಷ್ಣ ರಾವ್ ಪಾತ್ರಧಾರಿಗಳು ಶ್ರೀ ಮ. ಶ. ಸಾಮಗರು, ಅಳಿಕೆ ರಾಮಯ್ಯ ರೈಗಳು, ಶ್ರೀ ವೀರಭದ್ರ ನಾಯ್ಕರು, ಕದ್ರಿ ವಿಷ್ಣುರವರು, ಶಿರಿಯಾರ ಮಂಜು ನಾಯ್ಕರು, ಪಡ್ರೆ ಚಂದುರವರು, ಹಾರಾಡಿ ಮಹಾಬಲರವರು, ಕ್ರಿಶ್ಚನ್ ಬಾಬು, ಹೆರಿಯ ನಾಯ್ಕರವರು, ಹಾಸ್ಯ ಕೊರಗಪ್ಪ (ಕೊರ್ಗು)ನವರು, ಕೊಳ್ಯೂರು ಮತ್ತು ಕೋಟ ವೈಕುಂಠರವರು.

ದಿನಾಂಕ 1-10-66ರಂದು ಮುಂಬಯಿಯ ದಾದರ್‌ನಲ್ಲಿರುವ ಪುರಂದರ ಸ್ಟೇಡಿಯಂನಲ್ಲಿ "ಸುಧನ್ವಾರ್ಜುನ" ಮತ್ತು "ಪ್ರಮೀಳಾರ್ಜುನ" ಈ ಅಪೂರ್ವ ಸಂಗಮದ

ಸಂದರ್ಶನಕ್ಕಾಗಿ ಕಲಾಭಿಮಾನಿಗಳ ಕಿಕ್ಕಿರಿದ ಸಭೆ ಸಾಗರವಾಗಿತ್ತು. ಶ್ರೀ ಶಿರಿಯಾರರ ಸುಧನ್ವ, ನನ್ನ ಪ್ರಭಾವತಿ. ಆಗ ಸುಧನ್ವನು ಬೇಗದಿ..... ಪ್ರವೇಶವಾಗಿ ಪ್ರಭಾವತಿಯ ಬಳಿಗೆ ಬಂದು ನಿಂದಾಗ, ಈ ನೂತನ ದಂಪತಿಗಳನ್ನು ಕಂಡ ಪ್ರೇಕ್ಷಕರ ಕರತಾಡನಕ್ಕೆ ನಾವು ಕೆಲವು ನಿಮಿಷಗಳ ಅವಕಾಶವನ್ನೇ ಕೊಡಬೇಕಾಯಿತು. ಅಷ್ಟರಲ್ಲಿ ಭಾಗವತರ ಬಳಿಯಲ್ಲಿ ಪ್ರೇಕ್ಷಕನಾಗಿ ನಿಂತ, ಅಳಿಕೆ ರಾಮಯ್ಯ ರೈ (ಪ್ರಸಿದ್ಧ ಸುಧನ್ವ ಪಾತ್ರಧಾರಿ)ಗಳು ಆರತಿ ತಟ್ಟೆಯನ್ನು ಸುಧನ್ವನಿಗೆ ಬೆಳಗಿಸುವುದಕ್ಕಾಗಿ ಪ್ರಭಾವತಿಯ ಕೈಗೆ ನೀಡಿದರು. (ಅವರೂ ನಗುತ್ತಾ ಈ ಜೋಡಿಯನ್ನು ನೋಡುತ್ತಾ ನಿಂತಿದ್ದರು.) ಸರಿ. ಸುಧನ್ವ ಪ್ರಭಾವತಿಯರ ಸಂವಾದ ಆರಂಭವಾಯಿತು. ನಮ್ಮಿಬ್ಬರ ಮಾತಿಗೂ ಸರಾಗವಾಗಿ ಪ್ರೇಕ್ಷಕರ ಚಪ್ಪಾಳೆ ನಡೆಯುತ್ತಲೇ ಇತ್ತು. ನಿಜ ಹೇಳುವುದಾದರೆ ನಾನು ನನ್ನ ಪಾತ್ರದಲ್ಲಿ ತನ್ಮಯವಾಗುವುದರ ಬದಲು, ಆ ಸುಧನ್ವನ ಮೇಲೆಯೇ ತನ್ಮಯನಾದುದು ಹೆಚ್ಚು. ಅಂದಿನ ಆನಂದವನ್ನು ಮತ್ತೆ ಸ್ಮರಿಸುವುದಕ್ಕಿಂತ ಅದನ್ನು ಮರೆಯುವುದೇ ಸಮಾಧಾನ.

ಮರುದಿನ 2ನೇ ತಾರೀಕಿನಂದು ಸುಂದರ್ ಭಾಯಿ ಹಾಲಿನಲ್ಲಿ "ಶ್ರೀರಾಮ ಪಟ್ಟಾಭಿಷೇಕ'. ಅಂದು ಮಲ್ಪೆ ಶಂಕರನಾರಾಯಣ ಸಾಮಗರ ದಶರಥ. ಶಿರಿಯಾರರ ಶ್ರೀರಾಮ. ನನ್ನದು ಕೈಕೇಯಿಯಾಗಿತ್ತು. ಮುಂದೆ ಸಾಲಿಗ್ರಾಮ ಮೇಳದ "ಭೀಷ್ಮ ಭೀಷ್ಮ ಭೀಷ್ಮ" ಈ ಪ್ರಸಂಗದ ಪೂರ್ವಭಾವಿಯಾಗಿ ಮುದ್ರಾಡಿಯಲ್ಲಿ "ಭೀಷ್ಮ ಪ್ರತಿಜ್ಞೆ" ಪ್ರದರ್ಶನವಾಗಿತ್ತು. ವೀರಭದ್ರ ನಾಯ್ಕರ ಶಂತನು, ಶಿರಿಯಾರರ ದೇವವ್ರತ ನನ್ನ ಸತ್ಯವತೀ. ಎಂ. ಎಂ. ಹೆಗ್ಡೆಯವರೇ ಮೊದಲಾದವರು ಪ್ರೇಕ್ಷಕರಾಗಿದ್ದ ವಿದ್ವಜ್ಜನರ ಸಭೆಯಾಗಿತ್ತು. ದೇವವ್ರತನು ಸತ್ಯವತಿಯ ಬಳಿಗೆ ಬಂದು ಪರಿಚಯಿಸಿಕೊಂಡಾಕ್ಷಣ, ಶಿರಿಯಾರರು "ದೇವೀ" ಎನ್ನುತ್ತಾ ನಮಸ್ಕರಿಸಿ ಪದ್ಯದ ಎತ್ತುಗಡೆ ಮಾಡಿದಾಗ ಆಗಲೇ ನನಗೆ ತಾಯ ಭಾವನೆಯಿಂದ ಹೃದಯ ತುಂಬಿತ್ತು. ಮುಂದೇ ಅದೇ ಪ್ರಸಂಗಕ್ಕೆ ಮತ್ತೆರಡು ಭೀಷ್ಮ ಭೀಷ್ಮರನ್ನು ಸೇರಿಸಿ ತ್ರಿವೇಣಿ ಸಂಗಮವಾಯಿತು. ಆ ಬಳಿಕ ಉಡುಪಿ, ಕುಂದಾಪುರ, ಕಂಡ್ಲೂರು, ಮಣಿಪಾಲ ಇಷ್ಟು ಕಡೆಗಳಲ್ಲಿ ನಮ್ಮ ಪ್ರಮೀಳಾರ್ಜುನ ಜೋಡಿ ಬಡಗಿನ ಹಿಮ್ಮೇಳದಲ್ಲೂ ಹಾಗೂ ಬಡಗು ತೆಂಕುಗಳ ದ್ವಂದ್ವ ಹಿಮ್ಮೇಳದಲ್ಲೂ ಪ್ರದರ್ಶನವಾಯಿತು. ಶಿರಿಯಾರರು ಆ ಗಂಭೀರವಾದ ಕಂಠಶ್ರೀಯಿಂದ "ಪ್ರಮೀಳಾ" ಎಂದಾಗ ಪ್ರಮೀಳೆಯಾಗಿದ್ದ ನನಗೆ "ಇವನೇ ನಿಜವಾದ ಗಂಡ" - ಎಂಬ ಭಾವನೆ ಮೂಡಿತ್ತು. ಒಂದು ದಿನ ಆ ಪ್ರಸಂಗದಲ್ಲಿ ಅವರು ನನ್ನ ಮುಖಭಂಗ ಮಾಡಿದ್ದೂ ಇದೆ. "ನನ್ನ ಸ್ತ್ರೀ ರಾಜ್ಯಕ್ಕೆ ಈವರೆಗೆ ಯಾವ ಪುರುಷರೂ ಬಂದದ್ದಿಲ್ಲ" ಅಂದಾಗ ಅವರು "ಪ್ರಮೀಳಾ ಹಿಂದೆ ನಮ್ಮ ಸಹದೇವ ಬಂದಿದ್ದನಲ್ಲ" ಅಂದರು (ನನಗದು ತಿಳಿದಿರಲಿಲ್ಲ) ನಾನು ಮೂಕನಾದೆ. ಸಭೆಯವರು ನಗಾಡಿದರು. ನಾವೂ ನಗಾಡಿದೆವು.

ಕೊನೆಯದಾದ 1982ರ ಅಕ್ಟೋಬರ 31ನೇ ಆ ದುರ್ದಿನವನ್ನು ಹೇಗೆ ಸ್ಮರಿಸಲಿ? ಹೇಗೆ ಬರೆಯಲಿ ? ಹೇಗೆ ಮರೆಯಲಿ ? ಅಂದು ಮಣಿಪಾಲದ ಗೋಲ್ಡನ್ ಜ್ಯೂಬಿಲಿ ಹಾಲಿನಲ್ಲಿ ಭೀಷ್ಮ ವಿಜಯ ಮತ್ತು ಭೀಷ್ಮ ಪರ್ವ ಪ್ರಸಂಗವಾಗಿತ್ತು. ರಾತ್ರಿ 8 ಗಂಟೆಗೆ ಶಿರಿಯಾರರು ಚೌಕಿಗೆ ಬಂದರು. ನಾನೊಂದು ಕಡೆ ಕುಳಿತಿದ್ದೆ. ನೇರವಾಗಿ ಬಂದು ಬಳಿಯಲ್ಲೇ ಕುಳಿತರು. ಏನು ? ಬಹಳ ಕ್ಷೀಣವಾಗಿದ್ದೀರಲ್ಲ ! ಅಂದೆ. "ಹಾಗೇನಿಲ್ಲ ಸುಧಾರಿಸಿದ್ದೇನೆ" ಅಂದರು. ಸರಿ ಮುಂದೆ ಮೊದಲ ಭೀಷ್ಮ ವಿಜಯದ ಪ್ರಸಂಗದಲ್ಲಿ ಅವರ ಪರಂಪರೆಯ ಸುಂದರವಾದ ಪರಶುರಾಮನ ವೇಷ ರಂಗಕ್ಕೆ ನಡೆಯಿತು. ನನ್ನದು ಮುಂದಿನ ಭೀಷ್ಮ ಪರ್ವದಲ್ಲಿ ಕೃಷ್ಣನ ಪಾತ್ರವಾಗಿತ್ತು. ನಾನು ವೇಷ ಮಾಡಿ ಮಲಗಿದ್ದೆ. ಯಾರೋ ಬಂದು ಮೆಲ್ಲನೆ ಎಬ್ಬಿಸಿದರು. ಎದ್ದಾಗ "ಗಾಬರಿಯಾಗಬೇಡಿ" ಅಂದರು. ಏನು ಅಂದೆ. "ನಮ್ಮ ಶಿರಿಯಾರರಿಗೆ ಹೃದಯಾಘಾತವಾಯಿತು" ಎಂದರು. ಎಲ್ಲಿದ್ದಾರೆ ಅಂದೆ. ವೇಷದಲ್ಲೇ ಆಸ್ಪತ್ರೆಗೆ ಕೊಂಡು ಹೋದರು. ಮುಂದಿನ ಪ್ರಸಂಗ ನಿಂತಿತು. ಒಂದು ತಾಸಿನ ಮೇಲೆ ರಸ್ತೆಗೆ ಬಂದಾಗ, ನೋಡುವುದೇನನ್ನು ? ವಾಹನದ ಮೇಲೆ ಪರಶುರಾಮನ ವೇಷ ಪವಡಿಸಿತ್ತು.

ಆಹಾರ್ಯ, ಆಂಗಿಕವೇ ಮೊದಲಾದ ಯಕ್ಷಗಾನದ ಪ್ರಧಾನವಾದ ನಾಲ್ಕೂ ಅಂಗಗಳಲ್ಲಿ ನಿರ್ವಿಕಾರವಾಗಿ ಅಭಿನಯಿಸುತ್ತಿದ್ದ ಶ್ರೀ ಶಿರಿಯಾರರು ನಿರ್ವಿಕಲ್ಪ ಸಮಾಧಿಯಲ್ಲಿದ್ದರು.

ಪರಶುರಾಮ, ಪರಂಧಾಮದ ಕಡೆಗೆ ....

*****

# ಶಿರಿಯಾರ ಮಂಜು ನಾಯ್ಕರು

ರಮೇಶ್ಮಂಜು

ಅರವತ್ತರೊಳಗಿನ ವಯಸ್ಸು. ಅಗಲವಾದ ಹಣೆ. ತಲೆಯಲ್ಲಿ ವಿರಳ ಕೂದಲು. ರುಮಾಲು ಇಲ್ಲವೇ ಟೊಪ್ಪಿ. ಅಳಿದುಳಿದ ಕೆಲವೇ ಹಲ್ಲುಗಳು. ಗುಳಿಬಿದ್ದ ಕೆನ್ನೆ, ಒಳ ಸೇರುತ್ತಿರುವ ಕಣ್ಣುಗಳಿಗೆ ಕನ್ನಡಕ. ತೆಳ್ಳಗಿನ ದೇಹ, ಪಂಚೆ, ಉದ್ದತೋಳಿನ ಅಂಗಿ. ಕಿಸೆಯಲ್ಲೊಂದು ಕನ್ನಡಕದ ಕವರ್. ಲೆಕ್ಕದ ಪುಸ್ತಕ, ಕೈಯಲ್ಲೊಂದು ಪರ್ಸ್. ಇದು ಶಿರಿಯಾರ್ ಎಂದಷ್ಟೇ ಹೇಳಿಕೊಳ್ಳುವಲ್ಲಿ ತನ್ನ ಸಂಪೂರ್ಣ ವ್ಯಕ್ತಿತ್ವ, ಯಶೋಗಾಥೆಯನ್ನು ಅಭಿಮಾನಿಗಳು, ಸಂಬಂಧಿಕರು, ಸ್ನೇಹಿತರು ನೆನಪಿಸಿಕೊಂಡು ಮೆಲುಕು ಹಾಕುವಲ್ಲಿ ಸಫಲರಾದ ದಿ. ಮಂಜು ನಾಯ್ಕರ ವ್ಯಕ್ತಿ ಚಿತ್ರಣ.

ಉಡುಪಿ ತಾಲೂಕಿನ ಶಿರಿಯಾರ ಗ್ರಾಮದಲ್ಲಿ 1925ರ ಸುಮಾರಿಗೆ ದಿ. ವೆಂಕಟ ನಾಯ್ಕ್ ಶ್ರೀಮತಿ ಮುತ್ತುರವರ 4ನೇ ಪುತ್ರ ಮಂಜು ನಾಯ್ಕರ ಜನನ. ಮೂವರು ಅಕ್ಕಂದಿರು, ಇಬ್ಬರು ತಮ್ಮಂದಿರು, ಓರ್ವಳೇ ತಂಗಿ ಇವರ ಒಡಹುಟ್ಟು. ವ್ಯವಸಾಯ ಮನೆತನ. ಶ್ರೀಮಂತನಲ್ಲವಾದರೂ ಮಗನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದ ತಂದೆ. ವಿಧಿ ವಿಲಾಸವೋ, ಯಕ್ಷಗಾನದ ಅಗೋಚರ ಸೆಳೆತವೋ ಯಕ್ಷಗಾನ ರಂಗವೇ ಜೀವನ ಶಾಲೆ ಎಂದು ಭಾವಿಸಿದವರಿಗೆ ಮಾಮೂಲಿ ಶಾಲೆಯ ಶಿಕ್ಷಣ ಹಿಡಿಸದೆ ಆರನೇ ತರಗತಿಗೆ ಮಂಗಳ. ಮಗನ ಮನವೊಲಿಸಲೆತ್ನಿಸಿದ ತಂದೆಯ ಸೋಲು. ಮಂದರ್ತಿ ಮೇಳಕ್ಕೆ ಪಾದಾರ್ಪಣೆ. ಬಣ್ಣದ ಸಂಜೀವಯ್ಯ ಹೆಜ್ಜೆಯ ಗುರು. ಮೇಳದಲ್ಲಿ ಗೆಜ್ಜೆ ಶುರು.

ಅಕಾಡೆಮಿಗಳಾಗಲೀ, ಯಕ್ಷಗಾನ ಕೇಂದ್ರಗಳಾಗಲೀ ಇಲ್ಲದ ಕಾಲ. ಹಿರಿಯ ಕಲಾವಿದರೇ ಗುರುಗಳು. ಓಲೈಕೆ, ಸೇವೆಯಿಂದ ಮಾತ್ರ ಹೆಜ್ಜೆಯೋ, ರಂಗ ತರಬೇತಿಯೋ ಸಾಧ್ಯ. ಶ್ರದ್ಧೆ ಛಲಗಳಿದ್ದಲ್ಲಿ ಯಕ್ಷಗಾನ ಕೇಂದ್ರಗಳಾಗಲೀ, ಅಕಾಡೆಮಿಗಳಾಗಲೀ ಗೌಣ ಎಂದು ತೋರಿಸಿ, ಸಾಧಿಸಿದ ಹಲವರಲ್ಲಿ ಮಂಜು ನಾಯ್ಕರೂ ಒಬ್ಬರು. ನಾಯ್ಕರಲ್ಲಿ ಅಡಗಿದ್ದ ಸುಪ್ತ ಪ್ರತಿಭೆ ಹೊರಬರುವಲ್ಲಿ ಅನೇಕ ಹಿರಿಯರು ಕಾರಣೀಕರ್ತರಾದರೂ

ಸಂಬಂಧಿಕರೂ, ಖ್ಯಾತ ಕಲಾವಿದರೂ, ಹಿರಿಯರೂ ಆದ ದಿ. ಕೊಳ್ಕೆಬೈಲು ಹಿರಿಯ ನಾಯ್ಕ್ ಹಾಗು ಶೀನ ನಾಯ್ಕ್ ಸಹೋದರರ ಸಾಧನೆ ಇವರಿಗೆ ಸ್ಫೂರ್ತಿ. ಬಾಲಗೋಪಾಲ, ಪೀಠಿಕೆ, ಸ್ತ್ರೀವೇಷ, ಕೃಷ್ಣ ವೇಷದಿಂದ ಪ್ರಾರಂಭಿಸಿ ಸಾಮಾನ್ಯವಾಗಿ ಎಲ್ಲಾ ಪಾತ್ರಗಳನ್ನು ಧೈರ್ಯದಿಂದ ಮಾಡಿ ಸೈ ಎನಿಸಿಕೊಂಡ ಇವರು ರಂಗದಲ್ಲಿ ಹಿನ್ನಡೆ ಕಂಡದ್ದೇ ಇಲ್ಲ. ದ್ವಿತೀಯ ಸಾಲಿನ ಕಲಾವಿದರ ತನಕವೂ ನಿರ್ದಿಷ್ಟ ಸಂಬಳವಾಗಲೀ, ಜೀವನಾವಶ್ಯಕತೆಗಳಾಗಲೀ ಸಿಗದ ಕಾಲ ಅದು. ಅಸೌಖ್ಯದಿಂದ ಮನೆಗೆ ತೆರಳಬೇಕಾದರೂ ಹಿರಿಯ ಕಲಾವಿದರ ಒಪ್ಪಿಗೆ ಅನಿವಾರ್ಯ. ಅವರ ಔದಾರ್ಯದ ಪುಡಿಗಾಸೇ ಇವರಿಗೆ ಸಂಬಳ. ಹೊಟ್ಟೆಗೆ ತೊಂದರೆಯಿಲ್ಲವಾದರೂ ಬಟ್ಟೆಗೆ ಎಲ್ಲಾ ಕಲಾವಿದರಿಗೂ ಬರವಿಲ್ಲ ಎನ್ನುವಂತಿರಲಿಲ್ಲ, ಮಂಜು ನಾಯ್ಕರ ಮನೆಯಲ್ಲಿ ಹೊಟ್ಟೆಗೆ, ಬಟ್ಟೆಗೆ ತೊಂದರೆಯಿರಲಿಲ್ಲ. ಕಲಾರಾಧನೆ, ಕಲಾಸಕ್ತಿ ಅಂತಸ್ತು, ಅಧಿಕಾರಕ್ಕೆ ಬೆಲೆ ನೀಡದು ಎಂಬುದಕ್ಕೆ ನಾಯ್ಕರು ಸಾಕ್ಷಿಯಾದರು, ಕೀಳರಿಮೆಯನ್ನು ಮೆಟ್ಟಿ ನಿಂತರು. ಕಲೆಗೆ ಗೌರವ ನೀಡಿ ಕಲಾವಿದನಾಗಿ ರೂಪುಗೊಂಡು ಗೌರವ ಪಡೆದರು. ಗಣ್ಯರ ಸಹವಾಸ, ಸತತ ಪರಿಶ್ರಮ ಈಗಾಗಲೇ ಮಂಜು ನಾಯ್ಕರನ್ನು ಉತ್ತಮ ಕಲಾವಿದನನ್ನಾಗಿ ರೂಪುಗೊಳಿಸಿತ್ತು. ಇಂತಹ ಪಾತ್ರವನ್ನು ಇಂತಹವರಲ್ಲಿ ಕಂಡಿದ್ದೆ ಆದರೆ ಮಂಜು ನಾಯ್ಕರ ಶೈಲಿಯೇ ಬೇರೆ ಎಂಬ ಮಾತು ಅಲ್ಲಲ್ಲಿ ಕೇಳಿ ಬಂದು ಶಿರಿಯಾರ್ ಶೈಲಿ ಪ್ರಚಲಿತವಾಗಲಾರಂಭಿಸಿತು.

ಬಾಲ್ಯವಿವಾಹ ಅಲ್ಲವಾದರೂ 16ರ ಎಳವೆಯಲ್ಲಿಯೇ ಮಂಜು ನಾಯ್ಕರ ಸೋದರ ಮಾವನ ಮಗಳು ಒಂಭತ್ತು ವರ್ಷದ ಲಕ್ಷ್ಮಿ ಇವರಿಗೆ ವಧುವಾದಳು. ಗಂಡಹೆಂಡಿರ ಸಂಬಂಧದ ಬಗೆಗಾಗಲಿ, ಗಂಡನಲ್ಲಿ ಮಾತನಾಡುವ ಧೈರ್ಯವಾಗಲಿ, ಮಿಗಿಲಾಗಿ ವಯಸ್ಸಿನ ಅರ್ಹತೆಯನ್ನು ಹೊಂದಿರದ ಲಕ್ಷ್ಮಿ ತಂದೆ ತಾಯಿಯನ್ನೇ ಹೆಚ್ಚು ಆಶ್ರಯಿಸಿದ್ದಳು. ಲಕ್ಷ್ಮಿಯ ಮೂವತ್ತನೇ ವಯಸ್ಸಿನಲ್ಲಿ ಹುಟ್ಟಿದ ಮಗನೇ ರಮೇಶ್ (ರಮೇಶ್ಮಂಜು) ಇವರ ಏಕೈಕ ಪುತ್ರನೂ ಹೌದು. ಎಲ್ಲದರಲ್ಲೂ ಶಿಸ್ತು. ಸಲುಗೆಯೆಂಬುದೇ ಇಲ್ಲದ ತಂದೆಯನ್ನು ಕಂಡರೆ ಮಗ ತುಂಬಾ ಹೆದರುತ್ತಿದ್ದ. ಒಮ್ಮೆ ತಂದೆಗೆ ದೂರದಲ್ಲಿ ಕ್ಯಾಂಪಿದ್ದು ಮನೆಗೆ ಬರುವುದಿಲ್ಲ ಎಂಬ ವಿಚಾರ ತಾಯಿಯಿಂದ ತಿಳಿದ ರಮೇಶ್ ಶಾಲೆಗೆ ಚಕ್ಕರ್ ಹಾಕಿದ್ದ. ಆಕಸ್ಮಿಕವಾಗಿ ಮನೆಗೆ ಬಂದ ನಾಯ್ಕರು ಕೋಪಗೊಂಡು ಮಗನನ್ನು ಶಾಲೆಗೆ ಕರೆದೊಯ್ದದ್ದಲ್ಲದೇ ಅದಾಗಲೇ ಶಾಲೆ ಬಿಟ್ಟು ಹಿಂತಿರುಗುತ್ತಿದ್ದ ಗುರುಗಳ ಕಾಲಿಗೆ ರಸ್ತೆಯ ಮೇಲೆ ಬಿದ್ದು ಕ್ಷಮೆ ಕೇಳುವಂತೆ ಮಾಡಿದ್ದರು. ತನ್ನ ಮಗ ಯಕ್ಷಗಾನದತ್ತ ಗಮನ ಹರಿಸುವುದು ನಾಯ್ಕರಿಗೆ ಇಷ್ಟವಿರಲಿಲ್ಲ. ಕಲೆಯ ಬಗ್ಗೆ ಅಸಡ್ಡೆಯಿಲ್ಲವಾದರೂ ರಾತ್ರಿಯ ವೃತ್ತಿ, ಅದರಿಂದ ಬರಬಹುದಾದ ಆದಾಯ ಜೀವನಕ್ಕೆ ಸಾಕಾಗದು ಎಂಬ ಆತಂಕ ಅವರದ್ದಾಗಿತ್ತು. ಮಗನಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸುವ ಹಂಬಲ ಅವರಲ್ಲಿತ್ತು.

ಈ ಮಧ್ಯೆ ಮಂಜು ನಾಯ್ಕರ ವೃತ್ತಿ ಜೀವನ ಹಲವು ಎಳೆಗಳಾಗಿ ಏಳು ಬೀಳುಗಳಿಂದ ಕೂಡಿತ್ತು. ಹಲವಾರು ವರ್ಷ ಮಂದರ್ತಿ ಮೇಳದಲ್ಲಿ ಸೇವೆ ಸಲ್ಲಿಸಿದ ಇವರು

ಗಣ್ಯರ ಒಡನಾಟದಿಂದ ಸಾಕಷ್ಟು ಹೆಸರು ಗಳಿಸಿದ್ದರು. ಪೈಪೋಟಿ ಎಂಬುದು ಅಂದು ಕೂಡಾ ಇತ್ತು. ಸೌಕೂರು ಮೇಳದ ಯಜಮಾನರಿಗೆ ನಾಯ್ಕರ ಮೇಲೆ ಕಣ್ಣಿತ್ತು ಚಿನ್ನದ ಸರದ ಆಮಿಷ ತೋರಿದರಂತೆ. ಇದೊಂದು ಅವಕಾಶವೆಂದು ಭಾವಿಸಿದ ನಾಯ್ಕರು ಸೌಕೂರಿನತ್ತ ಹೆಜ್ಜೆ ಹಾಕಿದರು. ಎಲ್ಲಿ ಹೋದರೂ ಹೆಸರು ಮಾತ್ರ ಹೊರತು ಆದಾಯವಿಲ್ಲ. ಅಮೃತೇಶ್ವರಿ, ಮಾರಣಕಟ್ಟೆ, ಕೊಲ್ಲೂರು ಎಲ್ಲಾ ಮೇಳದಲ್ಲೂ ಕುಣಿದರು. ಮನಸ್ಸು ಮಾತ್ರ ಜೀವನಾಧಾರಕ್ಕೆ ಅಗತ್ಯವಿದ್ದ ಹಣದತ್ತ ಕೇಂದ್ರೀಕೃತವಾಯ್ತು. ಪೆರ್ಡೂರು ಮೇಳದ ಸಂಚಾಲಕರಾದರು. ಹಿರಿಯರು, ಗಣ್ಯರು, ಹುಡುಗರ ಸಮತೋಲನ ತಂಡ ಕಟ್ಟಿ ತಿರುಗಾಟ ಪ್ರಾರಂಭ. ತಮ್ಮ ಕೃಷ್ಣಮೂರ್ತಿಯ ಸಾರಥ್ಯ. ಇಂದಿನಂತೆ ಉತ್ತಮ ರಸ್ತೆಯಾಗಲೀ ವಾಹನ ವ್ಯವಸ್ಥೆಯಾಗಲಿ ಇಲ್ಲ. ಎತ್ತಿನ ಗಾಡಿಯಲ್ಲಿ ಮೇಳದ ಪೆಟ್ಟಿಗೆ, ಸಲಕರಣೆ ಸಾಗಿಸಿ ಕಲಾವಿದರು ಕಾಲ್ನಡಿಗೆಯಲ್ಲಿಯೇ ಸಾಗಬೇಕಾಗಿತ್ತು. ಧನಿಕರು, ದೇವಸ್ಥಾನಗಳಲ್ಲಿ ಕಾರ್ಯಕ್ರಮ. ಇಲ್ಲಿಯೂ ನಾಯ್ಕರು ಯಶಸ್ಸು ಗಳಿಸಲಿಲ್ಲ. ಯಾರಲ್ಲೂ ಕೂಡ ಅಂಗಲಾಚುವ ಸ್ವಭಾವ ಜನ್ಮತಃ ಹೊಂದಿರದ ಇವರಿಗೆ ಮೇಳ ನಡೆಸಲಾಗಲಿಲ್ಲ. ಮಳೆಗಾಲದಲ್ಲಿ ಉಪ ಕಸುಬನ್ನು ಪ್ರಾರಂಭಿಸಿದರು. ಹೂವಿನಕೋಲು ತಂಡ ಕಟ್ಟಿದರು. ತಾವೇ ಸ್ವತಃ ಭಾಗವತರಾಗಿ ಮದ್ದಲೆಗೆ ಆತ್ಮೀಯರೋರ್ವರನ್ನು ಸೇರಿಸಿಕೊಂಡು ತನ್ನ ಸಂಬಂಧಿಕ ಹುಡುಗರು ಮಾತ್ರವಲ್ಲದೆ ಅನ್ಯರನ್ನು ಕೆಲವರನ್ನು ಕೂಡಿಕೊಂಡು ಮನೆಮನೆಗೆ ತೆರಳಿ ಕಾರ್ಯಕ್ರಮ ನೀಡಿದರು. ಅಷ್ಟಿಷ್ಟು ಆದಾಯ ಬಂದರೂ ಯಶಸ್ಸು ಮರೀಚಿಕೆಯಾಗಿಯೇ ಉಳಿದಿತ್ತು. ಇವರ ಗರಡಿಯಲ್ಲಿ ಪಳಗಿದ ಎಂ. ಎ. ನಾಯ್ಕ್, ನರಾಡಿ ಭೋಜರಾಜ ಶೆಟ್ಟಿ ಮುಂತಾದವರು ಇವತ್ತೂ ಕೂಡಾ ರಂಗದಲ್ಲಿ ಮಿಂಚುತ್ತಿದ್ದಾರೆ. ಇಷ್ಟಕ್ಕೇ ನಾಯ್ಕರ ಸಾಹಸ ಮುಗಿಯಲಿಲ್ಲ. ಮಳೆಗಾಲದಲ್ಲಿ ರಾಮಾಯಣ ಓದುವ ಕ್ರಮ ಅಂದಿತ್ತು. ಅಂದಿನ ಹಿರಿಯ ಕಲಾವಿದರಾಗಿದ್ದ ಹಳ್ಳಾಡಿ ಶೀನ (ಹಳ್ಳಾಡಿ ಕೃಷ್ಣಪ್ಪನವರ ಮಾವ)ರವರು ನಡೆಸುತ್ತಿದ್ದ ರಾಮಾಯಣ ವಾಚನದಲ್ಲಿ ಮಂಜು ನಾಯ್ಕರು ಸಹಾಯಕರಾಗಿ ಭಾಗವಹಿಸುತ್ತಿದ್ದರು. ಬಹುಶಃ ಇಲ್ಲಿಂದ ಮಂಜು ನಾಯ್ಕರ ಏಳ್ಗೆಯ ದಿನಗಳು ಆರಂಭ.

ದಿ. ಪಳ್ಳಿ ಸೋಮನಾಥ ಹೆಗ್ಡೆಯವರ ವ್ಯವಸ್ಥಾಪಕತ್ವದಲ್ಲಿ ಸಾಲಿಗ್ರಾಮ ಮೇಳ ಡೇರೆ ಮೇಳವಾಯ್ತು. ಕೆರೆಮನೆ ಬಳಗವೂ ಸೇರಿದಂತೆ ಸಾಕಷ್ಟು ಉತ್ತಮ ಕಲಾವಿದರ ಬಲಿಷ್ಠ ಮೇಳ ಅದು. ಮಂಜು ನಾಯ್ಕರಿಗೆ ಅಲ್ಲಿ ಆಹ್ವಾನ ಸಿಕ್ಕಿದಂದಿನಿಂದ ಬಹುಶಃ ಜೀವನಾಧಾರ ಸೇರಿದಂತೆ ಸಂತೃಪ್ತಿ ನೀಡಿದ ಮೇಳ ಅದೇ ಆಯ್ತೆಂದರೆ ತಪ್ಪಲ್ಲ. ತನ್ನ ಜೀವಿತಾವಧಿಯ ಅಮೂಲ್ಯ 14 ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿ ಬಡಗುತಿಟ್ಟು, ತೆಂಕುತಿಟ್ಟಿನ ಅನೇಕ ಕಲಾವಿದರೊಂದಿಗೆ ವೇಷ ಮಾಡಿ, ಸ್ಪರ್ಧೆಯಲ್ಲಿ ಭಾಗವಹಿಸಿ ಎಲ್ಲರಿಂದಲೂ

ಪ್ರಶಂಸೆಗೊಳಗಾಗಿ ಮಾನಸಿಕವಾಗಿ ತೃಪ್ತಿರಾದರು. ಹೆಗ್ಡೆಯವರ ಆತ್ಮೀಯತೆ, ಸಹಕಾರ ಮಂಜು ನಾಯ್ಕರನ್ನು ಮತ್ತಷ್ಟು ಮೇಲಕ್ಕೇರಿಸಿತು. ಕೆರೆಮನೆ ಬಳಗ ಒಂದೇ ಬಾರಿ ಒಟ್ಟಿಗೇ ಮೇಳ ತ್ಯಜಿಸಿದರೂ ನಾಯ್ಕರು ಮಾತ್ರ ಸೋಮನಾಥ ಹೆಗ್ಡೆಯವರ ಕೈ ಬಿಡಲಿಲ್ಲ. ಉಪ್ಪಿನ ಋಣ ಅವರನ್ನು ಈ ಸಮಯದಲ್ಲಿ ಮತ್ತಷ್ಟು ಜಾಗೃತಗೊಳಿಸಿತು. ಮತ್ತೆ ಆಯ್ದ ಕಲಾವಿದರ ಉತ್ತಮ ಮೇಳವಾಗಿ ಸಾಲಿಗ್ರಾಮ ಹೊರಹೊಮ್ಮಿತು. ಸಮರ್ಥ ನಾಯಕತ್ವದಲ್ಲಿ ಕಲಾವಿದರ ಪ್ರಾಮಾಣಿಕತೆ ಉತ್ತಮವಾಗಿ ಕಾರ್ಯ ನಿರ್ವಹಿಸಿತು. ಯಜಮಾನರಿಗೆ ನಾಯ್ಕರು ದಿನದಿಂದ ದಿನಕ್ಕೆ ಹತ್ತಿರವಾಗುತ್ತಾ ಬಂದರು. ಈ ಸಮಯದಲ್ಲಿ ಯಕ್ಷಗಾನ ರಂಗಕ್ಕೆ ಮತ್ತೊಂದು ಮಹಾ ಭಾಗ್ಯ ಒದಗಿಬಂತು. ಈ ಕ್ಷೇತ್ರದ ಮಹಾನ್ ಶಕ್ತಿ ಬದಲಾವಣೆಯ ಹರಿಕಾರ ಗುಂಡ್ಮಿ ಕಾಳಿಂಗ ನಾವಡರು ಸಾಲಿಗ್ರಾಮ ಮೇಳದ ಭಾಗವತರಾದರು. ಈ ಕಾಲದಲ್ಲಿ ಸಾಲಿಗ್ರಾಮ ಮೇಳದಲ್ಲಿ ನಾವಡರ ಪ್ರಭಾವ ಅದೆಷ್ಟಿತ್ತೆಂದರೆ ಯಾವನೇ ಕಲಾವಿದ ಬರಲಿ, ಹೋಗಲಿ ಅದು ಮೇಳದ ವ್ಯವಹಾರದಲ್ಲಿ ಯಜಮಾನರ ಮೇಲೆ  ಯಾವುದೇ ಪರಿಣಾಮ ಬೀರುತ್ತಿರಲಿಲ್ಲ. ಇಂತಹ ಯುವ ಭಾಗವತನ ಮೇಲೆ ನಾಯ್ಕರಿಗೆ ಅತಿಯಾದ ಪ್ರೀತಿ, ಗೌರವ. ಅಜಗಜಾಂತರ ವಯಸ್ಸಿನವರಾದರೂ ಪರಸ್ಪ ರ ಗೌರವಿಸುತ್ತಿದ್ದರು. ನಾವಡರು ನಾಯ್ಕರ ವಿಶೇಷ ಶೈಲಿ, ಪಾತ್ರ ತನ್ಮಯತೆ, ಭಾವುಕ ಅಭಿನಯಕ್ಕೆ ತಲೆದೂಗಿ ಇವರನ್ನು ಗೌರವಿಸುತ್ತಿದ್ದರೆ ತನ್ನಲ್ಲಿರುವ ಅಸಾಮಾನ್ಯ ಪ್ರತಿಭೆಯಿಂದ ನಾವಡರು ಶಿರಿಯಾರರು ಮೆಚ್ಚುವ ಯುವ ಭಾಗವತರಾಗಿದ್ದರು. ಹೊಸತನದ ಭಾಗವತರ ನೇತೃತ್ವದಲ್ಲಿ ಹಳೆ ಕಲಾವಿದರು ಯುವ ಕಲಾವಿದರ ತಂಡ ಹೊಸ ಹೊಸ ಪ್ರಸಂಗ, ಪ್ರಯೋಗಗಳತ್ತಲೂ ಸಾಗಿತ್ತು.  ಈ ಹಿಂದೆ ಕೆರೆಮನೆ ಬಳಗ ಇದ್ದಾಗ ಸತಿ ಸುಶೀಲೆಯಂಥ ಪ್ರಸಂಗ ರಂಗಕ್ಕೆ ಬಂದು ಯಶಸ್ವಿಯಾಗಿದ್ದರೂ ನಾವಡರು ಮತ್ತೆ ಹೊಸ ಪ್ರಸಂಗಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು. ಡಾ. ವೈ. ಚಂದ್ರಶೇಖರ ಶೆಟ್ಟಿ ಕಂದಾವರ ರಘುರಾಮ ಶೆಟ್ಟಿಯವರು ಸಾಲಿಗ್ರಾಮ ಮೇಳದ ಪ್ರಸಂಗಕರ್ತರಾದರು. ಹೊಸ ಪ್ರಸಂಗಗಳಲ್ಲೂ ಕೂಡಾ ಮಂಜು ನಾಯ್ಕರು ಹಿಂದೆ ಬೀಳಲಿಲ್ಲ. ಈ ಹೊತ್ತಿಗೆ ಮಂಜು ನಾಯ್ಕರಿಗೆ 50 ದಾಟಿದ್ದರಿಂದ ಚಿಕ್ಕ ಚಿಕ್ಕ ಪಾತ್ರಗಳನ್ನು ಆರಿಸಿಕೊಂಡು ಅದರಲ್ಲಿ ತಾನೇನು ಎಂಬುದನ್ನು ತೋರಿಸಿಕೊಡುತ್ತಿದ್ದರು. ಹಾಗಿರುವಾಗಲೇ ಮಂಜು ನಾಯ್ಕರಿಗೆ ಪ್ರಥಮ ಹೃದಯಾಘಾತ. ಮೇಳದ ವೃತ್ತಿ ಮಾಡದಂತೆ ವೈದ್ಯರ ಸಲಹೆ. ಮನೆಯಲ್ಲೇ ವಿಶ್ರಾಂತಿಯಲ್ಲಿ ಮಂಜು ನಾಯ್ಕರು. ಆದರೆ ಮಂಜು ನಾಯ್ಕರಿಗೆ ಮನೆಯೆಂದರೆ ಸೆರೆವಾಸದಂತಾಯ್ತು. ವೈದ್ಯರ ಉಪಚಾರ ಮಾಡಿಸಿಕೊಳ್ಳುತ್ತಲೇ ಅವರ ಸಲಹೆಯನ್ನು ಮೀರಿ ಮತ್ತೆ ಮೇಳದತ್ತ. ಯಜಮಾನರು ಇವರ ಮೇಲಿನ ಆತ್ಮೀಯತೆಯಿಂದ ಇವರು ಇಷ್ಟಪಡುವ ಚಿಕ್ಕ ಚಿಕ್ಕ ಪಾತ್ರ ಯಾ ಕೆಲವು

ದಿನ ವೇಷ ಮಾಡದೆಯೂ ಕ್ಯಾಂಪಿನಲ್ಲಿ ಇರುವುದಕ್ಕೆ ವ್ಯವಸ್ಥೆ ಮಾಡಿಕೊಟ್ಟಿದ್ದರು. ಅದೊಂದು ದಿನ ಮಳೆಗಾಲದ ಯಕ್ಷಗಾನ. ಮಣಿಪಾಲದ ಗೋಲ್ಡನ್ ಜ್ಯೂಬಿಲಿ ಹಾಲಿನಲ್ಲಿ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ಭೀಷ್ಮ ವಿಜಯ. ಅನಿವಾರ್ಯತೆಯಲ್ಲಿ ನಾಯ್ಕರ ಪರಶುರಾಮ. ಆದರೆ ಅಂದೇ ಪರಶುರಾಮ ಪಾತ್ರಧಾರಿ ಮಂಜು ನಾಯ್ಕರು ಬಣ್ಣದಲ್ಲಿಯೇ ಪರಶುರಾಮನ ಮೂಲವಾಸ ಸ್ವರ್ಗ ಸೇರುವರೆಂದು ಯಾರೂ ತಿಳಿದಿರಲಿಲ್ಲ. ನಂಬುವಂತದ್ದೂ ಅಲ್ಲ. ಆದರೂ ನೂರಕ್ಕೆ ನೂರು ಸತ್ಯ. ಮಂಜು ನಾಯ್ಕರ ಅಗಲುವಿಕೆಯಿಂದ ಯಕ್ಷಗಾನ ರಂಗಕ್ಕೆ ನಷ್ಟವಾಯಿತು. ಅಭಿಮಾನಿ, ಸಂಬಂಧಿ ಸ್ನೇಹಿತರಿಗೆಲ್ಲಾ ನೋವಾಯ್ತು. ಶಿರಿಯಾರರ ಮಗ ರಮೇಶ್ ಆಗಿನ್ನೂ ಅರ್ಧಂಬರ್ಧ ಪದವಿಯಲ್ಲಿದ್ದ. ಹೇಗೋ ಪದವಿ ಮುಗಿಸಿದ. ಈ ಸಮಯದಲ್ಲಿ ರಕ್ತಗುಣ ತನ್ನಲ್ಲಡಗಿದ್ದ ಕಂಪನ್ನು ಹೊರಸೂಸಲಾರಂಭಿಸಿತು. ಐರೋಡಿ ರಾಮ ಗಾಣಿಗರ ಶಿಷ್ಯನಾಗಿ ರಮೇಶ್ ಶ್ರೀಕ್ಷೇತ್ರ ಆನೆಗುಡ್ಡೆಯಲ್ಲಿ ಪ್ರಥಮ ಬಾರಿ ರಂಗಕ್ಕೇರಿದ. ಸಂಗೀತಗಾರನಾಗಿ ಹರೇ ರಮಣ ಹಾಡಿದ. ಅದೇ ದಿನ ಕೃಷ್ಣನ ವೇಷದಲ್ಲಿ ಕಾಣಿಸಿಕೊಂಡ. ಮುಂದೆ ಭೀಷ್ಮ, ಅರ್ಜುನ, ಭದ್ರಸೇನ, ಬ್ರಹ್ಮ, ಈಶ್ವರನಾಗಿ ಮೆರೆದ. ಕುಂದಾಪುರ ತಾಲ್ಲೂಕು ಯುವ ಜನೋತ್ಸವ ಕಾರ್ಯಕ್ರಮದ ಯಕ್ಷಗಾನ ಸ್ಪರ್ಧೆಯಲ್ಲಿ ತನ್ನ ನೇತೃತ್ವದ ತಂಡಕ್ಕೆ ತಾಲ್ಲೂಕು ಮಟ್ಟದ ಪ್ರಥಮ ಬಹುಮಾನ ತಂದುಕೊಟ್ಟ. ಸ್ವತಃ ತಾನೇ ರಾಮ ನಿರ್ಯಾಣದ ರಾಮನಾಗಿ ಉತ್ತಮ ಪುರುಷ ಪಾತ್ರಧಾರಿ ಗೌರವವನ್ನು ಪಡೆದದ್ದಲ್ಲದೇ ವಿದ್ವತ್ ಜನರು ಇವನತ್ತ ಗಮನ ಹರಿಸುವಂತೆ ಮಾಡಿದ. ಮತ್ತೆ ಪ್ರಸಂಗಕರ್ತನಾದ.ಸಾಲಿಗ್ರಾಮಕ್ಕೆ ಮೊದಲ ಪ್ರಸಂಗ ನೀಡಿದ. ಮೊದಲ ಪ್ರಸಂಗದಲ್ಲೇ ಪ್ರಸಂಗಕರ್ತನಾಗುವ ಲಕ್ಷಣ ತೋರಿಸಿದ.

ಅನಂತರ ಪೆರ್ಡೂರು ಮೇಳಕ್ಕೆ ಒಂದರ ಮೇಲೊಂದರಂತೆ ಐದು ಪ್ರಸಂಗ ನೀಡಿದ. ಅದರಲ್ಲಿ ವಸಂತಭಾರ್ಗವಿ ಎಂಬ ಗ್ರೀಕ್ ಪುರಾಣ ಆಧಾರಿತ ಪ್ರಸಂಗ ಭಾಗವತ ಧಾರೇಶ್ವರರ ನಿರ್ದೇಶನದಲ್ಲಿ 150ಕ್ಕೂ ಮಿಕ್ಕಿ ಪ್ರಯೋಗ ಕಂಡಿದ್ದು ಮಾತ್ರವಲ್ಲದೆ ತಂದೆಯ ಮಗ ಎಂಬ ಖ್ಯಾತಿಗೂ ಬಂದ.

ರಂಗದಲ್ಲಿ ಅಷ್ಟೊಂದು ಸಮಯ ಪ್ರಾಮಾಣಿಕ ವೃತ್ತಿ ಮಾಡಿ, ಜನಮನ ಗೆಲ್ಲುವಲ್ಲೂ ಯಶಸ್ವಿಯಾದ ಮಂಜು ನಾಯ್ಕರಿಗೆ ಸರಕಾರದಿಂದ ಯಾವುದೇ ಪ್ರಶಸ್ತಿ ಸಿಗಲಿಲ್ಲ. ಮರಣೋತ್ತರ ಪ್ರಶಸ್ತಿಯೂ ಸಿಗಲಿಲ್ಲ. ಅವರ ಕೊನೆಯ ಕಾಲದಲ್ಲಿ ಶಿರಿಯಾರದಲ್ಲೊಂದು ಯಕ್ಷಗಾನ ತರಬೇತಿ ಕೇಂದ್ರ ಸ್ಥಾಪಿಸಬೇಕೆಂದಿತ್ತು. ಅವರ ಬಯಕೆ ನೆರವೇರಲಿಲ್ಲ. ಅವರ ಹೆಸರು ಶಾಶ್ವತವಾಗಿ ಉಳಿಯುವಂತೆ ಯಾವುದೇ ಕಾರ್ಯ ಮಾಡಲಾಗಲಿಲ್ಲ.

ಶಿರಿಯಾರರು ಸ್ವರ್ಗಸ್ಥರಾಗಿ ಈಗಾಗಲೇ 20ಕ್ಕೂ ಹೆಚ್ಚು ವರ್ಷ ಉರುಳಿ ಹೋಯ್ತು. ಈಗಲಾದರೂ ನಾಯ್ಕರ ನೆನಪಿನಲ್ಲಿ ಶಿರಿಯಾರದಲ್ಲಿ ರಸ್ತೆಗೆ ಹೆಸರಿಡುವ, ಲೈಬ್ರೆರಿ ಪ್ರಾರಂಭಿಸುವ, ಸಂಸ್ಮರಣ ಕಾರ್ಯಕ್ರಮ ಮಾಡುವ, ಕಿರು ಹೊತ್ತಿಗೆ ಮಾಡುವ, ಯಕ್ಷೋತ್ಸವ ಮಾಡುವ ಹಂಬಲ ಹೊಂದಿರುವ ಹಿರಿಯ, ಕಿರಿಯ ಯಕ್ಷಗಾನ ಅಭಿಮಾನಿಗಳ ಬಯಕೆ ನೆರವೇರಲಿ ಎಂದು ಹಾರೈಸುವುದೊಂದೇ ಉಳಿದದ್ದು.

ಶಿರಿಯಾರ ಮಂಜು ನಾಯ್ಕರು ವೈಯುಕ್ತಿಕ ಜೀವನದಲ್ಲಿ ಬಡ ಕಲಾವಿದರಾದರೂ ಯಕ್ಷಗಾನ ಕ್ಷೇತ್ರದಲ್ಲಿ ಇಂದಿಗೂ ಅತಿ ಶ್ರೀಮಂತ ಕಲಾವಿದ. ಅದಕ್ಕೆ ಈಗಲೂ ಅಭಿಮಾನಿಗಳಿಗೆ ಅವರ ಬಗೆಗಿರುವ ಗೌರವವೇ ಸಾಕ್ಷಿ.

*****

# ಮೋಡಿಗಾರ ಶಿರಿಯಾರ ಮಂಜು

**ಕುಮಾರಸ್ವಾಮಿ**

ನಾನು ಬಾಲ್ಯ ಕಳೆದ ಊರಿನ ಹತ್ತಿರದ ಹಳ್ಳಿಗಳಿಗೆ ಬರುತ್ತಿದ್ದ ಪೆರ್ಡೂರು, ಸೌಕೂರು, ಮಾರಣಕಟ್ಟೆ, ಅಮೃತೇಶ್ವರಿ ಮೇಳಗಳಲ್ಲಿ ಗಣಪತಿ ಪ್ರಭುಗಳು, ವೀರಭದ್ರ ನಾಯಕರು, ಮಾರ್ವಿ ರಾಮಕೃಷ್ಣ ಹೆಬ್ಬಾರರು, ಮಜ್ಜಿಗೆ ಬೈಲು ಚಂದಯ್ಯ ಶೆಟ್ಟರು, ಪಾಂಡೇಶ್ವರ ವೆಂಕಟರಾಯರು, ಕೊಕ್ಕರ್ಣೆ ನರಸಿಂಹ ಕಾಮತರು, ಹಾರಾಡಿ ನಾರಾಯಣ ಗಾಣಿಗರು ಮುಂತಾದ ಸುಪ್ರಸಿದ್ಧರಿದ್ದರು. ಬಹುಶಃ ಶಿರಿಯಾರ ಮಂಜು ನಾಯ್ಕರು ಬೇರೆ ಮೇಳಗಳಲ್ಲಿದ್ದರು. ಹೀಗಾಗಿ ನಾನು, 1935ರಿಂದಲೇ ಬಯಲಾಟ ನೋಡುತ್ತಾ ಬಂದವನಾದರೂ 1950ನೇ ಇಸವಿ ತನಕ, ಕೀರ್ತಿಶೇಷ ಶಿರಿಯಾರ ಮಂಜು ನಾಯ್ಕರ ಹೆಸರನ್ನು ಕೇಳಿದವನಲ್ಲ; ಅವರ ವೇಷವನ್ನು ರಂಗಸ್ಥಳದಲ್ಲಿ ಕಂಡವನಲ್ಲ.

ಸುದೈವದಿಂದ 1950ರ ದಶಕದಲ್ಲಿ, ಶಿರಿಯಾರ ಮಂಜು ನಾಯ್ಕರ ಅನೇಕ ವೇಷಗಳನ್ನು ನೋಡುವ ಸದವಕಾಶ ಉಡುಪಿಯಲ್ಲಿ ನನಗೆ ಮೊದಲ ಬಾರಿಗೆ ಸಿಕ್ಕಿತು. ಮೊತ್ತಮೊದಲಾಗಿ, ರಂಗಸ್ಥಳದಲ್ಲಿ ಅವರನ್ನು ಕಂಡ ನನಗೆ ಷೇಕ್ಸ್‌ಪಿಯರ್ ಚಿತ್ರಿಸಿದ ಜೂಲಿಯಸ್ ಸೀಜರನ ಉದ್ಗಾರವನ್ನು ಮೆಲುಕಾಡುತ್ತಾ ಅದೇ ಧಾಟಿಯಲ್ಲಿ ಹೇಳುವುದಾದರೆ ನೋಡಿದೆ, ಮರುಳಾದೆ, ಮನಸೋತೆ ಎಂಬಂತಾಯಿತು ! ಮುಂದೆ ಉಡುಪಿಯ ಅಸುಪಾಸಿನಲ್ಲಿ ಅವರು ಪಾತ್ರವಹಿಸಿದ ಯಾವುದೇ ಪ್ರದರ್ಶನವನ್ನು ನೋಡದೆ ಬಿಟ್ಟವನಲ್ಲ.

ಅವರತ್ತ ನನ್ನನ್ನು ಬಲವಾಗಿ ಸೆಳೆದ ವಿಷಯಗಳು ಎರಡು. ವೇಷಗಾರಿಕೆ ಮತ್ತು ಅದಕ್ಕಿಂತ ಹೆಚ್ಚಾಗಿ ಮಾತುಗಾರಿಕೆ.

ನಾನು ಕಂಡ ಮಂಜು ನಾಯ್ಕರ ಮೊದಲನೇ ವೇಷವೆಂದರೆ, ಪಾರಿಜಾತಾಪಹರಣದ ಕೃಷ್ಣ. ಅದು ಎಷ್ಟು ಸಂಪ್ರದಾಯಬದ್ಧವಾಗಿತ್ತೆಂದರೆ, ಅದನ್ನು ಮೀರಿಸುವುದಿರಲಿ, ಅದಕ್ಕೆ ಸರಿ ದೊರೆಯಾದ ವೇಷವನ್ನು ಮಾಡಿದ ಬೇರೆ ಕಲಾವಿದರು ನನ್ನ ಕಣ್ಣಿಗೆ ಬಿದ್ದಿಲ್ಲ. ಕೃಷ್ಣಾರ್ಜುನ ಕಾಳಗದಲ್ಲಿ ಹಾರಾಡಿ ಕುಷ್ಟ ಗಾಣಿಗರು ಕೃಷ್ಣನಾಗಿ ಬಂದುದನ್ನು ನೋಡಿದ್ದೇನೆ. ಅದು ಕಪ್ಪು ಮೀಸೆ ಕಟ್ಟಿಕೊಂಡ ಕೃಷ್ಣ. ಕರ್ಣಾರ್ಜುನ ಕಾಳಗದಲ್ಲಿ ಹಾರಾಡಿ ನಾರಾಯಣ ಗಾಣಿಗರು ಕೃಷ್ಣನಾಗಿ ಮಿಂಚಿದುದನ್ನು ಕಂಡಿದ್ದೇನೆ. ಅದು ಹೆಣ್ಣು ಸ್ವರದ ಕೃಷ್ಣ. ಉತ್ತರ ಕನ್ನಡದ ಕಲಾವಿದರೊಬ್ಬರು ಮಾಗಧ ವಧೆಯಲ್ಲಿ ಕೃಷ್ಣನಾಗಿ ಕುಣಿದುದನ್ನು ನೋಡಿದ ನೆನಪೂ ಆಗುತ್ತದೆ. ಅವರದು ಸೊಂಟದ ಕೆಳಗೆ ಅರ್ಜುನನಂತೆ ಕಸೆ ಉಟ್ಟು ಸೊಂಟದ ಮೇಲೆ ಕರ್ಣನಂತೆ ತುಂಬು ತೋಳಿನ ಅಂಗಿ ತೊಟ್ಟು ತಲೆಗೆ ಹೆಸರಿಗೊಂದು ಕಿರೀಟವಿಟ್ಟ ವೇಷ! ಇವೆಲ್ಲವನ್ನೂ ಮೀರಿದ ಚೆಲುವು ಮತ್ತು ಸೊಗಸು ಮಂಜು ನಾಯ್ಕರ ಕೃಷ್ಣನದೆಂದು ನಾನು ದೃಢವಾಗಿ ನಂಬಿದ್ದೇನೆ. ಅವರ ಅಂಗಸೌಷ್ಠವ ಮತ್ತು ಮುಖಬಿಂಬ ಈ ವೇಷಕ್ಕೆ ಹೇಳಿ ಮಾಡಿಸಿದ ಹಾಗಿತ್ತು ಎಂದು ನನ್ನ ಖಚಿತ ಅಭಿಪ್ರಾಯ.

ಆಗ ಅವರು ಮೇಳದಲ್ಲಿ ಪುರುಷ ವೇಷಧಾರಿಯಾಗಿದ್ದರು. ಇದರ ಫಲವಾಗಿ, ತಮ್ಮ ಪಾಲಿಗೆ ಬರುತ್ತಿದ್ದ ಸುಧನ್ವ, ಬಭ್ರುವಾಹನ, ದೇವವ್ರತ ಮುಂತಾದ ಪಾತ್ರಗಳನ್ನು ಲೀಲಾಜಾಲವಾಗಿ, ಜನರೆಲ್ಲಾ ಸೈ ಸೈ ಎನ್ನುವಂತೆ ಮಾಡುತ್ತಿದ್ದರು. ಕೇದಗೆ ಮುಂದಲೆ ವೇಷದಲ್ಲಿ ಅವರು ನಿರ್ವಹಿಸಿದ ಪಾತ್ರಗಳ ಚಿತ್ರವಿನ್ಯಾಸ ವೈಖರಿಗಳನ್ನು ಮರೆಯುವಂತೆಯೇ ಇಲ್ಲ.

ಮುಂದೆ ಅವರು ವ್ಯವಸಾಯಿ ಡೇರೆ ಮೇಳಗಳಲ್ಲಿ ಕಿರೀಟ ಧರಿಸಬೇಕಾದ ರಾಜ ವೇಷಗಳನ್ನು ಮಾಡುತ್ತಿದ್ದುದುಂಟು. ವೇಷದ ಅಚ್ಚುಕಟ್ಟುತನಕ್ಕೆ ಒಟ್ಟಾರೆ ಅಂದಚಂದಗಳಿಗೆ ಬಾಧಕವೆನಿಸದಂತೆ ಅವರು ಎಚ್ಚರ ವಹಿಸುತ್ತಿದ್ದರು. ಅವರ ಕೇದಗೆ ಮುಂದಲೆ ವೇಷದ ವಿಶೇಷವಾದ ಆಕರ್ಷಣೆ ಮತ್ತು ಪ್ರಭಾವದ ಸವಿನೆನಪನ್ನು ಅದೆಂದೂ ಅಳಿಸಿ ಹಾಕಲಿಲ್ಲ. ಕಿರೀಟಕ್ಕಿಂತ ಕೇದಗೆ ಮುಂದಲೆಯಲ್ಲೆ ಅವರು ಹೆಚ್ಚು ಶೋಭಿಸುತ್ತಿದ್ದರೆಂದು ನನ್ನ ಮತ.

ಶಿರಿಯಾರ ಮಂಜು ನಾಯ್ಕರು ಮಾತುಗಾರಿಕೆಯಲ್ಲಿ ಉದ್ದಾಮ ಪಂಡಿತರನ್ನು ನೆನಪಿಸುತ್ತಿದ್ದರು. ಅವರದು ಬಹುದೂರ ಕೇಳಿಸುವ ಮಧುರ ಕಂಠ. ಸಾಮಾನ್ಯ ವೇಷಧಾರಿಯ ಮಿತಿಗೆ ಮೀರಿದ, ವ್ಯಾಕರಣ ಶುದ್ಧ ಪ್ರೌಢಶೈಲಿ, ಸ್ಪಷ್ಟ ಉಚ್ಚಾರದ ಶಬ್ದ ಸಂಪತ್ತು, ನಿರರ್ಗಳವಾಗಿ, ನಿರಾಯಾಸವಾಗಿ, ನಿರಾತಂಕವಾಗಿ ಹರಿದು ಬರುವ ಮಾತು, ಪುಂಖಾನುಪುಂಖವಾಗಿ ಹೊರಹೊಮ್ಮುತ್ತಿದ್ದ ಪದಪುಂಜಗಳು, ಶ್ರೇಷ್ಠ ನಿರೂಪಣಾ

ಸಾಮರ್ಥ್ಯ ಇವೆಲ್ಲಾ ಗುಣಗಳಿಂದ ಯಕ್ಷಗಾನಾಭಿಮಾನಿಗಳನ್ನು ಸೂಜಿಗಲ್ಲಿನಂತೆ ಸೆಳೆಯುವ ಕೇಂದ್ರ ಬಿಂದುವಾಗಿ ಅವರು ಬೆಳೆದು, ಬಾಳಿದರು.

ಅವರೆಂದೂ ರಂಗಸ್ಥಳದಲ್ಲಿ ಆವರಣ ಭಂಗವಾಗುವಂತೆ, ಲಂಗುಲಗಾಮಿಲ್ಲದ ಭಾಷಣವನ್ನು ಬಿಗಿಯುತ್ತಿರಲಿಲ್ಲ. ಪಾಂಡಿತ್ಯ ಪ್ರದರ್ಶನಕ್ಕೋ ಎಂಬಂತೆ, ವೇದವೇದಾಂತಗಳ ಸಿಕ್ಕುಬಲೆಯಲ್ಲಿ ಸುತ್ತಾಡಿಸುತ್ತಾ ಪ್ರೇಕ್ಷಕರನ್ನು ವಾಕ್ಪ್ರವಾಹದಲ್ಲಿ ತೇಲಿಸುತ್ತಾ, ಮುಳುಗಿಸುತ್ತಾ ಸಾಗುತ್ತಿರಲಿಲ್ಲ. ಪಾತ್ರಧಾರಿ ಹೇಳುತ್ತಿರುವುದೇನೆಂದೇ ಪ್ರೇಕ್ಷಕನಿಗೆ ಅರ್ಥವಾಗದೆ, ಕೊನೆಗೆ ಅವನು ಬರೇ ಮಾತಿನ ನೆರೆ ನೀರಿನಲ್ಲಿ ಕೊಚ್ಚಿ ಹೋಗುವಂತೆ ಅವರು ಮಾಡುತ್ತಿರಲಿಲ್ಲ. ಪ್ರಸಂಗ ಪದ್ಯದ ಸದಾಶಯವನ್ನು ಬಿಡದೆ ಪ್ರತಿಪಾದಿಸುತ್ತಿದ್ದರು. ಹಾಗೆ ಕಡೆದು ನಿಲ್ಲಿಸಿದ ಬಿಂಬದ ಸ್ವರೂಪವನ್ನು ಸುಲಲಿತವಾಗಿ ಪ್ರೇಕ್ಷಕರಿಗೆ ದಾಟಿಸುತ್ತಿದ್ದರು. ಸಭಾಸದರ ಹೃನ್ಮನ ತಟ್ಟುತ್ತಾ ಗೆಲ್ಲುತ್ತಿದ್ದರು. ಎಷ್ಟು ಸುಂದರವಾದ ವಾಕ್ಯ ರಚನೆ, ಎಷ್ಟು ಚಂದವಾದ ಶೈಲಿ, ಎಷ್ಟೊಂದು ಆಕರ್ಷಕವಾದ ನಿರೂಪಣೆ, ಎಷ್ಟೆಲ್ಲ ವಿಷಯ ಸಂಪತ್ತು! ಇಷ್ಟೆಲ್ಲವನ್ನೂ ಅವರು ಪಾತ್ರೋಚಿತವೆನಿಸುವಂತೆ ಹಿತಮಿತವಾಗಿ ಅಡಕಗೊಳಿಸಿ, ಪ್ರಸ್ತುತಪಡಿಸುತ್ತಿದ್ದ ಜಾಣ್ಮೆಯು ಪಂಡಿತ ಪಾಮರರೆಂಬಂತೆ ಭೇದವಿಲ್ಲದೆ ಎಲ್ಲರನ್ನೂ ಮೋಡಿ ಮಾಡುತ್ತಿದ್ದುದು ಆಶ್ಚರ್ಯವಲ್ಲ. ನಂದನವನ ಪ್ರವೇಶಿಸಿದ ಕೃಷ್ಣನು ಸತ್ಯಭಾಮೆಯ ಕೈ ಹಿಡಿದು, ರಂಗಸ್ಥಳದಲ್ಲೆಲ್ಲ ಸುತ್ತಾಡುತ್ತಾ ವನವರ್ಣನೆ ಮಾಡುವ ವಿಧಾನವೊಂದೇ ಸಾಕು. ಅವರ ಮಾತುಗಾರಿಕೆಯ ಮಾದರಿಗೆ.

ಕುಣಿತ ಮತ್ತು ಅಭಿನಯಗಳಲ್ಲಿ ಅವರೇನೂ ಹಿಂದುಳಿದಿರಲಿಲ್ಲ. ಆಲಸ್ಯ, ಅಸಡ್ಡೆಗಳಿಗೆ ಎಡೆ ಇಲ್ಲದ ರಂಗಕ್ರಿಯೆ ಅವರದು. ಗಾಢವಾದ ಪರಿಣಾಮ ಬೀರುವ ರೀತಿಯಲ್ಲಿ ರಂಗ ಪ್ರವೇಶಿಸುವ ಕ್ರಮ. ವಿವಿಧ ರಂಗ ತಂತ್ರಗಳನ್ನು ಪ್ರೇಕ್ಷಕರೆದುರು ಸಾಕ್ಷಾತ್ಕರಿಸುವ ಕೌಶಲ ಇದೆಲ್ಲ ಚಿರಸ್ಮರಣೀಯ. ಅವರ ಕೃಷ್ಣನ ಒಡ್ಡೋಲಗದ ಸಾಂಪ್ರದಾಯಿಕ ನರ್ತನ ವಿಲಾಸವಾಗಲೀ ಭೀಷ್ಮ ವಿಜಯದ ಪರಶುರಾಮನ ರಂಗ ಪ್ರವೇಶದ ಅದ್ಭುತ ರಮ್ಯಚಿತ್ರವಾಗಲಿ ಕಣ್ಕಟ್ಟು ಅಲ್ಲ. ನಿಜವಾದ ಅರ್ಥದಲ್ಲಿ ಕಣ್ಣಿಗೆ ಹಬ್ಬ. ಕಲಾವಿದನ ಚೇತನ ರೂಪವನ್ನು ಧರಿಸಿ, ಸಭಾಸದರನ್ನು ಪುಳಕಗೊಳಿಸಿ, ಅವರನ್ನು ಉತ್ತೇಜಿಸಿ, ಅವರ ಅಂತರಾಳದಲ್ಲಿ ಆವಿರ್ಭವಿಸುವ ಬಗೆ ಅದು ಎನ್ನಬಹುದು.

ರಸಭಾವಗಳ ಪರಿಪುಷ್ಟ ಪೋಷಣೆಯಲ್ಲಿ ಅವರು ತೋರಿಸುತ್ತಿದ್ದ ಅಸಾಧಾರಣ ಪ್ರತಿಭೆ ನಿಜಕ್ಕೂ ಪ್ರಶಂಸಾರ್ಹ. ಅರ್ಜುನನು ಅವರಾಯನಾತ್ಮಜನೊ ವೀರನೀತ ಎಂದು ತನ್ನನ್ನು ಹೀಯಾಳಿಸುತ್ತಾ ತೆಗಳಿದಾಗ, ಕೋಪಾವೇಶಭರಿತನಾದ ಬಭ್ರುವಾಹನನಾಗಿ ಮಂಜು ನಾಯ್ಕರು ತೋರಿಸುತ್ತಿದ್ದ ಪ್ರಗಲ್ಭ ಅಭಿನಯ, ಚಾತುರ್ಯ ಅನುಪಮ. ಅದೇ ರೀತಿ ತಿಳಿದೆನು ನಿನ್ನಯ ಚಿತ್ತದುಮ್ಮಳಿಕೆಯ ನಿಜದೊಲವ.... ಎನ್ನುತ್ತಾ ಸುಧನ್ವನು ಕೃಷ್ಣನಿಗೆ

ಹೇಳುವ ಪದ್ಯ ಭಾಗದಲ್ಲಿ ಅವರು ತೋರಿಸುತ್ತಿದ್ದ ಭಕ್ತಿ ಭಾವವಿಹ್ವಲತೆ ಅನನ್ಯ. ಬಾಲ ಭೀಷ್ಮನು ದಾಶರಾಜನೆದುರು ಎರಡೆರಡು ಪ್ರತಿಜ್ಞೆ ಕೈಗೊಂಡಾಗ, ಚೆಂಡೆ ಮದ್ದಳೆಗಳ ಅಬ್ಬರದ ನುಡಿತದ ಹಿನ್ನೆಲೆಯಲ್ಲಿ ಅವರ ನರ್ತನಾಭಿನಯ ಸಾಮರ್ಥ್ಯ ಪರಾಕಾಷ್ಠೆಗೇರುತ್ತಿದ್ದ ದೃಶ್ಯ ಮನಮೋಹಕ ಮತ್ತು ಜನರಂಜಕ. ಅಸಾಮಾನ್ಯ ಕಲಾವಿದ ಅವರೆಂಬ ಮಾತಿಗೆ ಎದುರಾಡುವ ಹಾಗಿಲ್ಲವೆಂಬುದು ರಂಗಸ್ಥಳದಲ್ಲಿ ಅವರನ್ನು ಕಂಡವರು ಕಂಡುಕೊಂಡ ಸತ್ಯ.

ನಾನು ಅವರ ಒಡನಾಡಿಯಲ್ಲ, ಅಭಿಮಾನಿ ಮಾತ್ರ. ಅವರು ವೇಷ ಹಾಕಿ ರಂಗಸ್ಥಳದ ಹೊರಗೆ ಬೀಡಿ ಸೇದುತ್ತಾ ನಿಂತಿದ್ದಾಗ ಲೋಕಾಭಿರಾಮವಾಗಿ ಒಂದೆರಡು ಮಾತು ಆಡಿದ್ದು ಬಿಟ್ಟರೆ, ಬೇರಾವುದೇ ರೀತಿ ನಾನು ಅವರೊಡನೆ ವ್ಯವಹರಿಸಿದವನಲ್ಲ. ಸಾಮಾನ್ಯ ಪ್ರೇಕ್ಷಕನ ನೆಲೆಯಲ್ಲಿ ನಾನು ಅವರಲ್ಲಿ ಕಂಡ ಹೆಚ್ಚುಗಾರಿಕೆಯ ಸ್ಥೂಲ ಚಿತ್ರಣವೇ ಈ ಲೇಖನ ಎಂದಷ್ಟೇ ಹೇಳಬಯಸುತ್ತೇನೆ. ಕೇವಲ ನಿದರ್ಶನಕ್ಕೋಸ್ಕರ ಕೆಲವು ಪ್ರಸಂಗಗಳನ್ನು ಪ್ರಸ್ತಾಪಿಸಿದ್ದೇನೆಂದು ಸ್ಪಷ್ಟಪಡಿಸುತ್ತೇನೆ. ಅವರ ಯೋಗ್ಯತೆಯ ಪೂರ್ಣ ಚಿತ್ರಣಕ್ಕೆ ಬರೆದಷ್ಟೂ ಮುಗಿಯದು. ಹೌದು, ಅವರು ಇನ್ನೊಂದಷ್ಟು ಕಾಲ ಬದುಕಬೇಕಿತ್ತು. ಅವರ ಅಪಾರ ಅಭಿಮಾನಿಗಳು ಭಾಗ್ಯಹೀನರಾದರು.

*****

# ಸಿರಿಕಂಠದ ದಿಗ್ಗಜ ಶಿರಿಯಾರ ಮಂಜು ನಾಯ್ಕ

**ಕೊರಾಡಿ ಸದಾಶಿವ ಕಲ್ಕೂರ**

ನಾನಾಗ ಏಳನೇ ತರಗತಿಯಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಯಾಗಿದ್ದೆ. ಬಾರಕೂರಿನಲ್ಲೊಂದು ಬಯಲಾಟ. ಎಲ್ಲ ಮಕ್ಕಳ ಗುಂಪಿನಲ್ಲಿ ಸೇರಿ ನಾನೂ ಆಟ ನೋಡಲು ಹೋದೆ. ಅಂದು ಅಭಿಮನ್ಯು ಕಾಳಗ ಪ್ರಸಂಗ. ಧರ್ಮರಾಯನ ಪಾತ್ರ ಅದ್ಭುತವೆನ್ನಿಸಿತು. ಸಭೆಯಲ್ಲಿ ಪರಸ್ಪರ ಮಾತಾಡಿಕೊಳ್ಳುತ್ತಿದ್ದರು. ಈ ಪಾತ್ರ ಮಾಡಿದವ ಚಟ್ಲಿಯಂಕ್ಟನ ಮಗ ಮಂಜು ಎಂದು. ಆಗೆಲ್ಲ ನಮ್ಮ ಸುತ್ತಮುತ್ತ ಅವರ ಹೆಸರು ಹಾಗೇ ಇತ್ತು ಸಾಲಿಗ್ರಾಮ ಮೇಳಕ್ಕೆ ಅವರು ಸೇರಿದ ಮೇಲೆ "ಸಿರಿಯಾರ ಮಂಜು ನಾಯ್ಕರು ಆದದ್ದು." "ಅಯ್ಯೋ ಮೋಹದ ಕಂದ" ಪದ ಎತ್ತುಗಡೆಯ ಲಾಲಿತ್ಯ, ಶೋಕ ಭಾರದ ಹಿತಮಿತ ಕುಣಿತ, ಶ್ರುತಿ ಶುದ್ಧ ಕಂಠದ ಅರ್ಥ ವಿವರಣೆ ಇಂದಿಗೂ ನನ್ನ ಮನಸ್ಸನ್ನು ಪುಲಕಿತಗೊಳಿಸುತ್ತಿದೆ. ಹೌದು ! ಅಭಿಮನ್ಯು ಕಾಳಗದ ಧರ್ಮರಾಯ, ಕರ್ಣಾರ್ಜುನ ಕಾಳಗದ ಧರ್ಮರಾಯ, ಎರಡೂ ಒಬ್ಬ ಕಲಾವಿದನ ಸಾಮರ್ಥ್ಯ ಪರೀಕ್ಷೆಯ ಪಾತ್ರಗಳು. ಎಲ್ಲರೂ ಬಯ್ಯುವವರೇ. ಸಹನೆಯಿಂದ ಬಯ್ಗುಳನ್ನು ಕೇಳುವ ಈ ಪಾತ್ರಗಳು ನಿಜವಾಗಿಯೂ "ಧರ್ಮರಾಯನ ಕೊರಡೇ".

ಮಂಜು ನಾಯ್ಕರಲ್ಲಿರುವ ಔನ್ನತ್ಯವೇನು ? ಎದ್ದು ತೋರುವ ಹಿರಿಮೆ ಹೆಚ್ಚುಗಾರಿಕೆ ಯಾವುದು ? ಅವರ ಸಿರಿಕಂಠ. ಅವರು ಅತ್ಯುತ್ತಮವಾಗಿ ಹಾಡಬಲ್ಲ ಭಾಗವತರು ಕೂಡ. ಹೂವಿನ ಕೋಲಿನಲ್ಲಿ ಅವರ ಭಾಗವತಿಕೆ ನಾನು ಕೇಳಿದ್ದೆ. ಶ್ರುತಿ ಶುದ್ಧವಾದ ಕಂಠ. ಹಿತಮಿತವಾದ ಕುಣಿತ. ಪ್ರಶಸ್ತವಾದ ಒಂದು ಅರ್ಥಗಾರಿಕೆಯ ಶೈಲಿ. ದಕ್ಷಿಣೋತ್ತರ ಜಿಲ್ಲೆಗಳಲ್ಲೂ ಇವರಷ್ಟು ಸಮರ್ಥವಾಗಿ ಅರ್ಥ ಹೇಳುವ ಯಾವನೊಬ್ಬನನ್ನೂ ನಾನು ಕಂಡಿಲ್ಲ, ನನ್ನ ಅನುಭವ ಅರವತ್ತು ವರ್ಷಗಳಿಂದ ಸಾಗಿ ಬಂದುದು. ಹೆಸರು ಹೊತ್ತ ಯಾವ ಅರ್ಥಧಾರಿಯೂ ಇವರಿಗೆ ಸಮಾನರಲ್ಲ, ಮಾತುಗಾರರು ಬಹಳಷ್ಟು ಮಂದಿ

ಇರಬಹುದು. ಅರ್ಥಧಾರಿಗಳ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಇವರು ಸೃಷ್ಟಿಸಿಕೊಂಡ ಯಕ್ಷಗಾನ ಶೈಲಿ ಅಪ್ರತಿಮವಾದದ್ದು. ಕೇವಲ ನಾಲ್ಕನೇ ತರಗತಿ ತನಕ ಶಾಲೆಯಲ್ಲಿ ಓದಿದವರಂತೆ. ಇವರ ಮಾತಿನಲ್ಲಿ ಒಂದೇ ಒಂದು ವ್ಯಾಕರಣ ದೋಷ ಕಂಡುಬರುವುದಿಲ್ಲ. ಅರಿಸಮಾಸ ದೋಷವಿಲ್ಲ. ಕಲ್ಲು ಮಂಟಪ ಎನ್ನಲಾರರು. ಶಿಲಾಮಂಟಪವೆಂದೇ ಹೇಳಿಯಾರು.

ಮಹಾ ಭಾರತದ ಪ್ರಸಂಗಗಳಲ್ಲಿ ಶ್ರೀಕೃಷ್ಣನ ಪಾತ್ರ ಇವರಿಗಾಗಿ ರೂಪು ಪಡೆದದ್ದು. ತೆರೆಯ ಮರೆಯಲ್ಲಿ "ಕಸ್ತೂರಿ ತಿಲಕೇ" ದೇವಬಂದ ನಮ್ಮಸ್ವಾಮಿ ಬಂದ ಪದ್ಯ ಮುಗಿಯುತ್ತಲೇ ತೆರೆಸರಿಸಿ ನಲಿಯುತ್ತಾ ಬರುವ ಶ್ರೀಕೃಷ್ಣ ಶಿರಿಯಾರ ಮಂಜು ನಾಯ್ಕರಲ್ಲ! ದ್ವಾಪರೆಯ ಕೃಷ್ಣನೇ ನಲಿದಾಡಿ ಬಂದ ಅನ್ನಿಸುತ್ತದೆ. ಅವರು ಮಂದರ್ತಿ ಮೇಳದಲ್ಲಿ ಇದ್ದಷ್ಟು ಕಾಲ ನಮ್ಮ ಸುತ್ತಮುತ್ತ ನಡೆಯುವ ಬಯಲಾಟಗಳಲ್ಲಿ ಶ್ರೀಕೃಷ್ಣ ಪಾರಿಜಾತವೇ ಅಧಿಕವಾಗಿತ್ತು. ಹಾರಾಡಿ ರಾಮ ಗಾಣಿಗರ ದೇವೇಂದ್ರ, ನಾರಾಯಣ ಗಾಣಿಗರ ಸತ್ಯಭಾಮೆ ಮಂಜು ನಾಯ್ಕರ ಶ್ರೀಕೃಷ್ಣ ಒಂದಲ್ಲ, ಹತ್ತಲ್ಲಾ ನೂರು ಆಟ ಕಂಡರೂ ಇನ್ನೂ ನೋಡೋಣವೆಂಬ ಅಭಿಲಾಷೆ. ಬೆಳಗಿನ ಜಾವಕ್ಕೆ ಜಾಂಬವತಿ ಕಲ್ಯಾಣ. ಹಾರಾಡಿ ರಾಮ ಗಾಣಿಗರ ಜಾಂಬವಂತ. ಮಂಜು ನಾಯ್ಕರ ಶ್ರೀಕೃಷ್ಣ. ಆ ಕಾಲದಲ್ಲಿ ರಾಮ ಗಾಣಿಗರ ಎದುರು ಮಾತನಾಡಲು ಎಲ್ಲರೂ ಹೆದರುತ್ತಿದ್ದರು. ರಾಮ ಗಾಣಿಗರು ದೊಡ್ಡ ಮಟ್ಟದ ಅರ್ಥಧಾರಿಗಳಲ್ಲ, ಆದರೆ ಅವರ ಶ್ರೀಮದ್ ಗಾಂಭೀರ್ಯ ಮತ್ತು ಹಾರಾಡಿ ರಾಮನ ಜಾಪ್ ಎನ್ನುವ ವಿಶೇಷ ನಡೆ ಎದುರಿನವರನ್ನು ಕಂಗಾಲು ಮಾಡುತ್ತಿತ್ತು. ರಾಮ ಗಾಣಿಗರಲ್ಲಿರುವ ಭಕ್ತಿಯೂ ಇದಕ್ಕೆ ಕಾರಣವಾಗಿತ್ತು. ಆದರೆ ಅವರ ಎದುರು ಮುಲಾಜ್ ಇಲ್ಲದೇ ಪಾತ್ರ ನಿರ್ವಹಿಸುತ್ತಿದ್ದವರು ಎರಡೇ ಮಂದಿ. ಒಬ್ಬ ಶಿರಿಯಾರ ಮಂಜು ನಾಯ್ಕ ಮತ್ತೊಬ್ಬ ಕೊಳ್ಕೆಬೈಲು ಶೀನ (ಸ್ತ್ರೀ ವೇಷಧಾರಿ, ತಾರುಣ್ಯದಲ್ಲಿಯೇ ತೀರಿಕೊಂಡರು) ಇವರ ಬಾಲ ಭೀಷ್ಮ (ದೇವವ್ರತ) ಅದ್ಭುತ ಪಾತ್ರವೆನ್ನಬೇಕು. ಕೇವಲ ಕೃಷ್ಣ ಒಂದೇ ಅಲ್ಲ. ಋತುಪರ್ಣ, ಚಂದ್ರಹಾಸ, ಚಾರುದತ್ತ ಮುಂತಾದ ವೇಷಗಳಿಂದ ಗಲ್ಲದ ಪೆಟ್ಟಿಗೆ ಭರ್ತಿ ಮಾಡಿದವರು. ನಮ್ಮ ತಲೆಮಾರಿನಲ್ಲಿ ಮಿಂಚಿ ಮಾಯವಾದ ಮಂಜು ನಾಯ್ಕರಂತವರು ಇಂದಿನ ಕಲಾವಿದರ ಆಟ ನೋಡಲು ಉತ್ಸಾಹವನ್ನು ತರುತ್ತಿಲ್ಲ. ಈ ಕಾರಣದಿಂದ ಮಂಜು ನಾಯ್ಕರ ನಿರ್ಗಮನ ಯಕ್ಷಗಾನ ಕ್ಷೇತ್ರವನ್ನು ಬಡವಾಗಿಸಿದೆ. ಕೆರೆಮನೆ ಮಹಾಬಲ ಹೆಗ್ಡೆ ಯಾರನ್ನೂ ಅತಿಶಯವಾಗಿ ಶ್ಲಾಘಿಸುವವರಲ್ಲ, ಶಿರಿಯಾರ ಮಂಜು ನಾಯ್ಕರನ್ನು ಮುಕ್ತ ಕಂಠದಿಂದ ಹೊಗಳುತ್ತಿದ್ದರು. ಈ ಕಲಾಶ್ರೀ ಪರಶುರಾಮನ ವೇಷದಲ್ಲಿದ್ದಾಗಲೇ ಪರಂಧಾಮವನ್ನು ಸೇರಿದ್ದು, ಇದು ಕಲಾರಂಗದ ವಿಧಿಯೆನ್ನಬಹುದು.

*****

# ಯಕ್ಷಗಾನದ ಯುಗ ಪ್ರವರ್ತಕ ಶಿರಿಯಾರ ಮಂಜು ನಾಯ್ಕ

ಎಂ. ಎಚ್. ಪ್ರಸಾದ್ ಕುಮಾರ್

ಕರ್ನಾಟಕದ ಕರಾವಳಿ ಹಾಗೂ ಮಲೆನಾಡಿನಲ್ಲಿ ವಿಶೇಷ ಪ್ರಾಚುರ್ಯವನ್ನು ಪಡೆದು, ಜನತೆಯ ಸಾಂಸ್ಕೃತಿಕ ಬದುಕಿನ ಅಂಗಭೂತ ಆಸ್ತಿಯಾಗಿ, ಉತ್ಕೃಷ್ಟ ಕಲಾ ವಿಲಾಸವನ್ನು ತೋರುವ ಸಮನ್ವಯಶೀಲ ಸಮಷ್ಠಿ ಕಲೆ ಯಕ್ಷಗಾನ. ವಿಜಯನಗರದ ರಾಜ ಮಹಾರಾಜರುಗಳ ಕಲಾಭಿಮಾನದಿಂದ ರಾಜಾಂಗಣವನ್ನು ಪ್ರವೇಶಿಸಿ, ಕೆಳದಿ ಹಾಗೂ ಸೋದೆಯರಸರ ಹಾರ್ದಿಕ ಪ್ರೋತ್ಸಾಹದಿಂದ ಪರಿಷ್ಕಾರಗೊಂಡ ಈ "ರಾಜಕಲೆ"ಯ ರಂಗ ಪ್ರಕಾರದಲ್ಲಿ ಅನೇಕ ಹಿರಿಯ ಕಲಾವಿದರು ತಮ್ಮದೇ ಆದ ಚಿರಮುದ್ರೆಯೊತ್ತಿ, ಕಲಾ ಲೋಕದಲ್ಲಿ "ದಂತಕತೆ"ಯಾಗಿದ್ದಾರೆ. ಅಂತಹ ಹಿರಿಯ ಚೇತನಗಳಲ್ಲಿ "ಶಿರಿಯಾರದ ಸಿರಿ" - ಮಂಜು ನಾಯ್ಕರು ಒಬ್ಬರು.

ಶಿರಿಯಾರ ಮಂಜು ನಾಯ್ಕರು ನಿಜಕ್ಕೂ ಒಬ್ಬ "ಯಕ್ಷ ಲೋಕದ ಶಕಪುರುಷ" ರೆನ್ನುವುದಕ್ಕೆ ಅವರ ಸಿದ್ಧಿ ಸಾಧನೆ, ಪ್ರತಿಭೆ, ಪ್ರಯತ್ನಗಳೇ ಸಾಕ್ಷಿಯಾಗಿ ನಿಲ್ಲುತ್ತವೆ. ಯಕ್ಷಗಾನದಲ್ಲಿ ಒಬ್ಬ ಸರ್ವಶ್ರೇಷ್ಠ ಕಲಾವಿದರಾಗಿ, ಮೇಳದ ಯಜಮಾನರಾಗಿ ಶ್ರೀಯುತರು ಸಲ್ಲಿಸಿದ ಸೇವೆ ಅನನ್ಯವಾದುದು.

ಉಡುಪಿ ಜಿಲ್ಲೆಯ ಶಿರಿಯಾರದ ಮೊಗವೀರ ಕುಟುಂಬದಲ್ಲಿ ಜನಿಸಿದ ಮಂಜು ನಾಯ್ಕರ ತಂದೆ ವೆಂಕಟ ಮೊಗವೀರ, ತಾಯಿ ಮುತ್ತಮ್ಮ. ಶಿರಿಯಾರದ ಪ್ರಾಥಮಿಕ ಶಾಲೆಯಲ್ಲಿ ಐದನೇ ಇಯತ್ತೆಯವರೆಗೆ ಅಕ್ಷರಾಭ್ಯಾಸ ಮಾಡಿ, ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತ, ಪುರಾಣಗಳನ್ನೋದಿ ಜೀರ್ಣಿಸಿಕೊಂಡರು. ಶಿರಿಯಾರದ ಬಣ್ಣದ ಸಂಜೀವಯ್ಯನವರಿಂದ ಬಣ್ಣದ ದೀಕ್ಷೆ ಪಡೆದು, ಮಾರಣಕಟ್ಟೆ ಮೇಳದ ಮೂಲಕ ರಂಗ ಜೀವನವನ್ನು ಆರಂಭಿಸಿ, ಯಕ್ಷೋತ್ತುಂಗ ಶಿಖರದೆಡೆಗೆ ಪಯಣ ಬೆಳೆಸಿದರು.

ಕೀರ್ತಿಶೇಷ ರಾಷ್ಟ್ರ ಪ್ರಶಸ್ತಿ ವಿಜೇತ ಹಾರಾಡಿ ರಾಮ ಗಾಣಿಗ, ಗುರು ವೀರಭದ್ರ ನಾಯ್ಕ, ಕುಷ್ಟಗಾಣಿಗ, ನಾರಾಯಣ ಗಾಣಿಗ, ಕೊಳ್ಕೆಬೈಲು ಶೀನ...... ಮೊದಲಾದ ಬಡಗಿನ ಘಟಾನುಘಟಿ ಯಕ್ಷ ದಿಗ್ಗಜರ ಸಾಲಿನ ಶಿರಿಯಾರರು ಪ್ರಗಲ್ಭ ಪಾಂಡಿತ್ಯ, ಪ್ರಬುದ್ಧ ಕುಣಿತಾಭಿನಯ, ಪರಿಶುದ್ಧ ಅರ್ಥಗಾರಿಕೆಯಿಂದ ಬಡಗಿನ ಯಕ್ಷರಂಗ ಭೂಮಿಗೆ ನೂತನ ಭಾಷ್ಯವನ್ನು ಬರೆದು, ಯಕ್ಷ ರಸಿಕರ ಹೃದಯ ಸಿಂಹಾಸನದಲ್ಲಿ ಶಾಶ್ವತ ನೆಲೆ ಗಿಟ್ಟಿಸಿಕೊಂಡರು. ಮಹಾನ್ ವಿಚಾರವಾದಿ ನಾಯ್ಕರು ಬೂದಿ ಮುಚ್ಚಿದ ಕೆಂಡವಾಗಿ, ನಿರಾಡಂಬರವಾದ ಜೀವನವನ್ನು ಸಾಗಿಸಿದರು.

ಯಕ್ಷಗಾನದ ಶೃಂಗಾರ, ಹಾಸ್ಯ, ಕರುಣ, ವೀರ..... ಯಾವುದೇ ರಸವಿರಲಿ ಅದನ್ನು ಪರಿಪುಷ್ಟವಾಗಿ ಮಾಡಿ ತೋರಬಲ್ಲ ಧೀಮಂತ ಕಲಾ ವ್ಯಕ್ತಿತ್ವದ ಶಿರಿಯಾರರು, ಅದ್ವಿತೀಯ ವಾಗ್ಮಿತೆ, ವೈದುಷ್ಯ ಎರಡಕ್ಕೂ ಉದ್ಗಮ ಸ್ಥಾನವಾದ ಹೃದಯ ಶ್ರೀಮಂತಿಕೆಯಿಂದ ಬಹು ದೀರ್ಘಕಾಲ ಸಾವಿರ, ಸಾವಿರ ಜನ ಯಕ್ಷಗಾನಾಸಕ್ತರನ್ನು ರಸಪರವಶರನ್ನಾಗಿ ಮಾಡಿದರು.

ಮಾರಣಕಟ್ಟೆ ಮೇಳದಲ್ಲಿ ವೀರಭದ್ರ ನಾಯಕ್, ಕೊಳ್ಕೆಬೈಲು ಶೀನರೊಂದಿಗೆ ಕಲಾ ವ್ಯವಸಾಯ ಮಾಡಿದ ನಾಯ್ಕರು ಹಾರಾಡಿ ರಾಮ ಗಾಣಿಗರ ಎರಡನೇ ವೇಷದಲ್ಲಿ ಪುರುಷ ವೇಷಧಾರಿಯಾಗಿ ಬಹುಕಾಲ ಮಂದರ್ತಿ ಮೇಳದಲ್ಲಿ ಸೇವೆ ಸಲ್ಲಿಸಿದರು. ರಾಮ ಗಾಣಿಗರ "ಜಾಂಬವ", ಶಿರಿಯಾರರ ಕೃಷ್ಣ ಯಶಸ್ವಿ ಭೂಮಿಕೆಗಳಾಗಿ ಮಂದಾರ್ತಿಯಲ್ಲಿ ಬೆಳಗಿನ ಜಾವಕ್ಕೆ "ಜಾಂಬವತಿ ಕಲ್ಯಾಣ"ವೇ ಖಾಯಂ ಆಯಿತು. ಶಿರಿಯಾರರಿಗೆ ಶ್ರೀಕೃಷ್ಣನ ಪಾತ್ರಗಳು ಖ್ಯಾತಿ ತಂದುಕೊಟ್ಟು ಯಕ್ಷಗಾನದಲ್ಲಿ ದಾಖಲಾದವು.

ಉಡುಪಿ ಮಠದಲ್ಲಿ ನಡೆದ "ಶ್ರೀಕೃಷ್ಣ ಪಾರಿಜಾತ"ದಲ್ಲಿ ಶಿರಿಯಾರರವರ ಶ್ರೀಕೃಷ್ಣನನ್ನು ಕಂಡು ಮೆಚ್ಚಿದ ಪೇಜಾವರ ಮಠದ ಸ್ವಾಮಿಗಳು ಇವರನ್ನು ಸನ್ಮಾನಿಸಿ, ಪುರಸ್ಕರಿಸಿದ್ದರು. ಮಾರ್ಗೋಳಿ ಗೋವಿಂದ ಸೇರೆಗಾರರ "ಸತ್ಯಭಾಮೆ" - ಶಿರಿಯಾರರ "ಕೃಷ್ಣ" ಆಕರ್ಷಕ ಜೋಡಿಯಾಯಿತು. ಹಾಗೆಯೇ ತೆಂಕುತಿಟ್ಟಿನ ಪ್ರಸಿದ್ಧ ಸ್ತ್ರೀ ವೇಷಧಾರಿ ಕೋಳ್ಯೂರು ರಾಮಚಂದ್ರ ರಾವ್‌ರವರ ರಂಗ ಸಾಂಗತ್ಯದಲ್ಲಿ ದೇವವ್ರತ ಮತ್ಸ್ಯಗಂಧಿ, ಅರ್ಜುನ ಪ್ರಮೀಳೆ, ಸುಧನ್ವ ಪ್ರಭಾವತಿ, ಮೊದಲಾದ ಪಾತ್ರಗಳು ಅತ್ಯುತ್ತಮ ಜೋಡಿಯ ಮೋಡಿ ಮಾಡಿದ್ದವು. ವೀರಭದ್ರ ನಾಯಕರ "ಮಾಗಧ"ನೊಂದಿಗೆ ಶಿರಿಯಾರರು "ಕೃಷ್ಣ"ನಾಗಿ ಮಿಂಚುವ ಪರಿ ಅನಿರ್ವಚನೀಯವಂತೆ! ಆ ಸರಸೋಕ್ತಿ, ವ್ಯಂಗ್ಯಭಾವ, ಚತುರ ಸಂಭಾಷಣಾ ಶೈಲಿಯ ಆ ವಿದ್ವತ್‌ಪೂರ್ಣ ವಾಗ್ವಿಲಾಸ ಅವರಿಬ್ಬರ ಅಳಿವಿನ ತರುವಾಯ ಮತ್ತೆ ಕಾಣಸಿಗುವುದು ದುರ್ಲಭವಾಯಿತು.

ಅಮೃತೇಶ್ವರಿ ಮೇಳದಲ್ಲಿ ಉಡುಪಿ ಬಸವನವರೊಂದಿಗೆ ತಿರುಗಾಟ ನಡೆಸಿದ ನಾಯ್ಕರು ತದನಂತರ ಪೆರ್ಡೂರು ಮೇಳದ "ಯಜಮಾನ"ರಾಗಿ ಪೆರ್ಡೂರು ರಾಮನವರ 2ನೇ ವೇಷದಲ್ಲಿ, ಇವರು ಪುರುಷ ವೇಷಧಾರಿಯಾಗಿ ಸೇವೆ ಸಲ್ಲಿಸಿದರು. 1956, 57,

58ರ ಇಸವಿಯಲ್ಲಿ ಮೂರು ವರ್ಷಗಳ ಕಾಲ ಮೇಳವನ್ನು ನಡೆಸಿ ಕೈ ಸುಟ್ಟುಕೊಂಡರು. ಅನಂತರ ಶಿರಿಯಾರರು ಪಳ್ಳಿ ಸೋಮನಾಥ ಹೆಗ್ಡೆಯವರ ಯಜಮಾನಿಕೆಯ ಸಾಲಿಗ್ರಾಮ ಮೇಳವನ್ನು ಪ್ರವೇಶಿಸಿದರು. ಅಲ್ಲಿ "ಭೀಷ್ಮ-ಭೀಷ್ಮ-ಭೀಷ್ಮ"ದ ಮೊದಲ ಭೀಷ್ಮ (ದೇವವ್ರತ)ನಾಗಿ ಒಡಗಿನ ಹೆಸರಾಂತ ಸ್ತ್ರೀ ಪಾತ್ರಧಾರಿ ಅರಾಟೆ ಮಂಜುನಾಥರ "ಮತ್ಸ್ಯಗಂಧಿ"ಯ ಜೋಡಿಯಲ್ಲಿ ಯಕ್ಷ ಪ್ರೇಮಿಗಳ ಮನ ಸೂರೆಗೈದರು. ಮಹಾಬಲ ಹೆಗಡೆಯವರು ವಿಜಯದ ಭೀಷ್ಮ, ವೀರಭದ್ರ, ನಾಯ್ಕರು ಪರ್ವದ ಭೀಷ್ಮನಾಗಿ ಕಾಣಿಸಿಕೊಂಡು, ಆ ಪ್ರಸಂಗ ಹೊಸ ವಾತಾವರಣವನ್ನೇ ಸೃಷ್ಟಿಸಿತು.

ಉತ್ತಮ ಕಂಠವುಳ್ಳ ಶಿರಿಯಾರರು ಪದ್ಯದ ಎತ್ತುಗಡೆ ಮಾಡುವ ಚೆಂದವೇ ಬೇರೆಯಾಗಿತ್ತಂತೆ ! ದಿ. ನಾರ್ಣಪ್ಪ ಉಪ್ಪೂರರು, ದಿ. ಕಾಳಿಂಗ ನಾವಡರ ಭಾಗವತಿಕೆಗೆ ಹೆಜ್ಜೆ ಹಾಕಿದ ಶಿರಿಯಾರರ ಪಾತ್ರ ವೈವಿಧ್ಯವನ್ನು ಅವಲೋಕಿಸುವುದಾದರೆ ಶ್ವೇತ ಕುಮಾರ, ಋತುಪರ್ಣ, ಸುಧನ್ವ, ಶ್ರೀಕೃಷ್ಣ ಹಾಗೂ "ನಾಗಶ್ರೀ"ಯ ಶುಭ್ರಾಂಗ...ಮೊದಲಾದ ಭೂಮಿಕೆಗಳು ಶಿರಿಯಾರರೊಂದಿಗೇ ಅಂತರ್ಧಾನವಾದವು. ಹಾರಾಡಿಯವರ ಕಾಲಾನಂತರ ಕರ್ಣನಾಗಿಯೂ, ಅರ್ಜುನನಾಗಿಯೂ ಮಿಂಚಿದ್ದು ಇವರ ಪ್ರತಿಭಾ ವಿಶೇಷದ ಮತ್ತೊಂದು ಮಜಲು.

ಮೇಳದ ತಿರುಗಾಟ ಮುಗಿಸಿ ಮಳೆಗಾಲಕ್ಕೆ ಕಲಾ ಪ್ರದರ್ಶನಕ್ಕೆಂದು ಮುಂಬೈಗೆ ಹಾರುವ ನಾಯ್ಕರ ಅಭಿಮಾನಿ ಬಳಗ ಬಲು ದೊಡ್ಡದು. ಆ ಕಾಲದಲ್ಲಿ ಧರ್ಮಸ್ಥಳ ಹೆಗ್ಗಡೆಯವರಿಂದ ಹಾಗೂ ತನ್ನ ಹುಟ್ಟೂರಾದ ಶಿರಿಯಾರದಲ್ಲಿ ಡಾ. ಶಿವರಾಮ ಕಾರಂತರಿಂದ ಸನ್ಮಾನವನ್ನು ಪಡೆದಿದ್ದರು. ತನ್ನ ಕೃಷ್ಣನ ಪಾತ್ರದ ಹಿರಿಮೆಗೆ ಈ "ಜೀವಂತ ಕೃಷ್ಣಮೂರ್ತಿ"ಗೆ ಅಭಿಮಾನಿಗಳಿಂದ ಪದಕವುಳ್ಳ 6 ಪವನಿನ ಬಂಗಾರದ ಹಾರವೂ ಪ್ರೀತ್ಯರ್ಥವಾಗಿ ದೊರಕಿತ್ತು. ಉತ್ತಮ ಭಾಗವತಿಕೆಯನ್ನೂ ಮಾಡಬಲ್ಲ ನಾಯ್ಕರು ತನ್ನ ಅಳಿಯಂದಿರನ್ನು ಕರೆದುಕೊಂಡು, "ಹೂವಿನ ಕೋಲು" ತಿರುಗಾಟಕ್ಕೆ ಹೋಗುತ್ತಿದ್ದರು.

"ಸರಸ್ವತಿಯ ಅನುಗ್ರಹ ಇರುವೆಡೆ ಲಕ್ಷ್ಮಿಯ ಕಟಾಕ್ಷ ಕಿರಿದು" ಎಂಬಂತೆ ಹಣ ಮಾಡಲಾಗದಿದ್ದರೂ ಅಪಾರ ಹೆಸರು ಗಳಿಸಿದರು.

"ಬೆಳ್ಳಗೆ, ತೆಳ್ಳಗಿನ, ಒಳ್ಳೆಯ ಕಂಠ, ಶುಭ್ರ ಬಿಳಿ ವೇಷ್ಟಿ, ಅರೆದೋಳಿನ ಅಂಗಿ, ಕಿವಿಯಲ್ಲೊಂದು ಒಂಟಿ, ತಲೆಯಲ್ಲಿ ರುಮಾಲು, ಸಣ್ಣ ಜುಟ್ಟು" ಇದು ನಾಯ್ಕರ ನಿಜ ವೇಷವಾಗಿತ್ತು.

ಮಾರಣಕಟ್ಟೆ, ಸೌಕೂರು, ಅಮೃತೇಶ್ವರಿ, ಮಂದಾರ್ತಿ, ಪೆರ್ಡೂರು, ಸಾಲಿಗ್ರಾಮ....ಮೇಳಗಳಲ್ಲಿ ಸುದೀರ್ಘ ಕಲಾ ವ್ಯವಸಾಯ ಮಾಡಿದ ಈ ಕಲಾ ತಪಸ್ವಿ 1982ರಲ್ಲಿ ಮಣಿಪಾಲದ ಗೋಲ್ಡನ್ ಜ್ಯೂಬಿಲಿ ಹಾಲಿನಲ್ಲಿ ನಡೆದ ಭೀಷ್ಮ ವಿಜಯದ

ಪರಶುರಾಮನಾಗಿ ರಂಗ ಪ್ರವೇಶಿಸಿ ರಂಗದ ರಾಜನಾಗಿಯೇ, ಅವತಾರ ಪುರುಷನಾಗಿ ರಂಗದಲ್ಲೇ ಪಂಚಭೂತಗಳಲ್ಲಿ ಲೀನವಾದರು. ಇಂದು ಆ ಶಿರಿಯಾರರು ನಮ್ಮೆದುರಿಲ್ಲ, ಕೇವಲ ಮಾಸದ ನೆನಪು ಮಾತ್ರ ಅಚ್ಚಾಗಿ ಉಳಿದು ನಿಂತಿದೆ. ಶಿರಿಯಾರರ ಅಭಿಮಾನಿಯಾಗಿ ಈ ಬರಹದ ಮೂಲಕ ನುಡಿ ನಮನ ಸಲ್ಲಿಸಲು ಸಹಕರಿಸಿದ ಶಿರಿಯಾರ ಮಂಜು ನಾಯ್ಕರ ಸೋದರಳಿಯ ಶೇಖರ ಬಂಗೇರರಿಗೆ ಹಾಗೂ ಶಿರಿಯಾರರ ನಿಕಟವರ್ತಿ ಆಗಿದ್ದ ನನ್ನ ತಂದೆ ಹಿರಿಯ ನಾಯ್ಕರಿಗೆ ನಾನು ಚಿರಋಣಿಯಾಗಿದ್ದೇನೆ.

*****

# ರಂಗಸ್ಥಳದ ಸಂಜೀವನ ಶಿರಿಯಾರ ಮಂಜು ನಾಯ್ಕ

ಯಂ. ವಿಠಲ ಶೆಟ್ಟಿ

ಈ ಮಾತನ್ನು ಹೇಳಿದವರು ಬಡಗುತಿಟ್ಟಿನ ಹೆಸರಾಂತ ಭಾಗವತರಾದ ಜಾನುವಾರು ಕಟ್ಟೆಯ ದಿ. ಗೋಪಾಲ ಕಾಮತ್‌ರವರು. ನಾನು ಮತ್ತು ಜಾನುವಾರುಕಟ್ಟೆ ಗೋಪಾಲ ಕಾಮತರು ಒಂದೇ ಊರಿನವರಾಗಿದ್ದೆವು. 15 ವರ್ಷಗಳ ಹಿಂದೆ ಗೋಪಾಲ ಕಾಮತರು ಮಂದರ್ತಿ ಮೇಳದಲ್ಲಿ ಭಾಗವತರಾಗಿರುವಾಗ ಒಂದು ದಿನ ಬ್ರಹ್ಮಾವರದ ಆಟ ಮುಗಿಸಿ ಮನೆಗೆ ಬಂದಿದ್ದರು. ನಾನು ಅಕಸ್ಮಾತ್ತಾಗಿ ಆ ದಿನ ಅವರ ಮನೆಗೆ ಹೋಗಿದ್ದೆ. ಆ ವರ್ಷ ಮಂಜು ನಾಯ್ಕರವರು ಬೇರೆ ಮೇಳ ಬಿಟ್ಟು ಮಂದರ್ತಿ ಮೇಳಕ್ಕೆ ಸೇರಿದ್ದರು. ನನ್ನನ್ನು ನೋಡಿದ ಭಾಗವತರು ವಿಠಲ್ ಮಾಸ್ಟ್ರೇ ನಿನ್ನೆ ಆಟದಲ್ಲಿ ಪುಷ್ಪ ವೇಣಿ ಸ್ವಯಂವರದಲ್ಲಿ ಶಿರಿಯಾರ ಮಂಜು ನಾಯ್ಕರು ಒಂದು ಶ್ರುತಕೀರ್ತಿ ಪಾತ್ರ ಮಾಡಿದ್ದಾರೆ. ಇಂತಹ ಒಂದು ವೇಷ ಇಷ್ಟರವರೆಗೆ ನಾನು ನೋಡಿಲ್ಲ. ನನಗೆ ಬಹಳ ಸಂತೋಷವಾಯ್ತು ಎಂತಹ ಲಯ, ಎಂತಹ ಭಾವನೆ, ಆ ಕಿರುಹೆಜ್ಜೆ, ಶ್ರುತಿಬದ್ಧವಾದ ಮಾತು. ಎಲ್ಲಕ್ಕೂ ಮಿಗಿಲಾಗಿ ಒಂದು ಪದ್ಯಕ್ಕೆ 20 ನಿಮಿಷ ಅರ್ಥ ಹೇಳಿ ಕೊನೆಗೆ ಮುಂದಿನ ಪದ್ಯಕ್ಕೆ ತಂದು ಪದ್ಯ ಎತ್ತಿ ರಂಗಸ್ಥಳಕ್ಕೆ ಚೈತನ್ಯ ತುಂಬುವ ಮಂಜು ನಾಯ್ಕರು ರಂಗಸ್ಥಳದ ಸಂಜೀವನ ಎಂದು ಕೊಂಡಾಡಿದರು. ಈ ಮಾತು ನೂರಕ್ಕೆ ನೂರರಷ್ಟು ಸತ್ಯ.

ನಾನು ಮೊದಲು ಮಂಜು ನಾಯ್ಕರ ವೇಷ ಕಂಡದ್ದು ರತಿ ಕಲ್ಯಾಣದ ಕೃಷ್ಣ. ಆಮೇಲೆ ಕೃಷ್ಣನ ಪಾತ್ರವಿರುವ ಸುಮಾರು 10 ಪ್ರಸಂಗಗಳ ಕೃಷ್ಣನನ್ನು ಕಂಡಿದ್ದೇನೆ. ಮಂಜು ನಾಯ್ಕರ ಕೃಷ್ಣ ಎಂದರೆ ಎಲ್ಲರ ಮನೆ ಮಾತಾಗಿತ್ತು. ದಿ. ಮಂಜು ನಾಯ್ಕರು ಮಂದರ್ತಿ ಮೇಳದಲ್ಲಿರುವಾಗ ನಮ್ಮ ಮನೆಯ ಹತ್ತಿರ ಒಂದು ಆಟವಾಗಿತ್ತು. ಶ್ರೀಮಂತರ ಮನೆಯ ಆಟ. ಪರವೂರಿನಲ್ಲಿರುವ ಅವರ ಬಂಧುಬಾಂಧವರು ಬಹಳ ಸಂಖ್ಯೆಯಲ್ಲಿ

ಆಗಮಿಸಿದ್ದರು. ಬಹು ದೊಡ್ಡ ಸಭೆ, ದೊಡ್ಡ ದೊಡ್ಡ ವಿದ್ಯಾವಂತರು ಸಭೆಯಲ್ಲಿ ಉಪಸ್ಥಿತರಿದ್ದರು. ಆ ದಿನ ಪ್ರಸಂಗ ರುಕ್ಮಿಣಿ ಸ್ವಯಂವರ. ಮಂಜು ನಾಯ್ಕರ ಕೃಷ್ಣ ಉಡುಪಿ ಬಸವ ಅವರ ರುಕ್ಮಾಂಗದ. ಕೃಷ್ಣನ ಪ್ರವೇಶದ ಪ್ರಥಮ ಪದ್ಯಕ್ಕೆ ಸುಮಾರು ಅರ್ಧ ಗಂಟೆ ಮಾತನಾಡಿ ಎರಡನೇ ಪದ್ಯ ಎತ್ತಿದಾಗ ಇಡೀ ಸಭೆ ಕೈ ಚಪ್ಪಾಳೆಯ ಮೂಲಕ ಸಂತೋಷ ವ್ಯಕ್ತಿ ಪಡಿಸಿತು. ವೇಷ ಕೂಡಾ ಅಷ್ಟು ಮುದ್ದಾಗಿತ್ತು. ನನ್ನ ಹತ್ತಿರ ಒಬ್ಬರು ಡಾಕ್ಟರು ಕುಳಿತಿದ್ದರು. ಅವರು ನನ್ನ ಹತ್ತಿರ "ಎಂತಹ ವೇಷಧಾರಿ ಮಾರಾಯರೆ", ಇವರು ಕೊಟ್ಟ ಉದಾಹರಣೆ ಇವರ ಶಬ್ದಸಂಪತ್ತು, ಅಲಂಕಾರಯುಕ್ತವಾದ ಮಾತು ಇದನ್ನೆಲ್ಲಾ ನೋಡಿದರೆ ಡಿಗ್ರಿ ತರಗತಿಗೆ ಪಠ್ಯಪುಸ್ತಕ ಬರೆಯುವಷ್ಟು ಯೋಗ್ಯತೆ ಇವರಿಗಿದೆ. ಇವರು ಯಕ್ಷಗಾನ ಕ್ಷೇತ್ರದ ಬಹು ದೊಡ್ಡ ಸಂಪನ್ಮೂಲ ವ್ಯಕ್ತಿ ಎಂದು ಹರ್ಷ ವ್ಯಕ್ತಪಡಿಸಿದರು. ಮಂಜು ನಾಯ್ಕರನ್ನು ಬಹು ಎತ್ತರಕ್ಕೆ ತಂದ ವೇಷಗಳೆಂದರೆ ಪುಷ್ಪ ವೇಣಿ ಸ್ವಯಂವರದ ಶ್ರುತಕೀರ್ತಿ, ಜಾಂಬವತಿ ಕಲ್ಯಾಣದ ಕೃಷ್ಣ, ಶ್ವೇತ ಕುಮಾರ, ಋತುಪರ್ಣ, ವಸಂತ ಸೇನೆಯ ಚಾರುದತ್ತ, ದೇವವ್ರತ, ಚಂದ್ರಹಾಸ ಮೊದಲಾದ ವೇಷಗಳು. ಕೆಲವು ದೊಡ್ಡ ವೇಷಧಾರಿಗಳು ನಿರ್ದಿಷ್ಟವಾದ ಕೆಲವೇ ವೇಷಗಳನ್ನು ಮಾತ್ರ ಮಾಡುತ್ತಾರೆ. ಮಂಜು ನಾಯ್ಕರು ಹಾಗಲ್ಲ, ಯಾವುದೇ ಪಾತ್ರವನ್ನು ಕೊಟ್ಟರೂ ಆ ಪಾತ್ರಕ್ಕೆ ಕಳೆ ತುಂಬುತ್ತಾರೆ. ನಾನು ಇವರ ವಿರಾಟಪರ್ವದ ವಿರಾಟರಾಯ, ಮೀನಾಕ್ಷಿ ಕಲ್ಯಾಣದ ಮಂತ್ರಿ, ಶೂರಸೇನ, ಶಕುಂತಳಾ ಪರಿಣಯದ ದುಷ್ಯಂತ, ಯಯಾತಿ, ಕರ್ಣಾರ್ಜುನ ಕಾಳಗದ ಕರ್ಣ ಇವುಗಳಲ್ಲದೇ ಹಲವಾರು ಪೋಷಕ ಪಾತ್ರಗಳನ್ನೂ ಕಂಡಿದ್ದೇನೆ. ಯಾವ ಪಾತ್ರ ಮಾಡಿದರೂ ಪ್ರೇಕ್ಷಕರ ಪ್ರಶಂಸೆಗೆ ಪಾತ್ರರಾಗುತ್ತಾರೆ. ಇಂಪಾದ ಸ್ವರವುಳ್ಳವರಾದುದರಿಂದ ಭಾಗವತರಾಗಿಯೂ ಕೂಡ ಚಂದವಾಗಿ ಪದ್ಯವನ್ನು ಹಾಡಬಲ್ಲರು. "ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಗಸು" ಎಂಬಂತೆ ಯಕ್ಷಗಾನದ ಮೂಲ ಸ್ವರೂಪವನ್ನು ಕಾಪಾಡಿಕೊಳ್ಳುವುದರ ಜೊತೆಗೆ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿದ್ದಾರೆ. ಭಾಗವತರು ಹೇಳಿದ ಇಡೀ ಪದ್ಯವನ್ನು ಅದೇ ರಾಗದಲ್ಲಿ ಅದೇ ತಾಳದಲ್ಲಿ ಅಭಿನಯದ ಮೂಲಕ ಹಾಡಿ ಯಶಸ್ಸನ್ನು ಪಡೆದಿದ್ದಾರೆ. ಉದಾ: ವಸಂತ ಸೇನೆ ಪ್ರಸಂಗದಲ್ಲಿ ಚಾರುದತ್ತ ಪಾತ್ರದಲ್ಲಿ ಶ್ವೇತ ಕುಮಾರನ ಪಾತ್ರದಲ್ಲಿ ಇತ್ಯಾದಿ.

ವೈಯಕ್ತಿಕವಾಗಿಯೂ ಕೂಡಾ ಆದರ್ಶವಾದ ನಡೆ ನುಡಿಯುಳ್ಳವರು. ಹಿತಮಿತವಾದ ಮಾತು, ಕಿರುನಗೆ ಹಿರಿಯರನ್ನು , ಅಭಿಮಾನಿಗಳನ್ನು ಗೌರವಿಸುವುದು, ಸಹ ಕಲಾವಿದರ ಬೆಳವಣಿಗೆಯಿಂದ ಸಂತೋಷ ಪಡುವುದು ಮೊದಲಾದ ದೊಡ್ಡ ಗುಣಗಳನ್ನು ಬೆಳೆಸಿಕೊಂಡವರು.

ಶಿರಿಯಾರದ ಹೆಸರನ್ನು ದೇಶ ವಿದೇಶಗಳಲ್ಲಿ ತನ್ನ ಕಲಾ ಸೇವೆಯ ಮೂಲಕ ಪ್ರಚುರಪಡಿಸಿದ ಕೀರ್ತಿ ದಿ. ಮಂಜು ನಾಯ್ಕರಿಗೆ ಸಲ್ಲುತ್ತದೆ. ಶಿರಿಯಾರದಲ್ಲಿಯೇ ಒಂದು ಆಟವಾದಾಗ ಜಲವಳ್ಳಿ ವೆಂಕಟೇಶ ಅವರು ಎದುರು ವೇಷದಲ್ಲಿ ಮಾತನಾಡುವಾಗ ಮಂಜು ನಾಯ್ಕರನ್ನು ಉದ್ದೇಶಿಸಿ "ಸಿರಿಯು ಆರದ ನಿನ್ನ ಮುಖದಿಂದ ಶಿರಿಯಾರದ ಕೀರ್ತಿ ಪ್ರಜ್ವಲಿಸಲಿ" ಎಂದಿದ್ದಾರೆ. ಹೀಗೆ ಶಿರಿಯಾರದ ಕಲಾರತ್ನವಾಗಿ ಬಾಳಿ, ಬೆಳಗಿ, ಅಗಲಿದ ದಿವ್ಯಚೇತನ ಅವರಾಗಿದ್ದಾರೆ.

*****

# ಶಿರಿಯಾರ ಮಂಜು ನಾಯ್ಕರ ಬಗ್ಗೆ

ರಮಾನಂದ ವಿ. ಪಾಟೀಲ್

ನಾನು ಶಿರಿಯಾರ ಮಂಜು ನಾಯ್ಕರ ವೇಷವನ್ನು ಬಹುವಾಗಿ ಮೆಚ್ಚಿಕೊಂಡವ. ಕಳೆದ 50 ವರ್ಷಗಳಿಂದೀಚೆಗೆ ಯಕ್ಷಗಾನದ ಮೂರು ಅಗ್ರಗಣ್ಯ ಕಲಾವಿದರನ್ನು ಹೆಸರಿಸುವುದಾದರೆ ಅದರಲ್ಲಿ ಒಂದು ಹೆಸರು ದಿ. ಮಂಜು ನಾಯ್ಕರದ್ದಾಗಿರಲೇಬೇಕು. ಅವರ ದೇವವ್ರತ, ಭರತ, ಚಂದ್ರಹಾಸ, ಕಚ, ಋತುಪರ್ಣ ಹಾಗೂ ಬಹು ಮುಖ್ಯವಾಗಿ ಶ್ರೀಕೃಷ್ಣನ ಪಾತ್ರಗಳು ಉತ್ಕೃಷ್ಟ ಮಟ್ಟದವುಗಳಾಗಿರುತ್ತಿದ್ದವು.

ಸುಮಾರು 40 ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ನಡೆದ ಶ್ರೀ ಮಂದಾರ್ತಿ ಮೇಳದ ಆಟದ ಪ್ರಥಮದಲ್ಲಿ "ಶ್ರೀ ಕೃಷ್ಣ ಪಾರಿಜಾತ"ದ ಶ್ರೀ ಕೃಷ್ಣನಾಗಿ, ಅನಂತರದ ಪ್ರಸಂಗವಾದ "ಜಾಂಬವತಿ ಕಲ್ಯಾಣ"ದ ಅದೇ ಶ್ರೀ ಕೃಷ್ಣನ ಪಾತ್ರಗಳು. (ಆ ಕಾಲದಲ್ಲಿ 15 ವರ್ಷದ ಹುಡುಗನಾಗಿದ್ದ ನನಗೆ ಈಗಲೂ ಕಣ್ಣಿಗೆ ಕಟ್ಟಿದಂತೆ ಭಾಸವಾಗುತ್ತಿದೆ) ಆ ಎರಡೂ ಪ್ರಸಂಗದ ಶ್ರೀಕೃಷ್ಣನ ಪಾತ್ರಗಳು, ದಿ. ಮಂಜು ನಾಯ್ಕರದ್ದಾಗಿದ್ದವು. ಅವರ ಹಾಗೂ ಸಹ ಕಲಾವಿದರ(ದಿ. ಹಾರಾಡಿ ರಾಮ-ದಿ. ಉಡುಪಿ ಬಸವ) ಆ ದಿನದ ಅಭಿನಯ ಅತೀ ಉನ್ನತ ಮಟ್ಟದ್ದಾಗಿತ್ತು. ಬೆಳಿಗ್ಗೆ ಹೊತ್ತು ಮೂಡಿ ಸುಮಾರು 1-30 ಯಿಂದ 2 ಗಂಟೆ ಕಳೆಯುವವರೆಗೆ ಅಂದರೆ ಬೆಳಿಗ್ಗೆ ಸುಮಾರು 8.00 ಗಂಟೆಯವರೆಗೆ ಆ ದಿನ ಆಟ ನಡೆದಿತ್ತು. ಪ್ರೇಕ್ಷಕರು ಆಸಕ್ತಿಯಿಂದ ಆ ದಿನ ಬೆಳಗ್ಗಿನ ಬಿಸಿಲಿನಲ್ಲಿ ಆಟ ನೋಡಿದ್ದರು. ಇದೊಂದು ನನಗೆ ಅವಿಸ್ಮರಣೀಯ ಅನುಭವ. ಮೇಲೆ ಹೆಸರಿಸಿದ ಎಲ್ಲಾ ಪಾತ್ರಗಳನ್ನೂ ಶ್ರೀ ಮಂಜು ನಾಯ್ಕರು ಸ್ಮರಣೀಯವಾಗಿ ಅಭಿನಯಿಸುತ್ತಿದ್ದರಾದರೂ, ನಾನು ಬಹುವಾಗಿ ಮೆಚ್ಚಿದ್ದು ನಮ್ಮೂರಿನಲ್ಲಿ ನಡೆದ ಸಾಲಿಗ್ರಾಮ ಮೇಳದ, ಟೆಂಟಿನ ಆಟವೊಂದರಲ್ಲಿನ "ಋತುಪರ್ಣ ಮಹಾರಾಜ"ನ ಪಾತ್ರವನ್ನು. ಈ ವೇಷವನ್ನು ಇತರ 3-4 ಪ್ರಸಿದ್ಧ ಕಲಾವಿದರು ಬೇರೆ ಬೇರೆ ಸಂದರ್ಭಗಳಲ್ಲಿ ಅಭಿನಯಿಸಿದ್ದನ್ನು ನಾನು ನೋಡಿದ್ದೇನಾದರೂ ಶ್ರೀ ಮಂಜು ನಾಯ್ಕರ

ಅಂದಿನ ಪಾತ್ರಕ್ಕೆ ಪ್ರಥಮ ಸ್ಥಾನ ಸಲ್ಲಬೇಕು. ದಮಯಂತಿಯ ಪುನರ್ ಸ್ವಯಂವರದ ಬಗ್ಗೆ ಅವಳ ತಂದೆ ಕಳುಹಿಸಿದ ಪತ್ರವನ್ನು ವಾಚಿಸುವಾಗ, ಇಡೀ ಸಭೆಯೇ ಬೆರಗಾಗಿ, ಆ ಪಾತ್ರದೊಂದಿಗೆ ಕೂಡಿ, ಒಂದು ಕ್ಷಣ ಸ್ವತಃ ಋತುಪರ್ಣ ಮಹಾರಾಜನೇ, ಅವನ ಸಭೆಯಲ್ಲಿ ಮಾತನಾಡುತ್ತಿರುವಂತೆಯೂ ನಾವು ಕುಳಿತಿರುವವರೆಲ್ಲಾ ಅವನ ಸಭಾಸದರಂತೆಯೂ ಅನಿಸಿದ್ದು ನನಗೊಬ್ಬನಿಗೇ ಅಲ್ಲ ಬೆಳಿಗ್ಗೆ ಆಟದ ನಂತರ ನಮ್ಮೂರಿನಲ್ಲಿ ಹೆಚ್ಚಿನವರ ಬಾಯಲ್ಲೂ ಅದೇ ಮಾತು.

ಸುಮಾರು 32 ವರ್ಷಗಳ ಹಿಂದೆ, ಸಾಲಿಗ್ರಾಮ ಮೇಳದ ಆಟ "ಸಮಗ್ರ ಭೀಷ್ಮ" ಕುಂದಾಪುರ ತಾಲ್ಲೂಕಿನ ಕಂಬದಕೋಣೆಯಲ್ಲಿ ನಡೆದಿತ್ತು. ಆ ಆಟಕ್ಕೆ ನಮ್ಮೂರಿನಿಂದ (ದೂರ ಸುಮಾರು 50 ಕಿ.ಮೀ.) ನಾವು 6-7 ಮಂದಿ ಹೊರಟಿದ್ದೆವು. ಕುಂದಾಪುರದಲ್ಲಿ ಹೊಟೇಲಿನಲ್ಲಿ ಊಟ ಮುಗಿಸಿ ಆಟಕ್ಕೆ ಹೋಗುವ ಯೋಜನೆ ನಮ್ಮದಿತ್ತಾದರೂ ಕಂಬದ ಕೋಣೆಗೆ ಆ ಕಾಲದಲ್ಲಿ ಸಂಜೆ 7.00 ಗಂಟೆಗೆ ಕೊನೆಯ ಬಸ್ಸಾಗಿದ್ದರಿಂದ, ನಾವು ಊಟ ಮಾಡಲಾಗದೇ ಬಸ್ಸನ್ನೇರಿದೆವು. ಅದೇ ಬಸ್ಸಿನಲ್ಲಿ ಇತರ ಪ್ರಯಾಣಿಕರೊಂದಿಗೆ ಶ್ರೀ ಮಂಜು ನಾಯ್ಕರು ಇದ್ದರು. ಅವರ ಸ್ವಲ್ಪ ಪರಿಚಯ ನಮ್ಮಲ್ಲಿ ಒಬ್ಬರಿಗೆ ಇದ್ದದ್ದರಿಂದ ಅವರೊಡನೆ ಮಾತನಾಡುತ್ತಾ ನಮ್ಮ ಅಂದಿನ ಗಮ್ಯ ಸ್ಥಾನ ತಲುಪಿದೆವು. ಶ್ರೀ ಮಂಜು ನಾಯ್ಕರು ಮುಂಚಿತವಾಗಿ ಬಸ್ಸಿನಿಂದಿಳಿದರೂ, ನಾವೆಲ್ಲರೂ ಇಳಿಯುವವರೆಗೆ ಅಲ್ಲೇ ನಿಂತು, ನಮ್ಮನ್ನೆಲ್ಲಾ ಮೇಳದ ಬಿಡಾರದ ಸ್ಥಳಕ್ಕೆ ಕರೆದೊಯ್ದು ಅಡುಗೆಯವರಿಗೆ ಹೇಳಿ ಬಿಸಿ ಬಿಸಿ ಊಟ ಕೊಡಿಸಿದ್ದು ಅವರ ಹೃದಯವಂತಿಕೆಗೆ ಸಾಕ್ಷಿ. ಅಲ್ಲದೇ ನಮಗೆಲ್ಲರಿಗೂ ಮರೆಯಲಾಗದ ಅನುಭವ. ಈ ಕಾಲದಲ್ಲಿ ಇಂಥದ್ದೆಲ್ಲ ಬರೇ ಕನಸಿನ ಮಾತು.

*****

# ಯಕ್ಷಗಾನದ "ಶಿರಿಯಾರದ ಮಂಜು"

**ಕೆ. ಮೋಹನ್**

"ಶ್ರುತಿಃ ಮಾತಾ ಲಯಃ ಪಿತಾಃ" ಎಂಬ ವಾಕ್ಯವನ್ನು ಮೈಗೂಡಿಸಿಕೊಂಡಿದ್ದವರು ದಿ. ಶಿರಿಯಾರ ಮಂಜು ನಾಯ್ಕರು. ಈ ಮಾತನ್ನು ಅವರ ವೇಷ ನೋಡಿದ್ದ ಯಾರೂ ಅಲ್ಲಗಳೆಯಲಾರರು. ಘನ ವಿದ್ವಾಂಸರಲ್ಲದಿದ್ದರೂ ಉತ್ತಮ ವಾಗ್ಮಿ. ಸೌಕೂರು ಮೇಳದಲ್ಲಿ ಪುಂಡು ವೇಷ ಮಾಡುವಾಗಲೇ ಇವರ ಯಕ್ಷಾಭಿಜ್ಞತೆಯನ್ನು, ಕಲಾ ಪ್ರೌಢಿಮೆಯನ್ನು ನೋಡಿ ಸೌಕೂರಿನ ರಾಮಣ್ಣ ಹೆಗ್ಡೆಯವರು ಸುವರ್ಣ ಹಾರವನ್ನು ಇವರಿಗೆ ಉಡುಗೊರೆಯಾಗಿ ನೀಡಿದ್ದರು.

ರಂಗದ ಹೊರಗೆ ಯಾರೊಂದಿಗೂ ಅತಿಯಾಗಿ ಬೆರೆಯದ, ಶಿಸ್ತು ಬದ್ಧ ಹಿತ ಮಿತ ಭಾಷಿಯಾದರೂ ರಂಗದಲ್ಲಿ ಅಪ್ರತಿಮ ವಾಕ್ಚಟುತ್ವ ಸಂಪನ್ನರು. ಪಾತ್ರದ ಗಾಂಭೀರ್ಯದೊಂದಿಗೆ ಸಮಯ ಪ್ರಜ್ಞೆಯನ್ನೂ, ಔಚಿತ್ಯ ಪ್ರಜ್ಞೆಯನ್ನೂ, ಹಾಸ್ಯ ಪ್ರಜ್ಞೆಯನ್ನೂ ಮೇಳೈಸಿ ತಮ್ಮ ಪ್ರಾಸಬದ್ಧ ಪ್ರತ್ಯುತ್ಪನ್ನ ಮತಿತ್ವವನ್ನು ಪ್ರದರ್ಶಿಸುತ್ತಿದ್ದರು ಎನ್ನುವುದಕ್ಕೆ ಒಂದು ಚಿಕ್ಕ ಉದಾಹರಣೆ ಈ ಘಟನೆ :

ಸುಧನ್ವ ಕಾಳಗದ ಅರ್ಜುನ (ಉಡುಪಿ ಬಸವ) ನ "ತಾನು ಮೂರು ಕಣ್ಣವನಿಗೂ ಹೆದರುವವನಲ್ಲ" ಎಂಬ ಮಾತಿಗೆ ಸುಧನ್ವ ಪಾತ್ರಧಾರಿಯಾಗಿ ಇವರ ಪ್ರತ್ಯುತ್ತರ "ಎಷ್ಟಾದರೂ ನೂರು ಕಣ್ಣವನ ಮಗನಲ್ಲವೇ" (ಇಂದ್ರ)

ಬೆಂಗಳೂರಿನಲ್ಲೊಮ್ಮೆ ಇವರ ಸುಧನ್ವನಿಗೆ ಶ್ರೀಯುತ ಪಿ. ಕೆ. ಮಧ್ಯಸ್ಥರು ಕೃಷ್ಣ ಪಾತ್ರ ಮಾಡಿದ್ದಾಗ "ಇನಿತು ನೋಡುತಲಾಗ ಭೂಪನ ತನುಜ" ಎಂಬ ಪದ್ಯಕ್ಕೆ ಅರ್ಥ ಹೇಳುತ್ತಾ "ನರನ ರಥದಲ್ಲಿ ಫಳಫಳನೆ ಹೊಳೆಯುತ್ತಿರುವವ ಯಾರು ಎಂತ ನೋಡಿದೆ.

ಇವ ನಮ್ಮ ಕೃಷ್ಣ- ಮಧ್ಯಸ್ಥನಲ್ಲವೇ?! (ಪಾರ್ಥನಿಗೆ ಭಾವ ತನಗೆ ದೇವ ಇಬ್ಬರಿಗೂ ಸೇರುವವ ಎಂಬ ಭಾವಾರ್ಥದಲ್ಲಿ) ಹಾಸ್ಯಲೇಪಿತ ಮಾತು ಸಭಾಂಗಣದಲ್ಲಿ ನಗೆಯ ಅಲೆಯೆಬ್ಬಿಸಿತು.

"ಕಂಸ ಜನ್ಮ" ಪ್ರಸಂಗದ ಉಗ್ರಸೇನ, "ಚಂದ್ರಹಾಸ ಚರಿತ್ರೆ"ಯ ಚಂದ್ರಹಾಸ, "ಭೀಷ್ಮ ಪ್ರತಿಜ್ಞೆ"ಯಲ್ಲಿ ದೇವವ್ರತ, "ವಸಂತ ಸೇನೆ"ಯಲ್ಲಿ ಚಾರುದತ್ತ ಮೊದಲಾದ ಪಾತ್ರಗಳಲ್ಲಿ ಇವರನ್ನು ಮೀರಿಸುವವರಿಲ್ಲ ಎಂದರೆ ತಪ್ಪಾಗಲಾರದು.

ಸತಿ ಸುಶೀಲೆಯಲ್ಲಿ ಅರಾಟೆ ಮಂಜುನಾಥ ಹಾಗೂ ಶಿರಿಯಾರ ಮಂಜು ನಾಯ್ಕರ ಪಾತ್ರಗಳ ಜೋಡಿಯ ಮಾತಿನ ಮೋಡಿ, ಮಧ್ಯರಾತ್ರಿಯ ಮಾರ್ಧವತೆಯಲ್ಲಿ ಸುಮಾರು ಅರ್ಧದಿಂದ ಮುಕ್ಕಾಲು ಗಂಟೆಯ ವಾಗ್ವಾದ ಜಲಪಾತವಾಗದೆ ಅವಿಚ್ಛಿನ್ನ ತೈಲಧಾರೆಯಾಗಿರುತ್ತಿತ್ತು. ತಮ್ಮ ಶ್ರುತಿಬದ್ಧ ಸುಸ್ಪಷ್ಟ ನಿರರ್ಗಳವಾದ ಮಾತಿನಲ್ಲಿ ಧರ್ಮದ ಮರ್ಮವನ್ನು ತತ್ವದ ಸಾರದೊಂದಿಗೆ ನೀತಿಯ ಸುಧೆ ಸಹಿತ ಧ್ವನಿಸಿ ಅದ್ಭುತ ರಸ ಸೃಷ್ಟಿಗೈಯುತ್ತಿದ್ದರು.

ನಾಯ್ಕರಿಗೆ ವಿಶೇಷ ಖ್ಯಾತಿಯನ್ನೂ ಗೌರವವನ್ನೂ ತಂದು ಕೊಟ್ಟದ್ದು ಕೃಷ್ಣನ ಪಾತ್ರ. ರುಕ್ಮಿಣಿ ಸ್ವಯಂವರ, ರತಿ ಕಲ್ಯಾಣವೇ ಮೊದಲಾದ ಪ್ರಸಂಗಗಳಲ್ಲಿ ಸಂಪ್ರದಾಯಬದ್ಧ ಕೃಷ್ಣನ ಒಡ್ಡೋಲಗ ನ ಭೂತೋ ನ ಭವಿಷ್ಯತಿ ಎನ್ನುವಷ್ಟು ವೈಶಿಷ್ಟ್ಯಪೂರ್ಣ. ರಂಗದ ಮಧ್ಯೆ, ತೆರೆಯ ಹಿಂದೆ ಏಕ ಮತ್ತು ಕೋರೆ ನಡೆಯ "ದೇವ ಬಂದ ದೇವರ ದೇವ ಶಿಖಾಮಣಿ ಬಂದ" ಎಂಬ ಪದ್ಯದ ನಾಲ್ಕು ಚರಣಗಳಿಗೆ ರಥದಲ್ಲಿ ಕುಳಿತೇ ನೀಡುತ್ತಿದ್ದ ಅಭಿನಯ, ನಂತರದ "ಬಂದನು ದೇವರ ದೇವ" ಕೋರೆ ತಾಳದ ಪದ್ಯಕ್ಕೆ ತೆರೆ ಹೊಡೆದು ಪ್ರವೇಶಿಸಿ, ಕಿರು ಹೆಜ್ಜೆಯೊಂದಿಗೆ ನೀಡುತ್ತಿದ್ದ ಅಭಿನಯ ಅವಿಸ್ಮರಣೀಯ. "ವಸುದೇವ ದೇವಕಿಯರ ಅಷ್ಟಮ ಗರ್ಭದಲ್ಲಿ ಅಷ್ಟಮಿಯ ದಿನದಂದು ನನ್ನ ಅಷ್ಟಮಾ ಗರ್ಭದಲ್ಲಿ ಅಷ್ಟಮಾವತಾರವನ್ನು ತಳೆದ" - ಎಂಬ ಚಿಕ್ಕ ಚೊಕ್ಕ ಪ್ರಾಸಬದ್ಧ ಪೀಠಿಕೆಯೊಂದಿಗೆ ರಸಿಕರಿಗೆ ಕಾವ್ಯ ಸುಧೆಯನ್ನುಣಿಸುತ್ತಿದ್ದ ಅವರ ರೀತಿ-ಶೈಲಿ ಅನುಕರಣೀಯ, ಅನುಸರಣೀಯ.

ತಮ್ಮ ಪ್ರಬುದ್ಧ ಅಭಿನಯ, ಕಿರು ಹೆಜ್ಜೆ, ಸಿರಿಕಂಠದ, ಯಕ್ಷಗಾನದ ಆರದ ಸಿರಿ ಶಿರಿಯಾರ ಮಂಜು ನಾಯ್ಕರು, ಮಣಿಪಾಲದ ಗೋಲ್ಡನ್ ಜ್ಯೂಬಿಲಿ ಹಾಲಿನಲ್ಲಿ "ಭೀಷ್ಮ ವಿಜಯ"ದ ಪರಶುರಾಮನಾಗಿ "ಪರಮಶಿಷ್ಯನೆ ನಿನ್ನ ಧುರಕೆ ಮೆಚ್ಚಿದೆ" ಎಂದವರು ಮತ್ತೆ ಎಚ್ಚರಗೊಳ್ಳಲೇ ಇಲ್ಲ. ಪಾತ್ರದಲ್ಲಿ ತಲ್ಲೀನರಾಗಿದ್ದಾಗಲೇ ರಂಗದ ಮೇಲೆಯೇ ಕಲಾ ಮರಣವನ್ನಪ್ಪಿದರು. ಯಾವ ತಾಯಿ ಹೆತ್ತ ಮಗನಿಗಿದ್ದೀತು ಇಂಥ ಸೌಭಾಗ್ಯ !

# ಕಂಚಿನ ಕಂಠದ ಶಿರಿಯಾರ ಮಂಜು

**ಎ. ಜೆ. ಡಿಸೋಜಾ**

ಪ್ರಸಿದ್ಧ ಸಾಲಿಗ್ರಾಮ ಮೇಳ ಪ್ರಾರಂಭವಾದ ಅಥವಾ ಅದಕ್ಕಿಂತ ಹಿಂದಿನ ವರ್ಷ ಇರಬಹುದು. ಬೆಳಗ್ಗಿನ ಗಂಜಿಯೂಟ ಮುಗಿಸಿ ಬಟ್ಟಲನ್ನು ತೊಳೆದು ಯಥಾ ಸ್ಥಾನದಲ್ಲಿ ಇಡುವಷ್ಟರಲ್ಲಿ ರಸ್ತೆಯಲ್ಲಿ ಮೈಕಾಸುರನ ಆರ್ಭಟ. "ಶ್ರೀ ಅಮೃತೇಶ್ವರಿ ಮೇಳ ಕೋಟ ಇವರ ಒಂದೇ ಒಂದು ಆಟ ; ಈ ಆಟ ರಸದೂಟ." ಲಾರಿಗೆ ಧ್ವನಿವರ್ಧಕವನ್ನು ಅಳವಡಿಸಿ ಆಟದ ಪ್ರಚಾರದೊಡನೆ ಕರಪತ್ರಗಳನ್ನು ರಸ್ತೆಗೆ ಒಗೆಯುತ್ತಿದ್ದರು. ಓಡಿ ಹೋಗಿ ಒಂದು ಕರಪತ್ರವನ್ನು ಹೆಕ್ಕಿ ಕಣ್ಣಾಡಿಸಿದಾಗ ಅಂದಿನ ಪ್ರಸಂಗ "ಭಕ್ತ ಸುಧನ್ವ - ರೇಣುಕಾ ಮಹಾತ್ಮೆ" ಎಂದು ತಿಳಿಯಿತು. ಅಲ್ಲಿಯೇ ಹತ್ತಿರದಲ್ಲಿ ತನ್ನ ಕರ್ಮಸಾಲೆಯನ್ನು ನಿರ್ಮಿಸಿ ಕಬ್ಬಿಣದ ಕೆಲಸದಲ್ಲಿ ನಿಸ್ಸೀಮ ಹಾಗೂ ಯಕ್ಷಗಾನ ಪ್ರೇಮಿಯಾದ ದಿ. ಕಾಳಯ್ಯ ಆಚಾರ್ಯರು ಕರಪತ್ರವನ್ನು ನೋಡಿ "ಓಹೋ ! ಶಿರಿಯಾರ ಮಂಜು ಇದ್ದಾನೆ ; ಇವನು ಅರ್ಥ ಬಾಯಿಪಾಠ ಹೇಳುತ್ತಾನೆ, ಮಾರಾಯ" ಎಂದು ಹೇಳಿ ಕರಪತ್ರವನ್ನು ವಾಪಾಸು ಕೊಟ್ಟರು. ಕಾಳಯ್ಯ ಆಚಾರ್ಯರಿಗೆ ಸ್ವಲ್ಪ ಕಿವಿ ಕೇಳುತ್ತಾ ಇರಲಿಲ್ಲ. ಕಿವಿಗೆ ಶಬ್ದ ಹಿರಿದಾಗಿಸುವ ಯಂತ್ರವನ್ನು ಅಳವಡಿಸಿದ್ದರು. ಅವರೊಡನೆ ಬೊಬ್ಬೆ ಹೊಡೆದು ಮಾತನಾಡಿ ಉಪಯೋಗವಿಲ್ಲವೆಂದು ತಿಳಿದು ನನ್ನ ಮನೆ ಸೇರಿದೆ. ಯಕ್ಷಗಾನದಲ್ಲಿ ಮಾತುಗಾರಿಕೆಯನ್ನು ಕಂಠಪಾಠ ಮಾಡಿ ಒಪ್ಪಿಸುವ ಜಾಯಮಾನವಿಲ್ಲವೆಂದು ನನಗೆ ತಿಳಿದಿತ್ತು. ಆದರೂ ಆಟ ನೋಡಿದ ಮೇಲೆ ತಿಳಿಯುತ್ತಿದೆ ಎಂದು ಸುಮ್ಮನಾದೆ.

ನಮ್ಮಾಚೆ ಮಂದಾರ್ತಿ, ಮಾರಣಕಟ್ಟೆ, ಅಮೃತೇಶ್ವರಿ ಮೇಳಗಳು ಆ ಕಾಲದಲ್ಲಿ ಬರುವುದು ಅಪರೂಪ. ಇಲ್ಲವೇ ಇಲ್ಲ ಎಂದು ಹೇಳಬಹುದು. ಅಪ್ಪಿ ತಪ್ಪಿ ಪೆರ್ಡೂರು, ಗೋಳಿಗರಡಿ ಮೇಳಗಳು ಬರುವುದಿತ್ತು. ಒಂದು ಕಾಲದಲ್ಲಿ ಶ್ರೀ ಶಿರಿಯಾರ ಮಂಜು ನಾಯ್ಕರ ನೇತೃತ್ವದಲ್ಲಿ ಪೆರ್ಡೂರು ಮೇಳ ಹತ್ತಿರದ ಊರುಗಳಾದ ಶಿರ್ವ, ಸೂಡ, ಕುತ್ಯಾರು ಇತ್ಯಾದಿ ಊರುಗಳಿಗೆ ಬರುವುದಿತ್ತಂತೆ. ಆದುದರಿಂದ ಈ ಕಾಳಯ್ಯ

ಆಚಾರ್ಯರಿಗೆ ಶಿರಿಯಾರ ಮಂಜು ನಾಯ್ಕರ ವೇಷದ ಪರಿಚಯ ಚೆನ್ನಾಗಿತ್ತು ಎಂದು ಹೇಳಬಹುದು.

ಬೇಗನೆ ರಾತ್ರಿ ಊಟ ಮುಗಿಸಿ ಟೆಂಟು ಹಾಕಿದ ಸ್ಥಳದ ಕಡೆಗೆ ನಡೆದೆ. ಸುಮಾರು ಎಂಟೂವರೆ ಒಂಭತ್ತು ಗಂಟೆಯಾಗಿರಬಹುದು. ಟಿಕೇಟು ಕೊಡಲು ಪ್ರಾರಂಭಿಸಿರಲಿಲ್ಲ. ಇಣುಕಿ ನೋಡಿದಾಗ ಮುಂದಿನ ಸಾಲಿನಲ್ಲಿ ಖ್ಯಾತ ಅರ್ಥಧಾರಿ ದಿ. ಪೊಲ್ಯ ದೇಜಪ್ಪ ಶೆಟ್ಟರು ಕುಳಿತುಕೊಂಡಿದ್ದರು. ಆ ವರ್ಷ ಮೇಳದ ಎರಡನೇ ವೇಷಧಾರಿಯಾಗಿದ್ದ ದಿ. ಪೆರ್ಡೂರು ರಾಮ ಮತ್ತು ಶಿರಿಯಾರ ಮಂಜು ನಾಯ್ಕರು ಇಬ್ಬರೂ ಅವರೊಡನೆ ಮಾತನಾಡಿ ವೇಷದ ಸಿದ್ಧತೆಗೆ ಚೌಕಿಯನ್ನು ಸೇರಿದರು. ಮೊದಲನೇ ಆಖ್ಯಾನ ಪ್ರಾರಂಭವಾಗಿ ಸುಧನ್ವನ ಪ್ರವೇಶ. ದುಂಡಗಿನ ಮುಖ, ಸುಂದರ ವೇಷ, ಮಾತನಾಡಲು ಪ್ರಾರಂಭಿಸಿದಾಗ ಕಿವಿಗೆ ಬಿದ್ದದ್ದು ಠಣ್ ಎಂಬಂತೆ ಕಂಚಿನ ಕಂಠದ ಸ್ವರ, ಮಾತು ಮಂಡಿಸಿದ ರೀತಿ ಅಪೂರ್ವ. ಪುಂಖಾನುಪುಂಖವಾಗಿ, ನಿರರ್ಗಳವಾಗಿ ಸುರಿದ ವಾಕ್‌ಪ್ರೌಢಿಮೆ. ಕಾಳಯ್ಯ ಆಚಾರ್ಯರು ಶಿರಿಯಾರ ಮಂಜು ಅರ್ಥ ಕಂಠಪಾಠ ಹೇಳುತ್ತಾರೆ ಎನ್ನುವುದು ಯಾಕೆ ಎಂಬುದು ಈಗ ಅರ್ಥವಾಯಿತು. ಪ್ರಭಾವತಿಯೊಡನೆ ಸಂಭಾಷಿಸಿ, ಸ್ವಗತವಾಗಿ ಹೇಳಿದ ಮಾತು ರಾಜಾಜ್ಞೆಯಂತೆ ಯುದ್ಧ ಭೂಮಿಗೆ ಕೂಡಲೇ ತೆರಳದಿದ್ದರೆ ಅದನ್ನು ಉಲ್ಲಂಘಿಸಿದ ಅಪವಾದ, ಜೊತೆಗೆ ಕಾದ ಎಣ್ಣೆಯ ಬಾಣಲೆಯಲ್ಲಿ ಸುಡುವ ಶಿಕ್ಷೆ; ಪತ್ನಿಯ ಅಪೇಕ್ಷೆಯಂತೆ ಶಯ್ಯಾಗಾರವನ್ನು ಸೇರದಿದ್ದರೆ ಭ್ರೂಣ ಹತ್ಯಾ ದೋಷ. ಭ್ರೂಣ ಹತ್ಯಾ ದೋಷದಿಂದ ನರಕವನ್ನು ಸೇರುವುದಕ್ಕಿಂತ ಕಾದ ಬಾಣಲೆಯಲ್ಲಿ ಸುಡುವುದೇ ಲೇಸು. ಏನೇ ಬರಲಿ, ಅನಂತಪದ್ಮನಾಭನ ದಯವೊಂದಿರಲಿ ಮಾತಿನ ವೈಖರಿ ಆದಾವ ಕನ್ನಡ ಪಂಡಿತರೂ ತಲೆದೂಗುವಂತಿತ್ತು. ಮುಂದೆ ಅರ್ಜುನನ ಪ್ರವೇಶ. ಕಥಾನಕಕ್ಕೊಂದು ತೀವ್ರವಾದ ತಿರುವು, ಎರಡನೇ ವೇಷಧಾರಿಗಳಲ್ಲಿ ಪ್ರಮುಖರಾದ ದಿ. ಪೆರ್ಡೂರು ರಾಮರವರು ಅರ್ಜುನನಾಗಿ ಪಾತ್ರ ವಹಿಸಿದ್ದರು. ಅಷ್ಟೇ ಬಿಂಕದ ಅರ್ಜುನನನ್ನು ಇನ್ನು ಕಾಣಬೇಕಷ್ಟೆ. ಅಂದು ಹಂಸ ಧ್ವಜನಾಗಿ ಸಿರಿಮಠ ಪಂಜು, ವೃಷಕೇತುವಾಗಿ ಸುರಗಿಕಟ್ಟೆ ಹಿರಿಯ ಇವರು ಸಹಕರಿಸಿದ್ದರು. ಮೂರೇ ಬಾಣಗಳಲ್ಲಿ ಸುಧನ್ವನ ಶಿರವನ್ನು ಕಡಿದುರುಳಿಸುತ್ತೇನೆ ಎಂದು ಅರ್ಜುನನು ಪ್ರತಿಜ್ಞೆಗೈದಾಗ ಪ್ರತಿಯೊಂದು ಬಾಣವನ್ನೂ ತುಂಡರಿಸುತ್ತೇನೆಂದ ಸುಧನ್ವನ ಮರು ಪ್ರತಿಜ್ಞೆ, ಮುಂದಿನ ದಿನಗಳಲ್ಲಿ ಸಾಲಿಗ್ರಾಮ ಮೇಳದ "ಭೀಷ್ಮ-ಭೀಷ್ಮ-ಭೀಷ್ಮ' ಪ್ರಸಂಗದಲ್ಲಿ ಮಂಜು ನಾಯ್ಕರು ದೇವವ್ರತನಾಗಿ ಗೈದ ಭೀಷಣ ಪ್ರತಿಜ್ಞೆಗೆ ನಾಂದಿಯಂತಿತ್ತು. ಕೆರೆಮನೆ ಬಂಧುಗಳ ಕಲಾ ಪ್ರೌಢಿಮೆಗೆ ಸರಿಮಿಗಿಲಾಗಿ ಮಂಜು ನಾಯ್ಕರು ದೇವವ್ರತನಾಗಿ ಆ ಪ್ರಸಂಗದಲ್ಲಿ ಮೆರೆದಿದ್ದರು.

ಶಿರಿಯಾರ ಮಂಜು ನಾಯ್ಕರು ತಮ್ಮ ಪ್ರತ್ಯುತ್ಪನ್ನಮತಿತ್ವಕ್ಕೂ ಹೆಸರುವಾಸಿಯಾಗಿದ್ದರು. ಸಾಲಿಗ್ರಾಮ ಮೇಳದಲ್ಲಿ ತೀರ್ಥಯಾತ್ರೆ ಪ್ರಸಂಗದಲ್ಲಿ ಅರ್ಜುನನಾಗಿ ಪಾತ್ರ ವಹಿಸುತ್ತಿದ್ದರು. ತೀರ್ಥಯಾತ್ರೆಗೆ ಹೊರಟ ಅರ್ಜುನನು ದಣಿವು ಆರಿಸಲು ಒಂದು ವನ ಪ್ರದೇಶದಲ್ಲಿ ನಿದ್ರಾವಶನಾದ ಸಂದರ್ಭ. ದಿ. ಕೆರೆಮನೆ ಗಜಾನನ ಹೆಗಡೆಯವರು ಉಲೂಪಿಯಾಗಿಯೋ ಅಥವಾ ಚಿತ್ರಾಂಗದೆಯಾಗಿಯೋ ಪಾತ್ರ ವಹಿಸಿದ್ದರು.

ನಿದ್ರಾಪರವಶನಾದ ಅರ್ಜುನನ ಸೌಂದರ್ಯವನ್ನು ವರ್ಣಿಸುತ್ತಾ "ಇವರ ಮೈಬಣ್ಣ ಮಂಜು, ಮಂಜು ಕವಿದಂತೆ ಇದೆಯಲ್ಲಾ" ಎಂದಾಗ ಸ್ವಲ್ಪ ಹೊತ್ತಿನಲ್ಲಿ ಎಚ್ಚೆತ್ತ ಅರ್ಜುನ ಆಚೀಚೆ ನೋಡುತ್ತಾ "ಇದು ವನಪ್ರದೇಶ, ಇಲ್ಲಿಯೇ ಇದೆ ಸುಂದರವಾದ ಕೆರೆ. ಅದರ ತಟದಲ್ಲಿದ್ದಾಳೆ ಒಬ್ಬ ಸ್ಫುರದ್ರೂಪಿ ತರುಣಿ. ಕೆರೆಯೇ ಇವಳ ಮನೆಯೋ" ಎಂದಾಗ ನೆರೆದ ಜನ ಸಮೂಹದಿಂದ ಚಪ್ಪಾಳೆಯ ಸುರಿಮಳೆ. ಕೆರೆಮನೆಯ ಬಗೆಗೆ ಇವರ ವಿವರಣೆಗೆ.

1979-80ನೇ ಇಸವಿ ಇರಬಹುದು. ಉಡುಪಿಯ ವರದೇಂದ್ರ ಕಲಾಮಂದಿರದಲ್ಲಿ ಸಹಾಯಾರ್ಥ ಆಟ. ಕೃಷ್ಣಾರ್ಜುನರಾಗಿ ದಿ. ಶಿರಿಯಾರ ಮಂಜು ನಾಯ್ಕರು ಮತ್ತು ಶ್ರೀ ಕೆರೆಮನೆ ಮಹಾಬಲ ಹೆಗಡೆಯವರು ಎದುರಾಗಿದ್ದರು. ಕೃಷ್ಣನ ಪ್ರವೇಶವಾದಾಗ ಜನರಲ್ಲಿ ಗುಸು ಗುಸು ಸದ್ದು ಪ್ರಾರಂಭವಾಯಿತು. ನಾರದನಾಗಿ ಪಾತ್ರ ವಹಿಸಿದ್ದ ಶ್ರೀ ಕುಂಜಾಲು ರಾಮಕೃಷ್ಣರವರು "ಕೃಷ್ಣಾ! ನೆರೆದ ಸಭಿಕರು ತಮ್ಮೊಳಗೆ ಗುಸು ಗುಸು ಮಾತನಾಡುವ ಮರ್ಮವನ್ನು ಅರಿತಿರುವೆಯಾ ? ಎಂದೂ ಸಿರಿ ಆರದ ಮುಖ ಇಂದು ಸಿರಿ ಆರಿದ ಮುಖವಾಗಿ ಪರಿವರ್ತಿತವಾಗಿದೆಯಲ್ಲಾ ? ಎಂದು ಜನರು ತಪತಪಿಸುತ್ತಾ ಇದ್ದಾರೆ." ಎಂದಾಗ ಕೃಷ್ಣನಾಗಿ ಶಿರಿಯಾರ ಮಂಜು ನಾಯ್ಕರು "ಏನು ಮಾಡುವುದೂ ಸ್ವಾಮಿ! ಎಲ್ಲಾ ಕಾಲದಲ್ಲಿಯೂ ಒಂದೇ ರೀತಿಯಾಗಿರಲು ಸಾಧ್ಯವೇ ? ಕೆಲವು ಸಲ ಮುಪ್ಪಿನಿಂದ ಅಥವಾ ಚಿಂತೆಯಿಂದ ಮುಖ ಬಾಡುತ್ತದೆ." ಎಂದರು. ಕೃಷ್ಣ ವೇಷದಲ್ಲಿ ಸುಂದರಾಂಗನಾಗಿ ಅದೆಷ್ಟೋ ವರ್ಷಗಳ ಕಾಲ ರಂಗದಲ್ಲಿ ಮೆರೆದ ಮಂಜು ನಾಯ್ಕರು ತಾನೂ ವೃದ್ಧಾಪ್ಯದಿಂದ ಹೊರತಾಗಿಲ್ಲವೆಂದು ಸೂಚ್ಯವಾಗಿ ಅಂದು ನುಡಿದಿದ್ದರು. ಪ್ರಸಂಗದ ಕೊನೆಗೆ ಅರ್ಜುನ ವೇಷಧಾರಿಯಾದ ಶ್ರೀ ಕೆರೆಮನೆ ಮಹಾಬಲ ಹೆಗಡೆಯವರು ಕೃಷ್ಣನ ಬಳಿ ಬಂದು. ಮಂಡಿಯೂರಿ "ಪಾಂಡುಸುತರನ್ನು ಇನ್ನು ಮುಂದೆಯೂ ಕರುಣೆಯಿಂದ ಪಾಲಿಸಬೇಕು." ಎಂದು ಬೇಡಿಕೊಂಡುದು ಒಂದು ದಿಕ್ಕಿನಲ್ಲಿ ಕಥಾನಕಕ್ಕೂ ಅನ್ವಯವಾಗುವುದಾದರೆ ಇನ್ನೊಂದೆಡೆ ರಂಗಸ್ಥಳದ ಹಿರಿಯ ವ್ಯಕ್ತಿತ್ವವಾದ ದಿ. ಶಿರಿಯಾರ ಮಂಜು ನಾಯ್ಕರ ಕಲಾ ಪ್ರೌಢಿಮೆಗೆ ನಮಿಸಿದಂತಿತ್ತು.

ಬಡಗುತಿಟ್ಟಿನ ಹೆಚ್ಚಿನ ಎಲ್ಲಾ ಎರಡನೇ ವೇಷಧಾರಿಗಳ ಜತೆಗೂಡಿ ತಾರುಣ್ಯದಲ್ಲಿ ಪ್ರಸಿದ್ಧ ಪುರುಷ ವೇಷಧಾರಿಯಾಗಿ ಮೆರೆದ ಶ್ರೀ ಶಿರಿಯಾರ ಮಂಜು ನಾಯ್ಕರು ಮಣಿಪಾಲದ ಗೋಲ್ಡನ್ ಜ್ಯೂಬಿಲಿ ಸಭಾಂಗಣದಲ್ಲಿ 1982ನೇ ಇಸವಿಯಲ್ಲಿ ಭೀಷ್ಮ ವಿಜಯದ ಪರಶುರಾಮನಾಗಿ ಕಲಾಸೇವೆ ಮಾಡುತ್ತಿರುವಾಗಲೇ ಇಹಲೋಕ ತ್ಯಜಿಸಿದುದು ಒಂದು ಆಕಸ್ಮಿಕ ಘಟನೆ. ಇಷ್ಟು ವರ್ಷಗಳ ಕಾಲ ಅನೇಕ ಕಷ್ಟನಷ್ಟಗಳನ್ನುಂಡು ಕಲಾಸೇವೆ ಮಾಡಿದುದು ಸಾಕು, ಇಗೋ ನಿನಗೆ ವಿಶ್ರಾಂತಿ ಎಂಬಂತೆ ದೈವೇಚ್ಛೆ ಇತ್ತೋ ಏನೋ. ಒಂದು ಮಾತಂತೂ ಸತ್ಯ. ರಂಗದಲ್ಲಿ ವೇಷಧಾರಿಯಾಗಿ ಅಳಿವುದೇ ಕಾಯ, ಉಳಿವುದೇ ಕೀರ್ತಿ ಎಂದು ಅವರು ಪದೇ ಪದೇ ಅಂದಂತೆ ಯಕ್ಷಗಾನ ಇರುವವರೆಗೆ ಅವರ ಹೆಸರು ಉಳಿಯುವುದಂತೂ ನಿಸ್ಸಂಶಯ.

*****

# ಸಾಲಿಗ್ರಾಮ ಮೇಳದಲ್ಲಿ ಮಿಂಚಿದ "ಶಿರಿಯಾರರ ಪಾತ್ರಗಳು"

**ಬಿ. ಉಮೇಶ ರಾವ್**

ಶಿರಿಯಾರ ಮಂಜು ನಾಯ್ಕರು ಗತಿಸಿ ಇಂದಿಗೆ 20 ವರ್ಷಗಳಾಗಿವೆ. ಆದರೂ ಕಲಾಭಿಮಾನಿಗಳ ಮನಸ್ಸಿನಲ್ಲಿ ಅವರು ಹಸಿರಾಗಿದ್ದಾರೆ. ಆಕರ್ಷಕವಾದ ಪದ್ಯದ ಎತ್ತುವಿಕೆ, ಚುರುಕಿನ ಕುಣಿತ, ಹಿತಮಿತವಾದ ಮಾತುಗಾರಿಕೆಗಳಿಂದ ಪ್ರಸಿದ್ಧರಾದ ದಿ. ಶಿರಿಯಾರ ರವರು ಸಾಲಿಗ್ರಾಮ ಮೇಳದಲ್ಲಿ ನಿರ್ವಹಿಸಿದ ಪಾತ್ರಗಳ ಕುರಿತು ಈ ಕಿರು ಬರಹ. ಜೊತೆಗೆ ಅವರ ಪಾತ್ರಕ್ಕೆ ಪೂರಕವಾಗಿ ನಟಿಸಿದ ಇತರ ಕಲಾವಿದರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಪಿ. ಶ್ರೀಧರ ಹಂದೆಯವರು ಸಾಲಿಗ್ರಾಮ ಡೇರೆ ಮೇಳವನ್ನು 1968ರಲ್ಲಿ ಆರಂಭ ಮಾಡಿದರು. ಮರು ವರ್ಷದಿಂದಲೇ ಶಿರಿಯಾರರು ಸಾಲಿಗ್ರಾಮ ಮೇಳದಲ್ಲಿದ್ದರು. ಅವರು ಮೊದಲಿಗೆ ಯಾವ ಪಾತ್ರವನ್ನು ಮಾಡುತ್ತಿದ್ದರೆಂದು ನನಗೆ ನೆನಪಿಲ್ಲ. 1972-73ರಲ್ಲಿ ಕುಬೆವೂರು ಪುಟ್ಟಣ್ಣ ಶೆಟ್ಟರ ಸತಿ ಸುಶೀಲೆ ಪ್ರಸಂಗವನ್ನು ಸಾಲಿಗ್ರಾಮ ಮೇಳದವರು ಆಡುತ್ತಿದ್ದರು. ಅದರಲ್ಲಿ ಕೆರೆಮನೆ ಶಂಭು ಹೆಗಡೆಯವರ ದುರ್ಜಯ, ಕೆರೆಮನೆ ಮಹಾಬಲ ಹೆಗಡೆಯವರ ಉದಯಸೇನ, ಶಿರಿಯಾರರ ಅನಂತಸೇನ, ಕೆರೆಮನೆ ಗಜಾನನ ಹೆಗಡೆಯವರ ಸುಶೀಲೆ ಹಾಗೂ ಅರಾಟೆಯವರ ಸಂಧ್ಯಾವಳಿ ಪಾತ್ರಗಳು ರಂಜಿಸಿದವು. 73-74ರಲ್ಲಿ ಸಾಲಿಗ್ರಾಮ ಮೇಳವು ದಿ. ಬೆಳಸಲಿಗೆ ಗಣಪತಿ ಹೆಗಡೆಯವರ "ವಸಂತ ಸೇನೆ" ಪ್ರಸಂಗವನ್ನು ರಂಗಕ್ಕೆ ತಂದಿತು. ಅದರಲ್ಲಿ ಶಿರಿಯಾರ ಮಂಜು ನಾಯ್ಕರದ್ದು "ಚಾರುದತ್ತ"ನ ಪಾತ್ರ ಶಿರಿಯಾರ ಹಾಗೂ ಅರಾಟೆಯವರ ಚಾರುದತ್ತ - ವಸಂತಸೇನೆ ಜೋಡಿ, ಕುಮಟಾ ಗೋವಿಂದ ನಾಯ್ಕರ ಶಕಾರ, ದಿ. ಮೂರೂರು ದೇವರು ಹೆಗಡೆಯವರ ಮೈತ್ರೇಯ ಈ ಪ್ರಸಂಗದ ಮುಖ್ಯ ಪಾತ್ರಗಳು. ಅದೇ ವರ್ಷ "ಮಾಯಾ ಬಜಾರ್" ಪ್ರಸಂಗವನ್ನು ಮೇಳ

ಆಡುತ್ತಿತ್ತು. ಈ ಪ್ರಸಂಗದಲ್ಲಿ ಕುಮಟಾ ಗೋವಿಂದ ನಾಯ್ಕರ "ಘಟೋತ್ಕಚ' ಜೊತೆಗೆ ಶಿರಿಯಾರರು "ಕೃಷ್ಣ"ನ ಪಾತ್ರ ನಿರ್ವಹಿಸಿದರು.

74-75ನೇ ಸಾಲಿನಲ್ಲಿ ಸೀತಾನದಿ ಗಣಪಯ್ಯ ಶೆಟ್ಟರ "ವೀರ ವಜ್ರಾಂಗ" ಪ್ರಸಂಗವನ್ನು ಸಾಲಿಗ್ರಾಮ ಮೇಳದವರು ಆಡಿದರು. ಅದರಲ್ಲಿ ಮಂಜು ನಾಯ್ಕರದ್ದು ಕಥಾನಾಯಕ "ವಜ್ರಾಂಗ"ನ ಪಾತ್ರ. ಜೊತೆಗೆ ಕುಮಟಾ ಗೋವಿಂದ ನಾಯ್ಕರ "ದುರ್ಮುಖ", ಅರಾಟೆಯವರ "ಪದ್ಮಾಕ್ಷಿ", ಕಿನ್ನಿಗೋಳಿಯವರ "ವಕ್ರಾಂಗ" ಮುಖ್ಯಪಾತ್ರಗಳು. 75-76ರಲ್ಲಿ ಮೇಳವು ಡಾ. ವೈ. ಚಂದ್ರಶೇಖರ ಶೆಟ್ಟರ ಪ್ರಥಮ ಪ್ರಸಂಗ "ಮಹಾಸತಿ ಮಂಗಳಾ"ವನ್ನು ಆಡುತ್ತಿತ್ತು. ಅದರಲ್ಲಿ ಶಿರಿಯಾರರು "ವಿಜಯ ವರ್ಮ"ನಾಗಿ ರಂಗಕ್ಕೆ ಬಂದರು. ಶಿರಿಯಾರ ಅರಾಟೆಯವರ ವಿಜಯವರ್ಮ-ಮಂಗಳೆಯ ಜೋಡಿ ಹಾಗೂ ಶಿರಿಯಾರ ರಾಮ ನಾರಿಯವರ ವಿಜಯ ವರ್ಮ-ಮಾಧುರಿ ಇನ್ನೊಂದು ಜೋಡಿ ಪ್ರೇಕ್ಷಕರ ಮನಸ್ಸಿನಲ್ಲಿ ಇನ್ನೂ ಇದೆ.

76-77ರಲ್ಲಿ "ಲೀಲಾಮೂರ್ತಿ ಶ್ರೀ ಕೃಷ್ಣ", "ಅಮೃತ ನಂದಿನಿ" ಪ್ರಸಂಗಗಳು ಬಂದವು. ಲೀಲಾಮೂರ್ತಿ ಶ್ರೀ ಕೃಷ್ಣದಲ್ಲಿ ಶಿರಿಯಾರರದ್ದು "ಕೊನೆಯ ಕೃಷ್ಣ", ರುಕ್ಮಿಣಿ ಸ್ವಯಂವರ ಸನ್ನಿವೇಶದಲ್ಲಿ ಐರೋಡಿ ಗೋವಿಂದಪ್ಪ ಶಿರಿಯಾರರ ರುಕ್ಮ ಕೃಷ್ಣನ ಜೋಡಿ, ಭಾಗವತ ನರಸಿಂಹದಾಸರ ಭಾಗವತಿಕೆ. ಕೃಷ್ಣಾವತಾರದ ಕೊನೆಯ ಗಳಿಗೆಗಳನ್ನು ದಿ. ಶಿರಿಯಾರರು ಅವರದ್ದೇ ಆದ ಶೈಲಿಯಲ್ಲಿ ಚಿತ್ರಿಸುತ್ತಿದ್ದರು. ಅಮೃತ ನಂದಿನಿ ಪ್ರಸಂಗದಲ್ಲಿ "ಅಮರ" ಪಾತ್ರವನ್ನು ಮಾಡುತ್ತಿದ್ದರು.

77-78ರಲ್ಲಿ "ಜ್ವಾಲಾ" ಮತ್ತು "ರಾಜನರ್ತಕಿ" ಮೇಳದ ಹೊಸ ಪ್ರಸಂಗಗಳಾದವು. ಜ್ವಾಲಾದಲ್ಲಿ ದಿ. ಶಿರಿಯಾರರು ಕೃಷ್ಣನ ಪಾತ್ರ ನಿರ್ವಹಿಸುತ್ತಿದ್ದರೆಂದು ಕಾಣುತ್ತದೆ. ರಾಜನರ್ತಕಿಯಲ್ಲಿ ದಿ. ಶಿರಿಯಾರರವರು "ಚಂದ್ರಸೇನ"ನ ಪಾತ್ರವನ್ನು ಮಾಡುತ್ತಿದ್ದರು. ಇದೇ ವರ್ಷ "ಶನೀಶ್ವರ ಮಹಾತ್ಮೆ" ಪ್ರಸಂಗವನ್ನು ಬಡಗುತಿಟ್ಟಿನಲ್ಲಿ ಸಾಲಿಗ್ರಾಮ ಮೇಳದವರು ಆಡಲು ಪ್ರಾರಂಭಿಸಿದರು. ಜಲವಳ್ಳಿಯವರ "ಶನಿ", ದಿ. ಶಿರಿಯಾರರವರ "ವಿಕ್ರಮಾದಿತ್ಯ", ರಾಮ ನ್ಯಾರಿಯವರ "ಆಲೋಲಿಕೆ", ಕಿನ್ನಿಗೋಳಿಯವರ "ನಂದಿ ಶೆಟ್ಟಿ" ಪಾತ್ರಗಳು ರಂಜಿಸಿದರೆ ಶ್ರೀಧರ ಹೆಬ್ಬಾರ್ ಮತ್ತು ಮರಿಯಪ್ಪ ಆಚಾರ್ ಭಾಗವತಿಕೆಯೂ ರಂಜಿಸಿತು.

78-79ರಲ್ಲಿ "ಸತಿ ಸೀಮಂತಿನಿ", "ನಾಗಶ್ರೀ" ಪ್ರಸಂಗಗಳನ್ನು ಮೇಳ ತಂದಿತು. ಸತಿ ಸೀಮಂತಿನಿಯಲ್ಲಿ ಶಿರಿಯಾರ ಅರಾಟೆಯವರ ಚಂದ್ರಾಂಗದ - ಸೀಮಂತಿನಿ ಜೋಡಿ ಪಾತ್ರಗಳು ರಂಜಿಸಿದರೆ ನಾಗಶ್ರೀ ಪ್ರಸಂಗದಲ್ಲಿ ದಿ. ಶಿರಿಯಾರರರವರು ''ಶುಭ್ರಾಂಗ" ಮಾಡುತ್ತಿದ್ದರು. 79-80ರಲ್ಲಿ "ಕಾಂಚನಶ್ರೀ" ಪ್ರಸಂಗದಲ್ಲಿ "ಸುತ್ರೋಹಮುನಿ"ಯಾಗಿ

ಶಿರಿಯಾರರು ರಂಗಕ್ಕೆ ಬಂದರು. "ರತಿ ಕಲ್ಯಾಣ"ದಲ್ಲಿ ಶಿರಿಯಾರರ "ಕಮಲ ಭೂಪ", ಅರಾಟೆಯವರ ದ್ರೌಪದಿ, ಪೇತ್ರಿ ಮಾಧು ನಾಯ್ಕರ ಕೌಂಡ್ಲಿಕ ಭೂಪ ರಂಜಿಸಿದವು.

80-81ರಲ್ಲಿ ಬಬ್ರುವಾಹನ ಕಾಳಗದಲ್ಲಿ ಶಿರಿಯಾರರ ಅರ್ಜುನ, ಅರಾಟೆಯವರ ಚಿತ್ರಾಂಗದೆ, ಗೋಪಾಲಾಚಾರಿಯವರ ಬಭ್ರುವಾಹನ ರಂಜಿಸಿತು.

1981-82 ಶಿರಿಯಾರರದ್ದು ಸಾಲಿಗ್ರಾಮ ಮೇಳದಲ್ಲಿ ಕೊನೆಯ ತಿರುಗಾಟ. ದಿ. ಗುಂಡು ಸೀತಾರಾಮ ರಾಯರ "ರಾಜಾ ಪ್ರದೀಪ" ಪ್ರಸಂಗದಲ್ಲಿ ಮುನಿ, "ಲಂಕಾದಹನ"ದಲ್ಲಿ ತೃಣಬಿಂದು ಮುನಿ ಮುಂತಾದ ಪಾತ್ರಗಳನ್ನು ಮಾಡುತ್ತಿದ್ದರು. 82-83ರಲ್ಲಿಯೂ ಮೇಳದಲ್ಲಿ ತಿರುಗಾಟ ನಡೆಸುವವರಿದ್ದರು. ಆದರೆ ಅಕ್ಟೋಬರ್ 31, 1982ರಂದು ಮಣಿಪಾಲ ಗೋಲ್ಡನ್ ಜ್ಯೂಬಿಲಿ ಹಾಲ್‌ನಲ್ಲಿ ನಡೆದ "ಭೀಷ್ಮ ವಿಜಯ "ಪ್ರಸಂಗದಲ್ಲಿ ಕೆರೆಮನೆ ಮಹಾಬಲ ಹೆಗಡೆಯವರ "ಭೀಷ್ಮ"ನ ಎದುರಿಗೆ "ಪರಶುರಾಮ"ನಾಗಿ ಅಭಿನಯಿಸುತ್ತಿರುವಾಗ ಕಲೆಯ ಸೇವೆಯಲ್ಲೇ ಇಹಲೋಕ ತ್ಯಜಿಸಿದರು. ಕಲಾಭಿಮಾನಿಗಳ ಮನಸ್ಸಿನಲ್ಲಿ ಹಸಿರಾಗಿ ಉಳಿದರು.

*****

# ಸಿರಿ ಆರದ ಮಂಜು

**ಎಚ್. ಜನಾರ್ದನ ಹಂದೆ**

ಹಿಂದೆ ಶ್ರೀ ಮಂದಾರ್ತಿ ಮೇಳವು ಕೋಟ ಹದಿನಾಲ್ಕು ಗ್ರಾಮಗಳಲ್ಲಿ ಆಟವಾಡುವ ಸಮಯ. ಮೇಳದಲ್ಲಿ ಹಾರಾಡಿ ರಾಮ, ಹಾರಾಡಿ ನಾರಾಯಣ, ಶಿರಿಯಾರ ಮಂಜು ಮುಂತಾದ ದಶಾವತಾರಿಗಳಿದ್ದ ಕಾಲ. ಆಟ ಆಡಿಸುವ ಮನೆಯವರು ವಾರದ ಹಿಂದಿನಿಂದಲೇ ಏನು ಪ್ರಸಂಗವಾಗಬಹುದೆಂದು ಅನುಭವಿಗಳನ್ನು ಸಂಧಿಸಿ ನಿಶ್ಚಯ ಮಾಡುತ್ತಿದ್ದರು. ಶಿರಿಯಾರ ಮಂಜು ಇದ್ದಾ ಎಂತಾದರೆ ಕೃಷ್ಣ ಪಾತ್ರ ಬರುವ ಪ್ರಸಂಗವೇ ಆಗಬೇಕು ಎಂಬಲ್ಲಿವರೆಗೆ ಆ ಪಾತ್ರದ ಮಹತ್ವವನ್ನು ಅಚ್ಚು ಮೂಡಿಸಿದ ಕಲಾವಿದ ಶಿರಿಯಾರದ ಮಂಜು ನಾಯಕ !

ಕೃಷ್ಣ ಪಾತ್ರವೂ ನಾಯಕ ಪಾತ್ರಕ್ಕೆ ಸಮನಾದ ಕೃಷ್ಣಾರ್ಜುನ ಕಾಳಗ, ರತಿ ಕಲ್ಯಾಣಗಳಿಗೆ ತುಂಬಾ ಬೇಡಿಕೆ. ಮೊದಲ ಪ್ರಸಂಗವು ಸುಧನ್ವ ಕಾಳಗವಿದ್ದು, ಸುಧನ್ವನ ಪಾತ್ರವು ಶಿರಿಯಾರದ ಮಂಜು ನಟಿಸಿದ್ದನಾದರೆ ಅದೇ ಬೆಳಗಿನಲ್ಲಿ ರತಿ ಕಲ್ಯಾಣ (ಕೃಷ್ಣ) ತುರಾತುರಿಯಲ್ಲಿಯಾದರೂ ಅಭಿನಯಿಸಲ್ಪಡಲೇಬೇಕು. ಆಗಲೇ ಆಡಿಸಿದವರ ಸೇವೆ ಸಂದಾಯವಾಗಿ ಶ್ರೀದೇವಿಯ ಸಿರಿಮುಡಿ ಗಂಧ ಪ್ರಸಾದ ದಕ್ಕುತ್ತದೆಂಬ ಬಲವಾದ ಭಾವನೆ.

ಸಂಪ್ರದಾಯದ, ಸೇವೆ ಆಟವಾಡುತ್ತಾ ತಿರುಗಾಟದಲ್ಲಿರುವ ಮೇಳಗಳಿಗೂ ಹೊಸ ಪ್ರಸಂಗಗಳ ದಾಳಿ ಪ್ರಾರಂಭದ ಹಂತದಲ್ಲಿರುವ ವೇಳೆ. ಅಂತಹ ಪ್ರಸಂಗಗಳಲ್ಲಿ ಶ್ವೇತಕುಮಾರ ಚರಿತ್ರೆ, ಪುಷ್ಪ ವೇಣಿ ಸ್ವಯಂವರ, ಶ್ರೀ ಕೃಷ್ಣ ಗಾರುಡಿ, ಬೇಡರ ಕಣ್ಣಪ್ಪ ಪ್ರಾಮುಖ್ಯವಾದವು. ಶ್ರೀ ಮಂಜು ನಾಯ್ಕರು ಶ್ವೇತ ಕುಮಾರನಾಗಿ, ಪುಷ್ಪ ವೇಣಿಯಲ್ಲಿ ರಾಜ ಕುಮಾರನಾಗಿ, ಸಾತ್ವಿಕ, ದೈವಾಂಶ ಸಂಭೂತರಾದ ಆ ಪುರುಷ ಪಾತ್ರಗಳಿಗೆ ಜೀವ ತುಂಬಿದ್ದರು. ಅವರ ಪಾತ್ರಗಳಿಗೆ ಶ್ರೀ ಅರಾಟೆ ಮಂಜುನಾಥರು ಸರಿ ಸರಿಯಾಗಿ ಸ್ತ್ರೀಭೂಮಿಕೆಯನ್ನು

ನಿಭಾಯಿಸಿದರು. ಜೋಡಾಟ ನಿಶ್ಚಯವಾದಾಗ ಶಿರಿಯಾರ ಮಂಜುವಿಗೆ ಕೃಷ್ಣ ಇದ್ದ ಪ್ರಸಂಗಗಳೇ ತಗಲಿ ಹಾಕಿದ್ದೂ ಇದೆ.

**ಇಂತೀ ಪರಿಯಲಿ ಯಕ್ಷ ಮನುಜರಿರುವಾಗ -**

ತೆಂಕಿನ ಮೇಳಗಳು ಕೋಟ ಹದಿನಾಲ್ಕು ಗ್ರಾಮಗಳ ಜಗತ್ತು ಎಂದು ಕರೆಯಲ್ಪಡುವ ಕ್ಷೇತ್ರದಲ್ಲಿ ಟಿಕೇಟು ಮಾರಾಟ ಮಾಡಿ, ಡೇರೆ ಆಟ ಪ್ರದರ್ಶಿಸಲಾರಂಭಿಸಿದವು. ಅಪರೂಪದ ಆಟ, ಝುಗ ಝುಗ ಎಂಬ ವೇಷಭೂಷಣಗಳಿಗೆ ಆಕರ್ಷಿತರಾಗದವರಾರು? ಬಡಗುತಿಟ್ಟು ತೆಂಕುತಿಟ್ಟು ಒಂದೇ ರಾತ್ರಿ ಒಂದೇ ಡೇರೆಯೊಳಗೆ ಎರಡು ಆಖ್ಯಾನಗಳನ್ನು ಪ್ರದರ್ಶಿಸುವ ವೇಳೆ ಈ "ಮಂಜು"ಗಳು ಆ ರಂಗಸ್ಥಳದಲ್ಲಿ ರಾರಾಜಿಸಿದ್ದರು. ಇದು ಕೂಡ ಒಂದು ಪ್ರಗತಿಯೇ. ಆದರೆ ಹೆಚ್ಚು ಕಾಲ ಸಂಚರಿಸದೇ ಯಥಾಸ್ಥಾನವನ್ನೇ ಆಟದ ಮಂಡಳಿ ಪಡೆಯಿತು.

ಆ ನಂತರದ ದಿನಗಳಲ್ಲಿ ಕೆರೆಮನೆ ಹೆಗಡೆಯವರು ಡೇರೆ ಮೇಳವನ್ನು ದಕ್ಷಿಣ ಕನ್ನಡಕ್ಕೆ ತಂದರು. ನಮ್ಮ ಊರ ಜನರಿಗೆ ನಮ್ಮ ತರಹದ ತಿಟ್ಟಿನ ಆಟವನ್ನು ಹಣ ಕೊಟ್ಟು ನೋಡುವುದೇ ಎಂಬ ಭಾವನೆ. ತೆಂಕಿನದ್ದಾದರೆ ಪರವಾಗಿಲ್ಲ, ಇದನ್ಯಾಕೆ ನೋಡಬೇಕೆಂಬ ಮುಜುಗರ. ಹಾಗಾಗಿ ಪ್ರಥಮ ಚುಂಬನ ದಂತಭಗ್ನವಾಗಿ ನಿರ್ಗಮಿಸಿತು ಮೇಳ.

ಶ್ರೀ ಪಿ. ಶ್ರೀಧರ ಹಂದೆ "ಯಜಮಾನ"ರಂತ ಇಂದು ಖ್ಯಾತಿ ಪಡೆದವರು. ಅಂದು ಸಾಲಿಗ್ರಾಮ ಮೇಳವನ್ನು ಪುನರುಜ್ಜೀವನಗೊಳಿಸಿ ಡೇರೆ ಮೇಳವಾಗಿ ಸಂಘಟಿಸಿದರು. ಅದರಲ್ಲಿ ಶಿರಿಯಾರದ ಮಂಜು, ಆರಾಟೆ ಮಂಜು, ಗುರು ವೀರಭದ್ರ ನಾಯಕರು, ಭಾಗವತ ನಾರಣಪ್ಪ ಉಪ್ಪೂರರು - ಗಜಮೇಳ. ಸಾಲದಕ್ಕೆ ಕೆರೆಮನೆ ಮಹಾಬಲ, ಶಂಭು, ಗಜಾನನ ಹೆಗಡೆತ್ರಯರು ಮೇಳವಿಸಿದ್ದರು.

ಸ್ವಾರಸ್ಯವೆಂದರೆ - ಪತಿವ್ರತಾ ಮಹಾತ್ಮೆ, ಸತಿ ಸುಶೀಲೆ ಪ್ರಸಂಗ. ಮುನ್ನಿರುಳು ಹೆಗಡೆ ಬಂಧುಗಳು, ಕುಂಜಾಲು ಹಾಸ್ಯಗಾರ ಸೇರಿ ಹೊಸ ಲೋಕಕ್ಕೆ ಕೊಂಡೊಯ್ಯುತ್ತಿದ್ದರು. ಬೆಳಗಿನ ಜಾವ ನಮ್ಮ ಮಂಜು ದ್ವಯರ ಪುರುಷ - ಸ್ತ್ರೀಪಾತ್ರಗಳು ಎತ್ತರದ ರಂಗದಲ್ಲಿ ವಿಜೃಂಭಿಸುವಾಗ ಆದ ಆನಂದವೇ ಬೇರೆ. ಉತ್ತರ ಕನ್ನಡ ಹಾಗು ಉಡುಪಿ ಬಡಗು ತಿಟ್ಟುಗಳಲ್ಲಿ ವ್ಯತ್ಯಾಸ, ವೈವಿಧ್ಯ ಇರುವುದು ಇದರಿಂದ ಸಾಬೀತಾಗುತಿತ್ತು.

*****

# ಶಿರಿಯಾರ ಮಂಜು

ಎನ್. ಯಜ್ಞನಾರಾಯಣ ಉಳ್ಳೂರ್

ಯಕ್ಷಗಾನವು ದಿವಂಗತ ಶಿರಿಯಾರ ಮಂಜು ಅವರಂಥ ಪ್ರಬುದ್ಧ ಕಲಾವಿದರಿಂದ ಶ್ರೀಮಂತವಾಗಿದೆ. ನಾಯಕ ಪಾತ್ರಕ್ಕೆ ತಕ್ಕುದಾದ ಉತ್ತಮ ಮಾತುಗಾರಿಕೆ, ರಂಗಸ್ಥಳದಲ್ಲಿನ ನಡೆ, ಕುಣಿತ ಹಾಗೂ ವೇಷಗಾರಿಕೆಯಿಂದ ಶಿರಿಯಾರ ಮಂಜು ಅವರು ಓರ್ವ ಅನುಕರಣೀಯ ಕಲಾವಿದರೆನಿಸಿದ್ದಾರೆ.

ಸುಮಾರು ಮೂವತ್ತು ವರ್ಷಗಳ ಹಿಂದೆ ಶ್ರೀ ಸಾಲಿಗ್ರಾಮ ಮೇಳದವರು "ವಸಂತ ಸೇನೆ" ಎಂಬ ಪ್ರಸಂಗವನ್ನು ಆಡುತ್ತಿದ್ದರು. ಈ ಪ್ರಸಂಗದಲ್ಲಿ ಕುಮಟಾ ಗೋವಿಂದ ನಾಯ್ಕರ "ಶಕಾರ", ಶ್ರೀ ಆರಾಟೆ ಮಂಜುನಾಥರ "ವಸಂತ ಸೇನೆ" ಹಾಗೂ ದಿ. ಶಿರಿಯಾರ ಮಂಜು ಅವರ "ಚಾರುದತ್ತ" ಪಾತ್ರಗಳು ಪ್ರಸಿದ್ಧಿ ಪಡೆದಿವೆ. ಶಿರಿಯಾರ ಮಂಜು ಅವರ ಚಾರುದತ್ತ ಪಾತ್ರವನ್ನು ನೋಡಲೆಂದೇ ಆಟಕ್ಕೆ ಬರುವವರಿದ್ದರು. ಆ ಕಾಲದಲ್ಲಿ ಆ ವರ್ಷ ಶ್ರೀ ಸಾಲಿಗ್ರಾಮ ಮೇಳದವರ ಯಶಸ್ಸಿಗೆ ವಸಂತ ಸೇನೆ ಪ್ರಸಂಗವೇ ಕಾರಣವಾಯಿತೆನ್ನಬಹುದು. ಆಕರ್ಷಕ ಕಥೆ ಮತ್ತು ಮೇಲೆ ತಿಳಿಸಿದ ಮೂರು ಪಾತ್ರಗಳು ಈ ಪ್ರಸಂಗದ ಯಶಸ್ಸಿಗೆ ಮೂಲ ಕಾರಣ. "ಚಾರುದತ್ತ"ನ ಪಾತ್ರವು ಶಿರಿಯಾರ ಮಂಜು ಅವರಿಗೆ "ಸ್ಟಾರ್ ವ್ಯಾಲ್ಯೂ" ತಂದುಕೊಟ್ಟಿತು. ಹಿತವಾದ, ಮಿತವಾದ, ಅರ್ಥಗರ್ಭಿತ ಮಾತುಗಳಿಂದ ಚಾರುದತ್ತನಾಗಿ ಜನಮನ ಸೆಳೆದ ಶಿರಿಯಾರ ಮಂಜು ಅವರೊಬ್ಬ ಅಭಿಜಾತ ಕಲಾವಿದರಾಗಿದ್ದಾರೆ.

ಇಂದಿನ ಯಕ್ಷಗಾನದ ಸ್ಥಿತಿಯನ್ನು ಗಮನಿಸಿದರೆ, ಶಿರಿಯಾರ ಮಂಜು ಅವರಂಥ ಕಲಾವಿದರು ಯಕ್ಷಗಾನವನ್ನು ಉಳಿಸಲು, ಬೆಳೆಸಲು ಬದುಕಿದ್ದರೆ ಒಳ್ಳೆಯದಿತ್ತೇನೋ ಎನಿಸುತ್ತದೆ.

ಜನರಲ್ಲಿನ ಮೂಢನಂಬಿಕೆಯನ್ನು ಪ್ರಚೋದಿಸುವಂತಹ ಕಥೆಯುಳ್ಳ ಹೊಸ ಹೊಸ ಪ್ರಸಂಗಗಳು, ಉತ್ತಮ ಕಲಾವಿದರ ಕೊರತೆ, ಪ್ರೇಕ್ಷಕರ ಕೊರತೆ, ಬದಲಿ ಮನೋರಂಜನಾ ಮಾಧ್ಯಮಗಳ ಲಭ್ಯತೆ ಇವೆಲ್ಲದರಿಂದ ಯಕ್ಷಗಾನ ತತ್ತರಿಸುತ್ತಿದೆ. ಯಕ್ಷಗಾನವನ್ನೇ ನಂಬಿ ಜೀವನ ನಡೆಸುತ್ತಿರುವ ಕಲಾವಿದರಿಗೂ ಕಷ್ಟ, ಮೇಳ ನಡೆಸುವವರಿಗೂ ನಷ್ಟ. ರಾತ್ರಿಯಿಡೀ ಸುಮಾರು ಎಂಟು ಘಂಟೆಗಳಷ್ಟು ದೀರ್ಘಕಾಲ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವುದು ಸುಲಭವಲ್ಲ. ಸುಮಾರು ಇಪ್ಪತ್ತೈದಕ್ಕಿಂತ ಹೆಚ್ಚು ಮೇಳಗಳು ಈ ವರ್ಷ ತಿರುಗಾಟ ನಡೆಸಿವೆ. ಮೇಳಗಳ ಸಂಖ್ಯೆಯೇನೋ ಹೆಚ್ಚಿದೆ. ಆದರೆ ಅದೇ ಮಟ್ಟದಲ್ಲಿ ಪ್ರೇಕ್ಷಕರ ಸಂಖ್ಯೆ ವೃದ್ಧಿಸಿದೆಯೇ ? ಉತ್ತಮ ಕಲಾವಿದರ ಸಂಖ್ಯೆ ಹೆಚ್ಚಿದೆಯೇ ?

ಸದಭಿರುಚಿಯ ಪ್ರೇಕ್ಷಕರು ಹಾಗೂ ಉತ್ತಮ ಕಲಾವಿದರಿಂದ ಮಾತ್ರ ಯಕ್ಷಗಾನದ ಉಳಿವು ಸಾಧ್ಯ.

ಯಕ್ಷಗಾನವು ಶ್ರೀಮಂತ ಕಲೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಯಕ್ಷಗಾನದಲ್ಲಿ ಕೃಷಿ ಮಾಡಿ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿ ಪಡೆದವರಿದ್ದಾರೆ. ವಿದೇಶಿಯರೂ ಈ ಕಲೆಯತ್ತ ಆಕರ್ಷಿತರಾಗುತ್ತಿದ್ದಾರೆ. ವೇಷಗಾರಿಕೆ, ಮಾತುಗಾರಿಕೆ,ಹಾಡುಗಾರಿಕೆ, ಕುಣಿತ, ಚಂಡೆ ಮದ್ದಲೆಗಳ ವಾದನ, ಇವುಗಳ ಸಂಗಮದಿಂದಾಗಿ ಯಕ್ಷಗಾನವು ಬಹು ಆಕರ್ಷಕವೆನಿಸಿದೆ. ಎಂಥಾ ನೀರಸ ಕಥಾನಕವನ್ನೂ ಯಕ್ಷಗಾನದ ಮೂಲಕ ಆಕರ್ಷಕವೆನ್ನುವಂತೆ ಆಡಿ ತೋರಿಸಬಹುದು. ನಮ್ಮ ಅವಿಭಜಿತ ದ.ಕ. ಜಿಲ್ಲೆಯಲ್ಲಿ ಯಕ್ಷಗಾನವನ್ನೇ ನಂಬಿ ಜೀವನ ನಡೆಸುವ ಹಲವಾರು ಕುಟುಂಬಗಳಿವೆ. ಬೇಸಿಗೆ ಕಾಲ, ಮಳೆಗಾಲವೆಂಬ ಭೇದವಿಲ್ಲದೆ, ವರ್ಷದ ಎಲ್ಲಾ ಕಾಲದಲ್ಲೂ ಇಲ್ಲಿ ಯಕ್ಷಗಾನ ಪ್ರದರ್ಶನಗಳು ನಡೆಯುತ್ತಿರುತ್ತವೆ. ದೂರದ ಬೆಂಗಳೂರು, ಮುಂಬೈ ಮುಂತಾದ ನಗರಗಳಲ್ಲಿಯೂ ಯಕ್ಷಗಾನ ಪ್ರೇಕ್ಷಕರಿದ್ದಾರೆ. ದುಬಾರಿ ಎನ್ನಬಹುದಾದ ಪ್ರವೇಶ ದರ (ಮುಖ್ಯವಾಗಿ ಮಳೆಗಾಲದ ಪ್ರದರ್ಶನಗಳಲ್ಲಿ) ಯಕ್ಷಗಾನಕ್ಕೆ ಹೊಂದಿಕೆಯಾಗದ ನೀರಸ ಪ್ರಸಂಗ, ಮೈಕಾಸುರನ ಕರ್ಕಶ ಧ್ವನಿ, ತುಸು ದೀರ್ಘ ಎನ್ನಬಹುದಾದ ಪ್ರದರ್ಶನ ಸಮಯ, ಪ್ರಸಂಗದ ಮಧ್ಯೆ ಕೆಲವೊಮ್ಮೆ ಅತಿರೇಕವೆನ್ನಬಹುದಾದ ರಾಜಕೀಯ ವಿಷಯದ ಮಾತುಗಳು, ವಿದ್ಯುತ್ ವೈಫಲ್ಯ, ಮಳೆಯ ತೊಂದರೆ ಹೀಗೆ ಹಲವು ಬಾಧೆಗಳ ನಡುವೆಯೂ ಯಕ್ಷಗಾನವು ಜನಾಕರ್ಷಣೆಯನ್ನು ಕಳಕೊಂಡಿಲ್ಲ. ಆದ್ದರಿಂದಲೇ ಯಕ್ಷಗಾನವು ಗಂಡುಕಲೆ ಮಾತ್ರವಲ್ಲ ಗಟ್ಟಿಯಾದ ಕಲೆ. ಈ ಕಲೆಯ ಅಭಿವೃದ್ಧಿಗಾಗಿ, ಇನ್ನಷ್ಟು ಬೆಳವಣಿಗೆಗಾಗಿ ಶಿರಿಯಾರ ಮಂಜು ಅವರಂಥ ಕಲಾವಿದರು ತಯಾರಾಗಬೇಕಾಗಿದೆ.



ತಾನು ನಿರ್ವಹಿಸುತ್ತಿದ್ದ ಬಹುತೇಕ ಪಾತ್ರಗಳ ಹಿನ್ನೆಲೆಗಳನ್ನೂ ಪದ್ಯಗಳನ್ನೂ ಸಂದರ್ಭಗಳನ್ನೂ ಅವರು ಚೆನ್ನಾಗಿ ಅರಿತಿರುತ್ತಿದ್ದರಲ್ಲದೆ ಅದನ್ನು ಅನುಸರಿಸುತ್ತಿದ್ದರು. ಎದುರು ಪಾತ್ರಧಾರಿಯಿಂದಲೂ ಅದನ್ನು ನಿರೀಕ್ಷಿಸುತ್ತಿದ್ದರು. ಒಮ್ಮೆ ಎದುರು ಪಾತ್ರಧಾರಿ ಮರೆತರೂ ಜಾಣತನದಿಂದ ಅದನ್ನು ನೆನಪಿಸಿಕೊಟ್ಟು ಪ್ರದರ್ಶನದ ಸುಗಮ ನಡಿಗೆಗೆ ಅವರು ನೆರವಾಗುತ್ತಿದ್ದರು. ಕೆರೆಮನೆಯ ನಮ್ಮ ತಂಡ ಸಾಲಿಗ್ರಾಮದ ಮೇಳದಲ್ಲಿದ್ದಾಗ ಅವರೂ ಅಲ್ಲಿ ಕಲಾವಿದರಾಗಿದ್ದರು. ಅವರೊಟ್ಟಿಗೆ ನಾವು ಮಾಡಿದ ತಿರುಗಾಟ ಒಂದು ಒಳ್ಳೆಯ ಅನುಭವ. ನನ್ನ ಅಣ್ಣ ಕೆರೆಮನೆ ಮಹಾಬಲಹೆಗಡೆ ಯವರೊಂದಿಗಾಗಲೀ ತಮ್ಮ ಗಜಾನನಹೆಗಡೆಯೊಂದಿಗಾಗಲೀ ನನ್ನೊಂದಿಗಾಗಲೀ ಒಳ್ಳೆಯ ಬಾಂಧವ್ಯ ಹೊಂದಿದ್ದರು. ಚಂದ್ರಹಾಸ ಚರಿತ್ರೆಯಲ್ಲಿ ಅವರ ಚಂದ್ರಹಾಸ ನನ್ನ ಮದನ, ಕೃಷ್ಣಾರ್ಜುನ ಕಾಳಗದಲ್ಲಿ ಅವರ ಅರ್ಜುನ, ನನ್ನ ಕೃಷ್ಣ ಪಾತ್ರಗಳು ಹೆಚ್ಚು ಜನಪ್ರಿಯವಾಗಿದ್ದವು.

ಅವರ ಸಾವು ಆಕಸ್ಮಿಕ ಮತ್ತು ಅವಿಸ್ಮರಣೀಯವಾದುದು. ಮಣಿಪಾಲದ ಗೋಲ್ಡನ್ ಜೂಬಿಲೀ ಭವನದಲ್ಲಿ ಭೀಷ್ಮ ವಿಜಯದ ಪರಶುರಾಮನ ಪಾತ್ರ ಧರಿಸಿಕೊಂಡೇ ರಂಗಸ್ಥಳದಲ್ಲಿ ಸಹ ಕಲಾವಿದನ ತೊಡೆಯ ಮೇಲೆ ಜೀವ ಬಿಟ್ಟರು. ಸಾವು ದುರಂತವೇ ಆದರೂ ಒಬ್ಬ ಕಲಾವಿದ ಬಯಸಬಹುದಾದ ಸಾವು ಅದು. ಎಲ್ಲಾ ಕಲಾವಿದರಿಗೂ ಇಂಥ ಸಾವು ಒದಗಲಾರದು. ಅದಕ್ಕೂ ಪುಣ್ಯ ಮಾಡಿಬರಬೇಕು.